ಉನ್ನತ ಶಿಕ್ಷಣ
ವಿಷನ್-೨೦೨೦

ಕರ್ನಾಟಕ ಜ್ಞಾನ ಆಯೋಗ

(ಕರ್ನಾಟಕ ನಾಲೆಡ್ಜ್ ಕಮಿಷನ್)

ಕರ್ನಾಟಕ ಸರಕಾರ

ಜನವರಿ 2013

ರ್ನಾಟಕ ಸರ್ಕಾರ

ಕರ್ನಾಟಕ ಜ್ಞಾನ ಆಯೋಗ

1345 SR-3 53

ಕರ್ನಾಟಕ ಸರ್ಕಾರ

ಉನ್ನತ ಶಿಕ್ಷಣ ವಿಷನ್ - 2020
ಕುರಿತ ವರದಿ

ಮಂಡಿಸಿದವರು

ಉನ್ನತ ಶಿಕ್ಷಣ ನೀತಿ ಕುರಿತ ಮಿಷನ್ ಗ್ರೂಪ್
ಕರ್ನಾಟಕ ಜ್ಞಾನ ಆಯೋಗ
(ಕರ್ನಾಟಕ ನಾಲೆಡ್ಜ್ ಕಮಿಷನ್)
ಕರ್ನಾಟಕ ಸರಕಾರ

ಜನವರಿ 2013

ಪ್ರಕಟಣೆ
ಕರ್ನಾಟಕ ಜ್ಞಾನ ಆಯೋಗ
(ಕರ್ನಾಟಕ ನಾಲೆಡ್ಜ್ ಕಮಿಷನ್)
ಕರ್ನಾಟಕ ಸರಕಾರ
ನಂ. 219, ಎರಡನೇ ಮಹಡಿ, ವಿಧಾನಸೌಧ
ಡಾ. ಬಿ. ಆರ್. ಅಂಬೇಡ್ಕರ್ ವೀಧಿ
ಬೆಂಗಳೂರು _ 560001
secy.jnanaayoga.in

ಮುದ್ರಣ
ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು

© © Karnataka Jnana Aayoga, Government of Karnataka, January 2013.
This work is licensed under the Creative Commons - For details www.jnanaayoga.in

ಅಧ್ಯಕ್ಷರ ನುಡಿ

ಕರ್ನಾಟಕವನ್ನು ಜ್ಞಾನಾಧಾರಿತ ಸಮಾಜವನ್ನಾಗಿ ಪರಿವರ್ತಿಸುವ ವಿಷನ್‌ನ ಪ್ರಮುಖ ಅಂಶಗಳನ್ನು ಈಡೇರಿಸುವುದು ದೊಡ್ಡ ಸವಾಲಿನ ದಾರಿ ಎನಿಸಿತು. ನಮ್ಮ ಪ್ರಯಾಣ ಈ ದಿಸೆಯಲ್ಲಿ ಆರಂಭವಾಗಿದ್ದು 2008ರಲ್ಲಿ. 12 ವಲಯ ಮತ್ತು ಕೇಂದ್ರ ನೆಲೆಗಳನ್ನು ಗುರುತಿಸಿಕೊಂಡು ಹೊರಟೆವು. ಕಳೆದ ನಾಲ್ಕೂವರೆ ವರ್ಷಗಳಲ್ಲಿ ಆಯೋಗವು 89 ಶಿಫಾರಸ್ಸುಗಳನ್ನು ಮಾಡಿದೆ, 11 ಯೋಜನೆಗಳನ್ನು ಕೈಗೊಂಡಿದೆ, 10 ಸಂಶೋಧನಾ ಅಧ್ಯಯನಗಳನ್ನು ನಡೆಸಿದೆ, 1000 ಸಭೆಗಳನ್ನು ಸಂಘಟಿಸಿದೆ ಹಾಗೂ 3 ಪ್ರಮುಖ ಜನಪ್ರಿಯ ಮತ್ತು ಮಹಾತ್ವಾಕಾಂಕ್ಷೆಯ ಕಾರ್ಯಕ್ರಮಗಳ ಮೂಲಕ 30 ಸಾವಿರ ಮಂದಿ ಭಾಗೀದಾರರನ್ನು ತಲುಪಿದೆ.

ಈ ವರದಿಯು ಆಯೋಗದ ನಾಲ್ಕೂವರೆ ವರ್ಷಗಳ ಕಾರ್ಯದ ಬಗೆಗಿನ ಸ್ಥೂಲ ನೋಟವನ್ನಷ್ಟೇ ನೀಡುತ್ತದೆ. ನಮ್ಮ ಕಾರ್ಯಸಾಧನೆಗೆ ಸ್ಪಂದನಶೀಲ ಭಾಗೀದಾರರು ಅಪಾರ ಪ್ರಮಾಣದಲ್ಲಿ ಕೊಡುಗೆಯನ್ನು ನೀಡಿ ಸಹಕರಿಸಿದರು. ಶಿಫಾರಸ್ಸುಗಳ ಅನುಷ್ಠಾನ ಸಂದರ್ಭದಲ್ಲಿ ವಿವಿಧ ಇಲಾಖೆಗಳ ಪಾಲ್ಗೊಳ್ಳುವಿಕೆ ಮತ್ತು ತೊಡಗಿಸಿಕೊಳ್ಳುವಿಕೆಯಿಂದ ಆಯೋಗವು ತನ್ನ ಗುರಿಯನ್ನು ತಲುಪಲು ಸಾಧ್ಯವಾಯಿತು.

ಮಾನ್ಯ ಮುಖ್ಯಮಂತ್ರಿಗಳು, ಮಾಜಿ ಮುಖ್ಯಮಂತ್ರಿಗಳು, ಮಂತ್ರಿಗಳು, ಸರಕಾರದ ಮುಖ್ಯ ಕಾರ್ಯದರ್ಶಿಗಳು, ವಿವಿಧ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳ ಸಹಕಾರಕ್ಕೆ, ಆಯೋಗದ ಕಾರ್ಯವನ್ನು ವಿಶ್ವಾಸದಿಂದ ನೋಡಿ ಒಪ್ಪಿಕೊಂಡಿದ್ದಕ್ಕೆ ಧನ್ಯವಾದಗಳು. ಜ್ಞಾನಾಧಾರಿತ ಸಮಾಜ ನಿರ್ಮಾಣದತ್ತ ಆಯೋಗದ ನಡಿಗೆ, ಎಲ್ಲ ಕರ್ನಾಟಕದ ಜನರ ನಡಿಗೆ. ಈ ಸಂದರ್ಭದಲ್ಲಿ ಆಯೋಗದ ಸದಸ್ಯರ, ತಜ್ಞರ, ಭಾಗೀದಾರರು, ಆಯೋಗದ ತಂಡದ ಪರಿಶ್ರಮ–ಸಹಕಾರಕ್ಕೆ ಕೃತಜ್ಞತೆಗಳನ್ನು ಅರ್ಪಿಸುವೆ.

ಡಾ. ಕೆ. ಕಸ್ತೂರಿ ರಂಗನ್
ಅಧ್ಯಕ್ಷರು
ಕರ್ನಾಟಕ ಜ್ಞಾನ ಆಯೋಗ
ಕರ್ನಾಟಕ ಸರಕಾರ

ಪ್ರಸ್ತಾವನೆ

ಸಾಮಾನ್ಯವಾಗಿ ಶಿಕ್ಷಣ, ಅದರಲ್ಲೂ ವಿಶೇಷವಾಗಿ ಉನ್ನತ ಶಿಕ್ಷಣ ಇಪ್ಪತ್ತೊಂದನೇ ಶತಮಾನದ ಜ್ಞಾನಾಧಾರಿತ ಸಮಾಜದ ಕೇಂದ್ರ ಸ್ಥಾನವನ್ನು ಅಲಂಕರಿಸಿದೆ. ವ್ಯಕ್ತಿಶಃ ಮತ್ತು ಸಮಾಜವನ್ನೇ ಜ್ಞಾನಾಧಾರಿತ ಸಮಾಜವನ್ನಾಗಿ ಅದು ಪರಿವರ್ತಿಸಲು ಸಜ್ಜಾಗಿದೆ. ಆದ ಕಾರಣ, ವ್ಯಕ್ತಿಯ ಅಥವಾ ರಾಜ್ಯದ ಆಯ್ಕೆಯಾಗಿ ಶಿಕ್ಷಣ ಉಳಿದಿಲ್ಲ. ಬದಲಾಗಿ, ಜ್ಞಾನಾಧಾರಿತ ಆರ್ಥಿಕತೆ ಮತ್ತು ಸಮಾಜವನ್ನು ಅರ್ಥೈಸಿಕೊಳ್ಳಲು ಇರುವ ಅತ್ಯಗತ್ಯ ಸಾಧನವಾಗಿದೆ ಶಿಕ್ಷಣ.

'ಉನ್ನತ ಶಿಕ್ಷಣದ ನೋಟ-2020' ವರದಿಯು ರಾಜ್ಯದ ಹಲವಾರು ಶ್ರೇಷ್ಠ ಶಿಕ್ಷಣ ತಜ್ಞರು, ಗಣ್ಯರು, ಪಾಲುದಾರರು ನಡೆಸಿದ ಸಭೆಗಳ ಮತ್ತು ಚಿಂತನಾ ಗೋಷ್ಠಿಗಳ ಫಲವಾಗಿ ಮೂಡಿಬಂದ ಫಲಿತ. ವರದಿಯು ಮೂರು ಪ್ರಮುಖ ಉದ್ದೇಶಗಳಾದ ವಿಸ್ತರಣೆ-ಸಮತೆ-ಉತ್ಕೃಷ್ಟತೆಯ ಕುರಿತು ಪ್ರಸ್ತಾಪಿಸಿ, 12ನೇ ಪಂಚವಾರ್ಷಿಕ ಯೋಜನೆಯಡಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಸಾಧಿಸಬೇಕಾದ ಗುರಿಗಳಿವು ಎಂದು ಹೇಳಿದೆ. ಹಾಗೆಯೇ ವರದಿಯು ಕರ್ನಾಟಕದಲ್ಲಿನ ಉನ್ನತ ಶಿಕ್ಷಣ ವ್ಯವಸ್ಥೆಯ ಪ್ರಸ್ತುತ ಸಂದರ್ಭದ ಬಗ್ಗೆಯೂ ಉಲ್ಲೇಖಿಸಿ, ಭವಿಷ್ಯದಲ್ಲಿ ಸಾಗಬೇಕಾದ ನೆಲೆ, ಎದುರಿಸಬೇಕಾದ ಸವಾಲುಗಳ ಕುರಿತೂ ಪ್ರಸ್ತಾಪಿಸಿದೆ. ಈ ಸವಾಲುಗಳನ್ನು ಎದುರಿಸಲು ಕರ್ನಾಟಕದ ಶಕ್ತಿಯಾದ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಖ್ಯಾತಿಯ ಉನ್ನತ ಶಿಕ್ಷಣ ಸಂಸ್ಥೆಗಳನ್ನೂ ಬಳಸಿಕೊಳ್ಳಬೇಕು. ವರದಿಯು ಹಲವು ಮೂಲಭೂತ ಕ್ರಮಗಳನ್ನು ಮತ್ತು ಪ್ರಮುಖ ನೀತಿ ನಿರೂಪಣೆಗೆ ಸಂಬಂಧಿಸಿದ ಶಿಫಾರಸ್ಸುಗಳನ್ನು ಅನುಷ್ಠಾನಕ್ಕಾಗಿ ಕರ್ನಾಟಕ ಸರಕಾರದ ಮುಂದಿಟ್ಟಿದೆ.

ವರದಿಯು, ಉನ್ನತ ಶಿಕ್ಷಣ ವ್ಯವಸ್ಥೆಯನ್ನು ವಿದ್ಯಾರ್ಥಿ ಕೇಂದ್ರಿತವಾಗಿ ವಿನ್ಯಾಸ ಮತ್ತು ದೃಷ್ಟಿಕೋನವನ್ನು ಹೊಂದಬೇಕೆಂದು ಪ್ರಸ್ತಾಪಿಸಿದೆ. ಇಲ್ಲಿ ನೀಡಲಾದ ಶಿಫಾರಸ್ಸುಗಳೂ ಆರು ಪ್ರಮುಖ ವಲಯಗಳ ಕುರಿತಾದದ್ದು. ವಿದ್ಯಾರ್ಥಿ; ಬೋಧಕ ವರ್ಗ; ಮೌಲ್ಯಮಾಪನ; ಪಠ್ಯಕ್ರಮ ಮತ್ತು ಶಿಕ್ಷಣ ವಿಧಾನ; ವೃತ್ತಿಪರ ಮತ್ತು ಮುಂದುವರಿಕೆ ಶಿಕ್ಷಣ; ಶಿಕ್ಷಣ ಅಂತಾರಾಷ್ಟ್ರೀಕರಣ ಮತ್ತು ನೀತಿನಿರೂಪಣೆ-ಆಡಳಿತ. ನೀತಿ ನಿರೂಪಣೆಗೆ ಸಂಬಂಧಿಸಿದ ಶಿಫಾರಸ್ಸುಗಳು, ಜ್ಞಾನ ಕೇಂದ್ರಿತ ಸಮಾಜದ ಸವಾಲುಗಳನ್ನು ಎದುರಿಸಲು ಯುವ ಸಮುದಾಯ ಮತ್ತು ಉನ್ನತ ಶಿಕ್ಷಣದ ಪ್ರಮುಖ ಭಾಗೀದಾರರ ಸಬಲೀಕರಣಕ್ಕಾಗಿ ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಆಲೋಚನಾ ಕ್ರಮದಲ್ಲೇ ಬದಲಾವಣೆಯ ಅಗತ್ಯವನ್ನು ನೀತಿ ನಿರೂಪಣೆಗೆ ಸಂಬಂಧಿಸಿದ ಶಿಫಾರಸ್ಸುಗಳು ಉಲ್ಲೇಖಿಸಿವೆ.

ಉನ್ನತ ಶಿಕ್ಷಣ ಸಚಿವರಾದ ಶ್ರೀ ಸಿ.ಟಿ. ರವಿಯವರ ದೂರದೃಷ್ಟಿ ಮತ್ತು ಒಳನೋಟಗಳಿಗಾಗಿ ಧನ್ಯವಾದ ಅರ್ಪಿಸುವೆ. ಹಾಗೆಯೇ ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಶ್ರೀ ಸಿದ್ದಯ್ಯನವರ ನಿರಂತರ ಬೆಂಬಲಕ್ಕೆ ಕೃತಜ್ಞತೆಗಳು. ಈ ವರದಿ ರೂಪುಗೊಳ್ಳಲು ತಮ್ಮ ಕೊಡುಗೆಯನ್ನೂ ನೀಡಿದ ಉನ್ನತ ಶಿಕ್ಷಣದ ಮಿಷನ್ ಗ್ರೂಪ್‌ನ ಅಧ್ಯಕ್ಷರಾದ ಶ್ರೀ ಮೋಹನ್‌ದಾಸ್ ಪೈ ಅವರಿಗೆ ಕೃತಜ್ಞತೆಗಳು. ಇದರೊಂದಿಗೆ ವರದಿ ತಯಾರಿಸುವಲ್ಲಿ ನಿರಂತರ ಸಹಕಾರ ನೀಡಿದ ಮಿಷನ್ ಗ್ರೂಪಿನ ಸಹ ಅಧ್ಯಕ್ಷರಾದ ಪ್ರೊ. ಸುಂದರ್ ಸಾರುಕ್ಕೈ, ಸದಸ್ಯರಾದ ಪ್ರೊ. ಕೆ.ಆರ್.ಎಸ್. ಮೂರ್ತಿ ಮತ್ತು ಪ್ರೊ. ಬಿ.ಕೆ. ಅನಿತಾ ಅವರ ಸಹಕಾರಕ್ಕೆ, ಮಿಷನ್ ಗ್ರೂಪ್‌ನ ಸದಸ್ಯರ ಬೆಂಬಲಕ್ಕೆ ಧನ್ಯವಾದಗಳು. ತಮ್ಮ ಸಂಸ್ಥೆಯ ಸಂಶೋಧನೆಯ ಮಾಹಿತಿಯನ್ನು ವಿನಿಮಯ ಮಾಡಿಕೊಂಡದ್ದಕ್ಕೆ ಮತ್ತು ಮಾಹಿತಿ ವಿಶ್ಲೇಷಣೆಗೆ ತಮ್ಮ ಸಂಸ್ಥೆಯ ಸಲಹೆಗಾರರನ್ನು ಒದಗಿಸಿಕೊಟ್ಟಿದ್ದಕ್ಕೆ ಡಿಲೋಟ್ (Deloitte) ಸಂಸ್ಥೆಯ ಕಾರ್ಯಕಾರಿ ನಿರ್ದೇಶಕ ಶ್ರೀ ಪರಮಶಿವಂನವರಿಗೆ ಧನ್ಯವಾದಗಳು.

ಎನ್‌ಐಎಎಸ್ ಸಂಸ್ಥೆಯ ರೀಸರ್ಚ್ ಫೆಲೊ ಶ್ರೀ ಚೇತನ್ ಸಿಂಗೈ ಮತ್ತು ಡಿಲೋಟ್ ಸಂಸ್ಥೆಯ ಹಿರಿಯ ಸಲಹೆಗಾರ ಶ್ರೀ ಮ್ಯಾಥ್ಯೂ ತಾರಕನ್ ಅವರಿಗೂ ಧನ್ಯವಾದಗಳನ್ನು ಹೇಳಲಿಚ್ಛಿಸುವೆ. ಮಿಷನ್ ಗ್ರೂಪ್‌ನ ಸಮನ್ವಯಕಾರರಾಗಿ ಸಹಕರಿಸಿದ ಡಾ. ಬಿ.ಎಸ್. ಪದ್ಮಾವತಿಯವರಿಗೂ ಧನ್ಯವಾದಗಳು.

ಜನವರಿ 2013

Prof. M.K. Sridhar, Ph.D.
Member Secretary and Executive Director
Karnataka Jnana Aayoga
Government of Karnataka

ಮುನ್ನುಡಿ

ಕರ್ನಾಟಕದ ಉನ್ನತ ಶಿಕ್ಷಣ ಕ್ಷೇತ್ರದ ಕುರಿತಾದ ವಿಷನ್ ಡಾಕ್ಯುಮೆಂಟ್, ಮಿಷನ್ ಗ್ರೂಪ್‌ನ ಸದಸ್ಯರು ಹಲವು ಗಂಟೆಗಳ ಕಾಲ ನಡೆಸಿದ ಉತ್ಕಟ, ಅರ್ಥಪೂರ್ಣ ಚರ್ಚೆಯ ಫಲ. ಈ ಕಾರ್ಯ ಸಾಧನೆಗೆ ತಮ್ಮ ಸಮಯ, ಶ್ರಮ ಮತ್ತು ಚಿಂತನೆಗಳನ್ನು ಹಂಚಿಕೊಂಡ ಸದಸ್ಯರಿಗೆ ಆಭಾರಿ. ಇವರೆಲ್ಲರೂ ವಿವಿಧ ನೆಲೆಗಳಿಂದ ಬಂದವರು ಮತ್ತು ಸಾಕಷ್ಟು ವರ್ಷ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿರುವವರು. ಇವರೆಲ್ಲರ ದೃಷ್ಟಿಕೋನಗಳನ್ನು, ಚಿಂತನೆಯನ್ನು ಒಗ್ಗೂಡಿಸಲು ಮತ್ತು ಶಿಫಾರಸ್ಸುಗಳನ್ನು ಆಯ್ಕೆ ಮಾಡುವುದು ಸವಾಲಾಗಿ ಪರಿಣಮಿಸಿದ್ದು ನಿಜ. ಆದರೂ, ಕ್ಷೇತ್ರದ ಬಗೆಗಿನ ಸದಸ್ಯರ ಬದ್ಧತೆ ಮತ್ತು ಮುಕ್ತಮನಸ್ಸು ಈ ಸವಾಲನ್ನು ಎದುರಿಸಲು ಸಹಕರಿಸಿತು.

ಇಡೀ ವರದಿ ಒಂದೇ ಕೇಂದ್ರ ತತ್ತ್ವವನ್ನು ಹೊಂದಿದೆ. ಅದೆಂದರೆ ಉನ್ನತ ಶಿಕ್ಷಣ ಪ್ರಾಥಮಿಕವಾಗಿ ವಿದ್ಯಾರ್ಥಿ ಕೇಂದ್ರಿತವಾಗಲೇಬೇಕೆಂಬುದು. ವಿದ್ಯಾರ್ಥಿಗಳನ್ನು ವಯಸ್ಕರಾಗಿ ಪರಿಗಣಿಸದೇ, ಆಯ್ಕೆ ಸ್ವಾತಂತ್ರ್ಯವನ್ನು ನೀಡದೇ, ಹೊಣೆಗಾರಿಕೆಯನ್ನು ವಹಿಸದೇ ಮತ್ತು ಬೋಧಕ ವರ್ಗದೊಂದಿಗೆ ಸಹಭಾಗಿತ್ವ ಹೊಂದಲು ಅವಕಾಶ ಕಲ್ಪಿಸದೇ ಇರುವ ಇಂದಿನ ಉನ್ನತ ಶಿಕ್ಷಣದ ಸ್ಥಿತಿ ನಮಗೆಲ್ಲರಿಗೂ ನೋವು ತಂದಿದೆ. ತಮ್ಮಿಚ್ಛೆಯ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಓದಲು ಅವಕಾಶವಿಲ್ಲ ಎನ್ನುವುದರೊಂದಿಗೆ ಸೀಮಿತ ಕೋರ್ಸ್‌ಗಳಲ್ಲೇ ಆಯ್ಕೆಯ ಅನಿವಾರ್ಯತೆಯನ್ನು ಸೃಷ್ಟಿಸಿ, ಅದರಲ್ಲಿ ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಿದ್ದನ್ನು ಮೌಲ್ಯಮಾಪನ ಮಾಡುತ್ತಿರುವುದು ಪ್ರಸ್ತುತ ಸ್ಥಿತಿ. ಬದಲಾಗುತ್ತಿರುವ ಜಗತ್ತಿನಲ್ಲಿ ಇವು ಬಹಳ ಪ್ರಮುಖವಾಗಿ ಚರ್ಚೆಗೆ ಒಳಗಾಗಬೇಕಾದವು. ಜಗತ್ತಿನಾದ್ಯಂತ ಶಿಕ್ಷಣ ಕ್ಷೇತ್ರವು ವಿದ್ಯಾರ್ಥಿಗಳ ಅವಶ್ಯಕತೆಗಳನ್ನು ಒಳಗೊಂಡು ಸಂಪೂರ್ಣ ಬದಲಾಗಿದೆ. ಕರ್ನಾಟಕವು ಈ ನೆಲೆಯಲ್ಲಿ ಹಿಂದುಳಿಯುವಂತಿಲ್ಲ, ಒಂದುವೇಳೆ ಹಿಂದುಳಿದರೆ, ಅದರಿಂದ ಮುಂದಿನ ತಲೆಮಾರು ಬಹಳ ದೊಡ್ಡ ನಷ್ಟವನ್ನು ಅನುಭವಿಸಬೇಕಾದೀತು.

ಉತ್ಪನ್ನ ಮತ್ತು ಸೇವೆಗಳಿಗೆ ಒಂದೇ ಮಾರುಕಟ್ಟೆಯನ್ನು ಸೃಷ್ಟಿಸುವ ಮೂಲಕ ಜಗತ್ತೂ ಸಹ ಕ್ಷಿಪ್ರಗತಿಯಲ್ಲಿ ಜಾಗತೀಕರಣದತ್ತ ಚಲಿಸುತ್ತಿದೆ. ಪ್ರತಿ ರಾಷ್ಟ್ರಗಳ ಉದ್ಯಮ ಕ್ಷೇತ್ರದಲ್ಲೂ ಸ್ಪರ್ಧೆ ಹೆಚ್ಚಿದೆ. ಜ್ಞಾನಾಧಾರಿತ ಆರ್ಥಿಕತೆ ಇಡೀ ಆರ್ಥಿಕ ವಿದ್ಯಮಾನಗಳನ್ನು ಆಳಲು ಹೊರಟಿದೆ. ಜನರ ಶಿಕ್ಷಣದ ಮಟ್ಟವನ್ನು, ಅವರ ಹೊಸತನ ಮತ್ತು ಹೊಸ ಸೃಷ್ಟಿ ಹಾಗೂ ಜಾಗತೀಕರಣದ ಸಾಧ್ಯತೆಗಳನ್ನು ತಮ್ಮ ಅಭಿವೃದ್ಧಿಗೆ ಬಳಸಿಕೊಳ್ಳುವ ಶಕ್ತಿಯನ್ನು ಎಲ್ಲ ದೇಶದ ಸ್ಪರ್ಧಾತ್ಮಕ ಸಾಮರ್ಥ್ಯ ಅವಲಂಬಿಸಿರುತ್ತದೆ. ಇಂಥ ಸನ್ನಿವೇಶದಲ್ಲಿ, ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸಲು ಅನುಕೂಲವಾಗುವಂತೆ ನಮ್ಮ ವಿದ್ಯಾರ್ಥಿಗಳ ಬೌದ್ಧಿಕ ಸಾಮರ್ಥ್ಯವನ್ನು ಹೆಚ್ಚಿಸಬೇಕಿದೆ, ಸಮಸ್ಯೆ ಪರಿಹರಿಸುವ ಸಾಮರ್ಥ್ಯವನ್ನು ಅಧಿಕಗೊಳಿಸಬೇಕಿದೆ ಹಾಗೂ ಇದಕ್ಕೆಲ್ಲಾ ಕೇಂದ್ರವಾಗಿ ನಮ್ಮ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲೇಬೇಕಾಗಿದೆ.

ಈ ವರದಿಯಲ್ಲಿ ಪ್ರಸ್ತಾಪಿಸಲಾದ ಅಂಶಗಳ ಗುರಿಸಾಧನೆಗೆ ಶೈಕ್ಷಣಿಕ ಕ್ರಾಂತಿ ಸಾಧ್ಯವಾಗಬೇಕು. ಉನ್ನತ ಶಿಕ್ಷಣ ಕ್ಷೇತ್ರದ ಒಟ್ಟು ದಾಖಲೀಕರಣ ಅನುಪಾತದಲ್ಲಿ ಏರಿಕೆ, ಮಹಿಳೆಯರು ಮತ್ತು ಹಿಂದುಳಿದ ವರ್ಗಗಳ ಭಾಗವಹಿಸುವಿಕೆಯಲ್ಲಿ ಹೆಚ್ಚಳ, ಹೆಚ್ಚು ಸ್ವಾಯತ್ತೆ ಮತ್ತು ಆರ್ಥಿಕ ಸಹಕಾರದೊಂದಿಗೆ ಉನ್ನತ ಶಿಕ್ಷಣ ಸಂಸ್ಥೆಗಳ ಸಬಲೀಕರಣ, ಇಂಟರ್‌ನೆಟ್‌ನ ಪ್ರಗತಿಯ ಹಿನ್ನೆಲೆ ಮತ್ತು ಮಾಹಿತಿ ಸ್ಫೋಟದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳನ್ನೂ ಒಳಗೊಂಡಂತೆ ಪಾಲುದಾರರಲ್ಲಿ ಉತ್ತರದಾಯಿತ್ವ ಹೆಚ್ಚುತ್ತಿರುವ ನೆಲೆಗೆ ಪೂರಕವಾಗಿ ಶಿಕ್ಷಣದಲ್ಲಿ ಬಳಸುತ್ತಿರುವ ವಿಧಾನಗಳ ಬದಲಾವಣೆ ಸಾಧ್ಯವಾಗಬೇಕು. ಈ ವರದಿಯು ಗಾತ್ರದಲ್ಲಿ ಚಿಕ್ಕದು, ಆದರೆ ಸಾಗುವ ದಿಸೆಯಲ್ಲಿ ಮಹತ್ವದ್ದು ಎಂಬುದು ನಮ್ಮ ನಂಬಿಕೆ.

ಉನ್ನತ ಶಿಕ್ಷಣ ಕ್ಷೇತ್ರದ ಬಗೆಗಿನ ಹಲವು ವರದಿಗಳು ಇರಬಹುದು. ಆದರೆ ಈ ವರದಿಯ ಉದ್ದೇಶ ಸ್ಪಷ್ಟ ಮತ್ತು ನಿಖರ. ಅದೆಂದರೆ ಸರಕಾರದಿಂದ ಅನುಷ್ಠಾನಗೊಳಿಸಲು ಸಾಧ್ಯವಾಗಬಹುದಾದ ಸ್ಪಷ್ಟ ಮತ್ತು ಕಾರ್ಯಸಾಧ್ಯವಾಗುವ ಸಲಹೆಗಳನ್ನು ನೀಡುವಂಥದ್ದು. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕವು ಅತ್ಯುನ್ನತ ಮಟ್ಟವನ್ನು ತಲುಪಲು ನಾವು ಸ್ಪಷ್ಟ ಗುರಿಗಳನ್ನು ಮತ್ತು ಶಿಫಾರಸ್ಸುಗಳನ್ನು ಈ ವರದಿಯಲ್ಲಿ ಪ್ರಸ್ತಾಪಿಸಿದ್ದೇವೆ. ರಾಜ್ಯ ಸರಕಾರವು ಈ ವರದಿಯನ್ನು ಗಂಭೀರವಾಗಿ ಪರಿಗಣಿಸುತ್ತಲ್ಲದೇ, ಇಲ್ಲಿಯ ಶಿಫಾರಸ್ಸುಗಳನ್ನು ತ್ವರಿತಗತಿಯಲ್ಲಿ ಅನುಷ್ಠಾನಿಸಲು ಮುಂದಾಗುತ್ತದೆ ಎಂಬುದು ನಮ್ಮ ವಿಶ್ವಾಸ. ವಿದ್ಯಾರ್ಥಿಗಳಿಗೆ ಆಯ್ಕೆ ಸ್ವಾತಂತ್ರ್ಯವನ್ನು ನೀಡುವ ನೆಲೆಯಲ್ಲಿ ಕರ್ನಾಟಕಕ್ಕೆ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಉಜ್ವಲ ಭವಿಷ್ಯ ಸಿಗಲಿ ಎಂದು ಹಾರೈಸುತ್ತೇವೆ.

ಟಿ.ವಿ. ಮೋಹನ್‌ದಾಸ್ ಪೈ
ಅಧ್ಯಕ್ಷರು, ಉನ್ನತ ಶಿಕ್ಷಣ ಕುರಿತಾದ ಮಿಷನ್ ಗ್ರೂಪ್
ಕರ್ನಾಟಕ ಜ್ಞಾನ ಆಯೋಗ

ಪ್ರೊ. ಸುಂದರ್ ಸಾರುಕ್ಕೈ
ನಿರ್ದೇಶಕರು
ಮಣಿಪಾಲ್ ಸೆಂಟರ್ ಫಾರ್ ಫಿಲಾಸಫಿ ಆ್ಯಂಡ್ ಹ್ಯೂಮಾನಿಟೀಸ್
ಮಣಿಪಾಲ್ ವಿಶ್ವವಿದ್ಯಾಲಯ, ಮಣಿಪಾಲ

ಮಿಷನ್ ಗ್ರೂಪ್ ವಿವರ

ಅಧ್ಯಕ್ಷರು

ಟಿ.ವಿ. ಮೋಹನದಾಸ್ ಪೈ
ಅಧ್ಯಕ್ಷರು
ಎಂಇಎಂಜಿ ಇಂಟರ್‌ನ್ಯಾಷನಲ್ ಇಂಡಿಯಾ ಲಿ.
ಬೆಂಗಳೂರು

ಸಹ ಅಧ್ಯಕ್ಷರು

ಪ್ರೊ. ಸುಂದರ್ ಸಾರುಕ್ಕೈ
ನಿರ್ದೇಶಕರು
ಮಣಿಪಾಲ್ ಸೆಂಟರ್ ಫಾರ್ ಫಿಲಾಸಫಿ & ಹ್ಯೂಮಾನಿಟೀಸ್
ಮಣಿಪಾಲ್ ವಿಶ್ವವಿದ್ಯಾಲಯ
ಮಣಿಪಾಲ

ಸದಸ್ಯರು

ಪ್ರಧಾನ ಕಾರ್ಯದರ್ಶಿಗಳು
ಉನ್ನತ ಶಿಕ್ಷಣ ಇಲಾಖೆ
ಕರ್ನಾಟಕ ಸರಕಾರ

ಕಾರ್ಯಕಾರಿ ನಿರ್ದೇಶಕರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿ
ಕರ್ನಾಟಕ ಸರಕಾರ

ಪ್ರೊ. ಕೆ.ಆರ್.ಎಸ್. ಮೂರ್ತಿ
ಸದಸ್ಯರು, ಕರ್ನಾಟಕ ಜ್ಞಾನ ಆಯೋಗ
ಮಾಜಿ ನಿರ್ದೇಶಕರು
ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್
ಬೆಂಗಳೂರು

ಪ್ರೊ. ಎಚ್.ಎ. ರಂಗನಾಥ್
ನಿರ್ದೇಶಕರು
ನ್ಯಾಷನಲ್ ಅಸೆಸ್‌ಮೆಂಟ್ & ಅಕ್ರಿಡಿಟೇಷನ್ ಕೌನ್ಸಿಲ್
ಬೆಂಗಳೂರು

ಪ್ರೊ. ಮೀನಾ ರಾಜೀವ್ ಚಂದಾವರಕರ್
ಉಪಕುಲಪತಿಗಳು
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ
ಬಿಜಾಪುರ

ಪ್ರೊ. ಅನಿತಾ ಕುರುಪ್
ಪ್ರೊಫೆಸರ್
ಸ್ಕೂಲ್ ಆಫ್ ಸೋಶಿಯಲ್ ಸೈನ್ಸಸ್
ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸಡ್ ಸ್ಟಡೀಸ್
ಬೆಂಗಳೂರು

ಪ್ರೊ. ಶಿವಶಂಕರ ಮೂರ್ತಿ ಟಿ.ಸಿ.
ಉಪಕುಲಪತಿಗಳು
ಮಂಗಳೂರು ವಿಶ್ವವಿದ್ಯಾಲಯ
ಮಂಗಳ ಗಂಗೋತ್ರಿ
ಮಂಗಳೂರು

ಡಾ. ಶ್ರೀನಿವಾಸ್ ಎಸ್. ಬಲ್ಲಿ
ಪ್ರೊಫೆಸರ್ ಆಫ್ ಮೆಕ್ಯಾನಿಕಲ್ ಇಂಜಿನಿಯರಿಂಗ್
ಹೆಡ್ ಟ್ರೈನಿಂಗ್ & ಪ್ಲೇಸ್‌ಮೆಂಟ್ ಸೆಲ್
ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು
ಬಾಗಲಕೋಟೆ

ಡಾ.ಎ.ಆರ್. ಕೊಪ್ಪಳಕರ್
ಪ್ರಾಂಶುಪಾಲರು
ಎಚ್ ಕೆ ಇ ಪದವಿ ಕಾಲೇಜು
ಚಿತ್ತಾಪುರ, ಗುಲ್ಬರ್ಗ

ಡಾ.ಮಾನಸ ನಾಗಭೂಷಣಂ
ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ & ಲೀಡ್ ರೀಸರ್ಚರ್
ಅನಲೈಸ್ ರೀಸರ್ಚ್, ಬೆಂಗಳೂರು

ಸಂಚಾಲಕರು

ಡಾ. ಪದ್ಮಾವತಿ ಬಿ. ಎಸ್.
ಸೀನಿಯರ್ ರೀಸರ್ಚ್ ಅಸೋಸಿಯೇಟ್
ಕರ್ನಾಟಕ ಜ್ಞಾನ ಆಯೋಗ

ಪರಿವಿಡಿ

ಅಧ್ಯಕ್ಷರ ನುಡಿ	iii
ಪ್ರಸ್ತಾವನೆ	iv
ಮುನ್ನುಡಿ	v
ಮಿಷನ್ ಗ್ರೂಪ್ ವಿವರ	vi-vii
ಪರಿವಿಡಿ	viii
ಸಾರಾಂಶ	ix-xii
ಭಾರತ ಮತ್ತು ಕರ್ನಾಟಕದಲ್ಲಿ ಉನ್ನತ ಶಿಕ್ಷಣ	1–7
ಕರ್ನಾಟಕದ ಉನ್ನತ ಶಿಕ್ಷಣಕ್ಕೊಂದು ದೂರದೃಷ್ಟಿ	8–14
ಕೆಲವು ಕ್ರಮಗಳು ಮತ್ತು ನೀತಿ ಶಿಫಾರಸ್ಸುಗಳು	14–34

ಸಾರಾಂಶ

ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಧಿಸಿದಂತೆಯೇ ಉನ್ನತ ಶಿಕ್ಷಣ ಕ್ಷೇತ್ರದಲ್ಲೂ ಮುಂಚೂಣಿಯಲ್ಲಿ ನಿಲ್ಲುವ ಎಲ್ಲಾ ಸಾಮರ್ಥ್ಯ ಕರ್ನಾಟಕ ಹೊಂದಿದೆ. ಇದನ್ನು ಗಮನದಲ್ಲಿಟ್ಟುಕೊಂಡೇ ಈ ದೂರದೃಷ್ಟಿಯುಳ್ಳ ವರದಿ (Vision Document) ಉದ್ದೇಶಿತ ಗುರಿ ಸಾಧನೆಗೆ ಕೆಲವು ಉಪಕ್ರಮಗಳ ಸಲಹೆ ಮತ್ತು ನೀತಿ ಶಿಫಾರಸ್ಸುಗಳನ್ನು ಮಾಡಿದೆ. ಈ ನಿಟ್ಟಿನಲ್ಲಿ ಯಶಸ್ವಿಯಾಗಲು ರಾಜ್ಯ ಸರಕಾರ, ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕವನ್ನು ಭಾರತದ ಮಟ್ಟದಲ್ಲಿ ಅತ್ಯುತ್ತಮ ನೆಲೆಗೆ ಕೊಂಡೊಯ್ಯದರಷ್ಟೇ ಸಾಲದು. ಕರ್ನಾಟಕಕ್ಕೆ ಹೋಲಿಸಬಹುದಾದಂತಹ ಗಾತ್ರ/ವ್ಯವಸ್ಥೆಯುಳ್ಳ ದೇಶಗಳೊಂದಿಗೆ ಸ್ಪರ್ಧಿಸುವಂತೆ ಸಶಕ್ತಗೊಳಿಸಬೇಕಿದೆ. ಅದಕ್ಕಾಗಿ, ಕರ್ನಾಟಕವು ಜ್ಞಾನಾಧಾರಿತ ಸಮಾಜವನ್ನಾಗಿ ರೂಪುಗೊಳಿಸಬೇಕು. 'ಜಾಗತಿಕ ಮಟ್ಟದಲ್ಲಿ ಹೋಲಿಕೆಯಾಗುವಂಥ, ಹೆಚ್ಚು ಆಯ್ಕೆಯ ಅವಕಾಶವಿರುವ, ಸಾರ್ವತ್ರಿಕತೆ ಮತ್ತು ಸಮತೆಯ ಲಭ್ಯತೆ, ನಮ್ಯತೆ ಮತ್ತು ಅತ್ಯುತ್ತಮ ಗುಣಮಟ್ಟವನ್ನು ಹೊಂದಿರುವ ಜ್ಞಾನಾಧಾರಿತ ಸಮಾಜವನ್ನಾಗಿ ಮತ್ತು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಉತ್ಕೃಷ್ಟ ಕೇಂದ್ರವನ್ನಾಗಿ ಕರ್ನಾಟಕವು ಪರಿವರ್ತಿತವಾಗಬೇಕು. ಅಂಥ ಶೈಕ್ಷಣಿಕ ಪರಿಸರವು ಸೃಜನಶೀಲತೆ, ಉದ್ಯಮಶೀಲ ಸ್ಫೂರ್ತಿ ಹಾಗೂ ಜವಾಬ್ದಾರಿಯುತ ನಾಗರಿಕತ್ವವನ್ನು ಪ್ರೋತ್ಸಾಹಿಸುತ್ತದೆ' ಎಂಬ ಹೇಳಿಕೆಯ ನೆಲೆಯಲ್ಲಿ ಈ ವರದಿಯು ಕೆಲವು ಉದ್ದೇಶಗಳನ್ನು ಮತ್ತು ತೀರ್ಮಾನಗಳನ್ನು ವಿಸ್ತೃತವಾಗಿ ಚರ್ಚಿಸಿದೆ.

ಬೇರೆ ಮಾತಿನಲ್ಲಿ ಹೇಳುವುದಾದರೆ, 'ಉನ್ನತ ಶಿಕ್ಷಣ ವಿಷನ್ – 2020' ವರದಿಯು, ಕರ್ನಾಟಕವನ್ನು ಜ್ಞಾನಾಧಾರಿತ ಸಮಾಜವನ್ನಾಗಿ ಮಾರ್ಪಡಿಸುವ ಪ್ರಯತ್ನಕ್ಕೆ ಪ್ರಮುಖ ತಂತ್ರವಾಗಿ ಉನ್ನತ ಶಿಕ್ಷಣ ಕ್ಷೇತ್ರದ ಸುಧಾರಣೆಗೆ ಕೆಲವು ಅಗತ್ಯ ಕ್ರಮ ಮತ್ತು ಸೂಚನೆಗಳನ್ನು ಸಾಂದರ್ಭಿಕವಾಗಿ ಉಲ್ಲೇಖಿಸಿದೆ. ವರದಿಯು ಅತ್ಯಂತ ಪ್ರಮುಖವಾಗಿ ಗಮನಿಸಿರುವ ಸಂಗತಿಯೆಂದರೆ, ಶಿಕ್ಷಣ ಕ್ಷೇತ್ರದಲ್ಲಿ ಸಾಮಾನ್ಯ ಶಿಕ್ಷಣ ಮತ್ತು ಅದರಲ್ಲೂ ಉನ್ನತ ಶಿಕ್ಷಣ ಕ್ಷೇತ್ರದ ಸುಧಾರಣೆ ತೀರಾ ಅಗತ್ಯವಿದೆ ಹಾಗೂ ಸ್ಪಷ್ಟ ಮಾರ್ಗದರ್ಶನ ಅವಶ್ಯವಿದೆ ಎಂಬುದು. ಸಮತೆ, ವಿಸ್ತರಣೆ ಮತ್ತು ಉತ್ಕೃಷ್ಟತೆ ಎಂಬ '3ಇ' ಮಾದರಿಯನ್ನು ಅನುಸರಿಸಬೇಕು ಎಂದು ಸ್ಪಷ್ಟವಾಗಿ ಹೇಳಿರುವ ವರದಿಯು, ಈ ಮೂಲಕ ದೇಶದ 12ನೇ ಪಂಚವಾರ್ಷಿಕ ಯೋಜನೆಯಲ್ಲಿ ನಿಗದಿಪಡಿಸಿದ ಗುರಿಯನ್ನು ತಲುಪಲು ಸಾಧ್ಯ ಎಂದು ಹೇಳಿದೆ.

ಈ ವಿಷನ್ ವರದಿ (Vision Document)ಯು ಉನ್ನತ ಶಿಕ್ಷಣದ ಒಟ್ಟು ದಾಖಲೀಕರಣ ಅನುಪಾತವನ್ನು ಶೇ. 18.1 ರಿಂದ 35ಕ್ಕೆ ಏರಿಸಬೇಕು. ಅಂದರೆ ಈಗಿರುವ 12,60,038 (2012–13) ವಿದ್ಯಾರ್ಥಿಗಳ ಸಂಖ್ಯೆ 2020 ರೊಳಗೆ 22,58,000ಕ್ಕೆ ಹೆಚ್ಚಿಸಬೇಕು. ಹೀಗೆ ದಾಖಲೀಕರಣ ಅನುಪಾತ ಹೆಚ್ಚಬೇಕೆಂದರೆ ಸಮಾಜದ ಎಲ್ಲ ವರ್ಗದವರಿಗೂ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಸಮತೆ ಮತ್ತು ಸಾರ್ವತ್ರಿಕ ಅವಕಾಶವನ್ನು ಕಲ್ಪಿಸಬೇಕು. ಬರಿದೇ ಅವಕಾಶ ಕಲ್ಪಿಸುವುದಷ್ಟೇ ಅಲ್ಲ, ಗುಣಮಟ್ಟದ ಶಿಕ್ಷಣ ಪೂರೈಸಬೇಕು. ಈ ದಿಸೆಯಲ್ಲಿ ಉನ್ನತ ಶಿಕ್ಷಣ ಕ್ಷೇತ್ರದ ಪ್ರಸ್ತುತ ಸ್ಥಿತಿಯನ್ನು ಪರಿಶೀಲಿಸಿರುವ ವರದಿಯು, ದಾಖಲೀಕರಣದಲ್ಲಿ ಹೆಚ್ಚಳ, ಸಮತೆ ಮತ್ತು ಉತ್ಕೃಷ್ಟತೆಯ ಭರವಸೆಯನ್ನು ನೀಡುವುದಲ್ಲದೇ, ಸೂಕ್ತ ನೀತಿ ಶಿಫಾರಸ್ಸುಗಳನ್ನೂ ಜಾರಿಗೊಳಿಸಲು ಹೇಳಿದೆ. ಉಪಕ್ರಮಗಳು ಕಾರ್ಯ ಯೋಜನೆಯನ್ನು ರೂಪಿಸಿದರೆ, ನೀತಿ ಶಿಫಾರಸ್ಸುಗಳು ರಾಜ್ಯ ಸರಕಾರದ ಮಧ್ಯಪ್ರವೇಶ–ಸಹಕಾರದ ಅಗತ್ಯವನ್ನು ಪ್ರತಿಪಾದಿಸುತ್ತವೆ. ಒಟ್ಟಿನಲ್ಲಿ, ಕರ್ನಾಟಕವನ್ನು ಜ್ಞಾನಾಧಾರಿತ ಸಮಾಜವನ್ನಾಗಿ ಮತ್ತು ಉನ್ನತ ಶಿಕ್ಷಣ ಕ್ಷೇತ್ರದ ಉತ್ಕೃಷ್ಟ ಕೇಂದ್ರವನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ವಿಶಾಲ ವ್ಯಾಪ್ತಿಯುಳ್ಳ ಉದ್ದೇಶ–ಗುರಿಗಳನ್ನು ಮತ್ತು ಕೈಗೊಳ್ಳಬೇಕಾದ ಕ್ರಮಗಳನ್ನು ಈ ವರದಿಯು ವಿವರಿಸಿದೆ.

ಮೇಲೆ ಉಲ್ಲೇಖಿಸಿದ ಸಂದರ್ಭದಲ್ಲಿ, ಜ್ಞಾನಾಧಾರಿತ ಸಮಾಜ ಮತ್ತು ಉನ್ನತ ಶಿಕ್ಷಣ ಕ್ಷೇತ್ರ ಪರಸ್ಪರ ಅತ್ಯಂತ ಸಮರ್ಪಕ, ಸ್ಪಷ್ಟ ಮತ್ತು ಪರಿಣಾಮಕಾರಿ ಸಂಬಂಧವನ್ನು ಹೊಂದಿರಬೇಕು. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ

ಕರ್ನಾಟಕವನ್ನು ಸಶಕ್ತಗೊಳಿಸಿ ಗುರಿ ಸಾಧಿಸಬೇಕಾದರೆ ಈ ಕೆಳಗಿನ ಉದ್ದೇಶಗಳನ್ನು ಪೂರೈಸಬೇಕು. ಅವುಗಳೆಂದರೆ :

ಸಾಮಾಜಿಕ–ಆರ್ಥಿಕವಾಗಿ ಹಿಂದುಳಿದ ವರ್ಗಗಳು, ಮಹಿಳೆಯರು ಮತ್ತು ಬೇರೆ ಬೇರೆ ರೀತಿಯಲ್ಲಿ ಶೋಷಣೆಗೊಳಗಾದ ಅಥವಾ ನ್ಯೂನ್ಯತೆಗಳಿಂದ ಬಳಲುತ್ತಿರುವ ಅರ್ಹ ವ್ಯಕ್ತಿಗಳಿಗೆ ಉತ್ತೇಜನ ನೀಡುವ ಮೂಲಕ ಉನ್ನತ ಶಿಕ್ಷಣ ಕ್ಷೇತ್ರದಲ್ಲಿರುವ ಲೋಪದೋಷಗಳನ್ನು ಹೋಗಲಾಡಿಸಿ ಎಲ್ಲರಿಗೂ ಉನ್ನತ ಶಿಕ್ಷಣ ಪಡೆಯಲು ಅನುಕೂಲವಾಗುವ ಅವಕಾಶ ಒದಗಿಸಬೇಕು.

- ಕಾಲೇಜು ಮತ್ತು ವಿಶ್ವ ವಿದ್ಯಾಲಯಗಳಲ್ಲಿ ಪ್ರಾಯೋಜಕತ್ವದ ಅಭಿವೃದ್ಧಿಗೆ ಬೆಂಬಲ ಹೆಚ್ಚಿಸುವ ನಿಟ್ಟಿನಲ್ಲಿ ಶಿಕ್ಷಣ ಮತ್ತು ಸಂಶೋಧನೆ ಪ್ರತಿಭಾವಂತರಿಗೆ ಉದ್ಯೋಗಾವಕಾಶ ನೀಡಬೇಕು.
- ಪರಿಣಾಮಕಾರಿ ಶಿಕ್ಷಣ ಮತ್ತು ಸೃಜನಶೀಲ ಮೌಲ್ಯಮಾಪನ, ಅವಶ್ಯಕವಾದ ಪಠ್ಯಕ್ರಮ ಮತ್ತು ವೈಜ್ಞಾನಿಕ ಶಿಕ್ಷಣ ವಿಧಾನ ಕ್ರಮ ಮತ್ತು ಎಲ್ಲಾ ಸುಧಾರಣೆಗಳು ವಿದ್ಯಾರ್ಥಿ ಕೇಂದ್ರೀತವಾಗಿ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು.
- ಉನ್ನತ ಶಿಕ್ಷಣಕ್ಕೆ ಸಾಂಸ್ಥಿಕ ತಳಹದಿಯನ್ನು ನೀಡಲು ಸಾಮಾನ್ಯ ಶಿಕ್ಷಣವನ್ನು ಉನ್ನತ ಶಿಕ್ಷಣವನ್ನಾಗಿ ಪರಿವರ್ತಿಸಬೇಕು ಮತ್ತು ಹೆಚ್ಚುವರಿ ಸಾಮರ್ಥ್ಯವನ್ನು ಸೃಷ್ಟಿಸಬೇಕು, ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಹಾಗೂ ನೂತನವಾಗಿ ಸ್ಥಾಪನೆಯಾದ ಶಿಕ್ಷಣ ಸಂಸ್ಥೆಗಳಲ್ಲಿ ವೈವಿಧ್ಯತೆಯನ್ನು ತರಬೇಕು.
- ವಿದೇಶಿ ಸರ್ಕಾರ/ಸಂಸ್ಥೆಗಳು ಮತ್ತು ಪ್ರಾದೇಶಿಕ ಸಂಶೋಧನಾ ಸಂಸ್ಥೆಗಳ ಸಹಭಾಗಿತ್ವ ದೊಂದಿಗೆ ಉನ್ನತ ಶಿಕ್ಷಣವನ್ನು ಅಂತರರಾಷ್ಟ್ರೀಯ ಮಟ್ಟಕ್ಕೇರಿಸಬೇಕು. ಅದರಲ್ಲೂ ಮುಖ್ಯವಾಗಿ ವಿಶ್ವದಲ್ಲಿ ಉನ್ನತ ಶಿಕ್ಷಣದಲ್ಲಿ ಪಾರಮ್ಯ ಹೊಂದಿರುವ ಏಷ್ಯಾ ಮತ್ತು ಆಫ್ರಿಕಾ ದೇಶಗಳ ಸಹಭಾಗಿತ್ವಕ್ಕೆ ರಾಜ್ಯವು ಹೆಚ್ಚಿನ ಒತ್ತು ನೀಡಬೇಕು.
- ರಾಜ್ಯದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸ್ವಾಯತ್ತೆ, ಸಂಶೋಧನೆ ಮತ್ತು ಶೈಕ್ಷಣಿಕ ಸುಧಾರಣೆಗಳಿಗೆ ಉತ್ತೇಜನ ನೀಡಬೇಕು.
- ಸಾರ್ವಜನಿಕ, ಸಾರ್ವಜನಿಕ – ಖಾಸಗಿ ಮತ್ತು ಖಾಸಗಿ ಕ್ಷೇತ್ರ ಸೇರಿದಂತೆ ಎಲ್ಲಾ ಮಾದರಿಗಳು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಪಾಲ್ಗೊಳ್ಳುವಂತೆ ಅವಕಾಶ ಕಲ್ಪಿಸಬೇಕು.
- ಅಂತರ್ ವಿಭಾಗಗಳು ಮತ್ತು ಬಹು ವಿಭಾಗಗಳ ಅಧ್ಯಯನಕ್ಕೆ ಪ್ರೋತ್ಸಾಹ ನೀಡಬೇಕು.

ಮೇಲಿನ ಅಂಶಗಳನ್ನು ಒಳಗೊಂಡ ಉನ್ನತ ಶಿಕ್ಷಣವು ತನ್ನ ಗುರಿಯನ್ನು ಸಾಧಿಸಬೇಕಾದರೆ 3–ಇ ಅಂಶಗಳ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು ಎಂದು ಈ ವರದಿ ಸಲಹೆ ನೀಡುತ್ತದೆ. ಆ 3–ಇಗಳೆಂದರೆ 'ವಿಸ್ತರಣೆ, ವಿಸ್ತರಣೆ ಮತ್ತು ಉತ್ಕೃಷ್ಟತೆ. ವಿಸ್ತರಣೆ ಮತ್ತು ಉತ್ಕೃಷ್ಟತೆ ಒತ್ತು ನೀಡಿ ಪ್ರವೇಶಾವಕಾಶ ಎಂಬ ಉದ್ದೇಶವನ್ನು ಖಾತರಿಪಡಿಸಿಕೊಂಡು ವಿದ್ಯಾರ್ಥಿಗಳ ಪ್ರವೇಶದ ಪ್ರಮಾಣವನ್ನು ಹೆಚ್ಚಿಸಬೇಕು. ನಿರ್ದಿಷ್ಟ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ಕಾರ್ಯತಂತ್ರ ಹಾಗೂ ಸ್ಪಷ್ಟ ನೀತಿಯ ಮೂಲಕ ಕರ್ನಾಟಕದಲ್ಲಿ ಸರ್ಕಾರ ವಹಿಸಬೇಕಾದ ಪಾತ್ರದ ಬಗ್ಗೆಯೂ ವರದಿ ಸಲಹೆಗಳನ್ನು ನೀಡಿದೆ. ಕರ್ನಾಟಕದಲ್ಲಿ ಉನ್ನತ ಶಿಕ್ಷಣ ವ್ಯವಸ್ಥೆಯ ಕಾರ್ಯತಂತ್ರವನ್ನು ಆರು ವಿಭಾಗಗಳಲ್ಲಿ ನೀಡಲಾಗಿದೆ:

1. ವಿದ್ಯಾರ್ಥಿ ಕೇಂದ್ರಿತ

2. ಬೋಧಕ ಸಂಬಂಧಿ

3. ಪಠ್ಯಕ್ರಮ

4. ವೈಜ್ಞಾನಿಕ ಶಿಕ್ಷಣ ವಿಧಾನ ಮತ್ತು ಮೌಲ್ಯಮಾಪನ

5. ಆಡಳಿತ/ಆಡಳಿತ ನಿರ್ವಹಣೆ/ಸೇವೆ

6. ವೃತ್ತಿಪರ ಶಿಕ್ಷಣ/ಮುಂದುವರಿಕೆ ಶಿಕ್ಷಣ (ಆಜೀವ ಶಿಕ್ಷಣ)

7. ಅಂತಾರಾಷ್ಟ್ರೀಕರಣ

ಈ ಕಾರ್ಯತಂತ್ರಗಳು ಉನ್ನತ ಶಿಕ್ಷಣ ವ್ಯವಸ್ಥೆ ಮತ್ತು ಈ ವ್ಯವಸ್ಥೆಯಲ್ಲಿ ಇತರ ಪ್ರಮುಖ ವಿಷಯಗಳಲ್ಲಿ ಸುಧಾರಣೆ ತರುವತ್ತ ಗಮನ ಹರಿಸಿದೆ. ಸರ್ಕಾರ ಯಾವ ರೀತಿಯ ಯೋಜಿತ ನೀತಿಯನ್ನು ಜಾರಿಗೆ ತರಬೇಕಾದ ಅವಶ್ಯಕತೆ ಇದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ವರದಿಯಲ್ಲಿ ನೀತಿ ಶಿಫಾರಸ್ಸುಗಳಲ್ಲಿ ಸ್ಪಷ್ಟಪಡಿಸಲಾಗಿದೆ. ನೀತಿ ಶಿಫಾರಸ್ಸುಗಳ ಪಟ್ಟಿ ಈ ಕೆಳಗಿನಂತಿದೆ.

- ಶಿಕ್ಷಕರಿಗೆ ಸಂಬಂಧಪಟ್ಟ ಎಲ್ಲಾ ಸಮಸ್ಯೆಗಳನ್ನು ನಿವಾರಿಸಲು ಸಾರ್ವಜನಿಕ–ಖಾಸಗಿ ಪಾಲುದಾರಿಕೆಯಲ್ಲಿ ರಾಜ್ಯ ಮಟ್ಟದ ಸ್ವತಂತ್ರ ಅಕಾಡೆಮಿಯೊಂದನ್ನು ಸ್ಥಾಪಿಸಬೇಕು.
- ಕರ್ನಾಟಕ ವಿದ್ಯಾರ್ಥಿ ವಿದ್ಯಾರ್ಥಿ ವೇತನ ಮತ್ತು ಸಾಲ ಪ್ರಾಧಿಕಾರವನ್ನು ಸ್ಥಾಪಿಸಬೇಕು. ಇದು ಕರ್ನಾಟಕದಲ್ಲಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯಲು ಬೇಕಾದ ವಿದ್ಯಾರ್ಥಿ ವೇತನ ನೀಡಿಕೆ–ನಿರ್ವಹಣೆ, ಸಾಲ ಸೌಲಭ್ಯದ ಕುರಿತು ಗಮನ ಹರಿಸಬೇಕು.
- ಈಗಿರುವ ಉನ್ನತ ಶಿಕ್ಷಣ ಆಡಳಿತವನ್ನು (ಸ್ವಾಯತ್ತೆ ಮತ್ತು ಉಪಕುಲಪತಿಗಳು ಹಾಗೂ ಇತರ ಶಾಸನಾತ್ಮಕ ಅಧಿಕಾರಿಗಳ ನೇಮಕ) ಗಮನದಲ್ಲಿಟ್ಟುಕೊಂಡು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಕಾಯ್ದೆ – 2000ಕ್ಕೆ ತಿದ್ದುಪಡಿ ತರಬೇಕು.
  21ನೇ ಶತಮಾನಕ್ಕೆ ಹೊಂದಿಕೆಯಾಗುವ ಹಾಗೂ ಅವಶ್ಯಕವಾದ ಶೈಕ್ಷಣಿಕ ಪದ್ಧತಿಯನ್ನು ಸಿದ್ಧಪಡಿಸಲು ಈ ವಿಶ್ವವಿದ್ಯಾಲಯಗಳು ಮುಂದಾಗಬೇಕು.
- ಮಹಿಳಾ ಮತ್ತು ಸಂಜೆ ಕಾಲೇಜುಗಳು, ವಾರಾಂತ್ಯ ಕಾಲೇಜುಗಳು/ಶಿಕ್ಷಣ ಸಂಸ್ಥೆಗಳು ಮತ್ತು ಮಹಿಳಾ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ, ವಿದ್ಯಾರ್ಥಿವೇತನ, ಪ್ರಯಾಣ ಸೌಲಭ್ಯ ಮತ್ತು ಮಧ್ಯಾಹ್ನದ ಬಿಸಿಯೂಟದಂತಹ ಸೌಕರ್ಯಗಳನ್ನು ಕಲ್ಪಿಸುವ ಮೂಲಕ ಅವರು ಹೆಚ್ಚು ಹೆಚ್ಚು ಶಿಕ್ಷಣ ಸಂಸ್ಥೆಗಳ ಆಕರ್ಷಿತರಾಗುವಂತೆ ಮಾಡಬೇಕು.
- ಸ್ವಾಯತ್ತ ಆಡಳಿತ ವ್ಯವಸ್ಥೆ ಮತ್ತು ಸೂಕ್ತ ನಿಧಿ ನೀಡಿಕೆಯ ಮೂಲಕ ಕರ್ನಾಟಕದಲ್ಲಿ ಜಿಲ್ಲಾ ವಿಶ್ವ ವಿದ್ಯಾಲಯಗಳನ್ನು ಸ್ಥಾಪಿಸಬೇಕು.
- ಉನ್ನತ ಶಿಕ್ಷಣ ಇಲಾಖೆಗೆ ಒಟ್ಟು ಬಜೆಟ್ ಅನ್ನು ಈಗಿರುವ ಜಿಎಸ್‌ಡಿಪಿಯ ಶೇ. 2 ರಿಂದ ಒಟ್ಟಾರೆ ಶಿಕ್ಷಣ ಬಜೆಟ್‌ನ ಕನಿಷ್ಠ ಶೇ. 30ಕ್ಕೆ ಏರಿಸಲೇಬೇಕು.
- ಈಗಿರುವ ಎಂಟು ವರ್ಷ ಕಡ್ಡಾಯ ಶಾಲೆ ನೀತಿ ಬದಲಿಗೆ ಕನಿಷ್ಠವೆಂದರೂ 12 ವರ್ಷ ಶಾಲೆ ಎಂಬ ನೀತಿಯನ್ನು ಜಾರಿಗೆ ತರಬೇಕು.

- ಭಾರತ ಸರ್ಕಾರದ ಎನ್‌ಸಿಹೆಚ್‌ಇಆರ್ ಮಸೂದೆಯಲ್ಲಿ ಹೇಳಲಾದ ಚಿಂತಕರ ಚಾವಡಿಯ ಪಾತ್ರವನ್ನಾಗಿ ಪರಿವರ್ತಿಸಲು ರಾಜ್ಯದ ಈಗಿರುವ ಉನ್ನತ ಶಿಕ್ಷಣ ಸಮಿತಿಯನ್ನು ಪುನರ್ ರಚಿಸಬೇಕು.
- ಶೈಕ್ಷಣಿಕ ಸೌಲಭ್ಯಗಳು, ಹಾಸ್ಟೆಲ್ ಮೂಲಸೌಕರ್ಯ, ಪ್ರಯೋಗಾಲಯ, ಗ್ರಂಥಾಲಯ ಸೇರಿದಂತೆ ವಿಶ್ವವಿದ್ಯಾಲಯಗಳಿಗೆ ಅವಶ್ಯಕವಾದ ಎಲ್ಲಾ ಸೌಕರ್ಯ ಒದಗಿಸಲು 10 ವರ್ಷಗಳ ಬಾಂಡ್ ಬಿಡುಗಡೆಗೆ ವಿಶ್ವವಿದ್ಯಾಲಯಗಳಿಗೆ ಅನುಮತಿ ನೀಡಬೇಕು.
- ಉನ್ನತ ಶಿಕ್ಷಣ ಇಲಾಖೆಯ ದೃಷ್ಟಿಕೋನದಲ್ಲಿ ಸಮಗ್ರ ಬದಲಾವಣೆ ತರಬೇಕಾದ ಅವಶ್ಯಕತೆ ಇದ್ದು, ಇದಕ್ಕಾಗಿ ಕೈಗಾರಿಕಾ ಕ್ಷೇತ್ರದ ಪ್ರತಿನಿಧಿಗಳು ಸೇರಿದಂತೆ ಎಲ್ಲಾ ಸಂಬಂಧಪಟ್ಟ ವಿಭಾಗಗಳ ಪ್ರತಿನಿಧಿಗಳನ್ನೊಳಗೊಂಡ ಸಲಹೆ ಮಂಡಳಿಯನ್ನು ಸ್ಥಾಪಿಸಲೇಬೇಕು.

ಒಟ್ಟಾರೆ, ರಾಜ್ಯವನ್ನು ಜ್ಞಾನಾಧಾರಿತ ಸಮಾಜವನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ನ್ಯಾಯಸಮ್ಮತ ಮತ್ತು ಪ್ರತಿಭೆಗೆ ಪೂರಕವಾದ ಉನ್ನತ ಶಿಕ್ಷಣ ಎಲ್ಲರಿಗೂ ಖಾತರಿಯಾಗಿ ಕಲ್ಪಿಸುವಂತಹ ಪದ್ಧತಿಯನ್ನು ಅಳವಡಿಸಿಕೊಳ್ಳುವುದು ಅತ್ಯಗತ್ಯ ಎಂದು ಈ ವರದಿ ಸಲಹೆ ನೀಡಿದೆ.

ಈ ನಿಟ್ಟಿನಲ್ಲಿ ಉನ್ನತ ಶಿಕ್ಷಣ ವಿಷನ್ – 2020' ವರದಿಯಲ್ಲಿ ಎಲ್ಲಾ ನೀತಿ ಶಿಫಾರಸ್ಸುಗಳು ಮತ್ತು ಕಾರ್ಯತಂತ್ರಗಳನ್ನು ಉಲ್ಲೇಖಿಸಲಾಗಿದ್ದು, ಇದು ರಾಜ್ಯವನ್ನು ಜ್ಞಾನಾಧಾರಿತ ಸಮಾಜವನ್ನಾಗಿಸಲು ಮಹತ್ವದ ದಾಖಲೆಯಾಗಿದೆ.

ಭಾರತ ಮತ್ತು ಕರ್ನಾಟಕದಲ್ಲಿ ಉನ್ನತ ಶಿಕ್ಷಣ

ಇಪ್ಪತ್ತೊಂದನೇ ಶತಮಾನ ಅಭಿವೃದ್ಧಿ ವಲಯದಲ್ಲಿನ ಹಲವು ಹೊಸ ಬೆಳವಣಿಗೆಗಳಿಗೆ ಸಾಕ್ಷಿಯಾಗುತ್ತಿದೆ. ಪ್ರೈಸ್ ವಾಟರ್ ಹೌಸ್ ಕೂಪರ್ಸ್ ನವರ ಇತ್ತೀಚಿನ ವರದಿ ಉಲ್ಲೇಖಿಸಿರುವಂತೆ 2050 ರೊಳಗೆ (ಕೋಷ್ಟಕ 1), ಯುಎಸ್ ಡಾಲರ್‌ಗಳ ಲೆಕ್ಕಾಚಾರದಲ್ಲಿ ಭಾರತವು ಜಪಾನ್ ಮತ್ತು ಬ್ರಿಟನ್‌ಗಿಂತ ಮುಂದಿರಲಿದೆ. ಹಾಗೆಯೇ ಪಿಪಿಪಿ (ಖಾಸಗಿ–ಸಾರ್ವಜನಿಕ ಪಾಲುದಾರಿಕೆ) ವಲಯದಲ್ಲಿ ಭಾರತದ ಜಿಡಿಪಿ ಅಮೆರಿಕದ ಜಿಡಿಪಿ ಯನ್ನು ಸಮಗಟ್ಟಲಿದೆ.

ಕೋಷ್ಟಕ – 1

ಆಯ್ದ ರಾಷ್ಟ್ರಗಳ ಪ್ರಸ್ತುತ ಮತ್ತು ಭವಿಷ್ಯದ ಜಿಡಿಪಿ (ಗ್ರಾಸ್ ಡೊಮೆಸ್ಟಿಕ್ ಪ್ರೊಡಕ್ಟ್ಸ್) ಹೋಲಿಕೆ ಪಟ್ಟಿ

Country	GDP in US $ terms		GDP in PPP terms	
	2005	2050	2005	2050
USA	100	100	100	100
Japan	39	23	32	23
China	18	94	76	143
UK	18	15	16	15
India	6	58	30	100

ಮೂಲ : ಪ್ರೈಸ್ ವಾಟರ್ ಹೌಸ್ ಕೂಪರ್ಸ್ ವರದಿ : 2050 ರಲ್ಲಿ ಜಗತ್ತು–ಪಿ. ರಾಮರಾವ್ ಮತ್ತು ಬಿ.ಕೆ. ಅನಿತಾ, 2009 ಪುಟ 86

ಈ ವಿಶ್ವಾಸಾರ್ಹ ಆರ್ಥಿಕ ಸಮೃದ್ಧಿಯನ್ನು ಹೊರತುಪಡಿಸಿಯೂ, ಭಾರತಕ್ಕೆ ಅದರ ಹೆಚ್ಚಿನ ಜನಸಂಖ್ಯೆಯೆ ವರವಾಗುವ ಸಂಭವವಿದೆ. ವಿಶ್ವಸಂಸ್ಥೆಯು 2010ರಲ್ಲಿ ಅಂದಾಜು ಮಾಡಿರುವ ವಿಶ್ವದ ಜನಸಂಖ್ಯೆಯ ಲೆಕ್ಕಾಚಾರದಂತೆ, ಭವಿಷ್ಯದಲ್ಲಿ 15–64 ವರ್ಷದೊಳಗಿನ ದುಡಿಯುವವರ ಸಂಖ್ಯೆ ಭಾರತದಲ್ಲಿ ಹೆಚ್ಚಲಿದೆ[1]. ಇದರ ಪರಿಣಾಮ ಜಗತ್ತಿನಲ್ಲಿ ಉದ್ಯೋಗಿಗಳಾಗಿರುವ ಪ್ರತಿ ಐವರಲ್ಲಿ ಒಬ್ಬ ಭಾರತೀಯನಾಗಿರುತ್ತಾನೆ. ಈ ಮಧ್ಯೆ ಇಷ್ಟೊಂದು ಬೃಹತ್ ಪ್ರಮಾಣದ ಕಾರ್ಯಶೀಲ ಸಮುದಾಯಕ್ಕೆ ಸೂಕ್ತ ಮತ್ತು ಒಳ್ಳೆಯ ಉದ್ಯೋಗ ಕಲ್ಪಿಸುವ ಹೊಣೆಗಾರಿಕೆ ದೊಡ್ಡ ಸವಾಲಾಗಿಯೇ ಇದೆ. ಈ ಅಗಾಧ ಪ್ರಮಾಣದ ಮಾನವ ಸಂಪನ್ಮೂಲ ಹೊಸ ಅವಕಾಶಗಳನ್ನು ತೆರೆಯಲು ಕಾರಣವಾಗಬಹುದಾದರೂ, ಮಾನವ ಸಂಪನ್ಮೂಲದ ಸಮರ್ಪಕ ಮತ್ತು ಸದ್ಬಳಕೆ ಸಾಧ್ಯವೇ ಎಂಬುದು ಕಠಿಣ ಸವಾಲು. ಭಾರತವು ಉನ್ನತ ಶಿಕ್ಷಣಕ್ಕೆ ಪ್ರವೇಶಿಸುವವರ ಸಂಖ್ಯೆಯನ್ನು ಹೆಚ್ಚಳ ಮಾಡಿಕೊಳ್ಳಲೇಬೇಕಿದೆ. ಜತೆಗೆ ಈ ಜನಸಂಖ್ಯಾ ಹೆಚ್ಚಳದ ಲಾಭವನ್ನು ಪಡೆಯಲು ತರುಣರಲ್ಲಿನ ಕೌಶಲವನ್ನು ಮತ್ತಷ್ಟು ಹೆಚ್ಚಿಸಬೇಕು ಮತ್ತು ಹರಿತಗೊಳಿಸಬೇಕು. ಸಂಶೋಧನೆ ಮತ್ತು ನಾವೀನ್ಯತೆಯನ್ನು ಗಳಿಸಲೋಸುಗ ಭಾರತದಲ್ಲಿರುವ ಇಂದಿನ ಶಿಕ್ಷಣ ಪದ್ಧತಿ ವಿಶ್ಲೇಷಣಾತ್ಮಕ ಮತ್ತು ತಾಂತ್ರಿಕ ಕೌಶಲಗಳನ್ನೊಳಗೊಂಡ ಸಮಗ್ರ ಶಿಕ್ಷಣ ಪದ್ಧತಿಯಾಗಿ ರೂಪಾಂತರಗೊಳ್ಳಲೇಬೇಕಿದೆ. ಅಗತ್ಯ ಕೌಶಲಗಳನ್ನು ಭಾರತದ ತರುಣರು ಮೈಗೂಡಿಸಿಕೊಂಡು ನಿರ್ದಿಷ್ಟ ಗುರಿಯನ್ನು ತಲುಪದೇ, ಭಾರತವು ಭವಿಷ್ಯದಲ್ಲಿ ಸಮೃದ್ಧ ದೇಶವಾದೀತೆಂದು ಕಲ್ಪಿಸಿಕೊಳ್ಳುವುದು ಅಸಹಜ ಮತ್ತು ಅಸಾಧ್ಯ (ರಾವ್ ಮತ್ತು ಅನಿತಾ, 2009).

ಕರ್ನಾಟಕವು ಅಂತರರಾಷ್ಟ್ರೀಯ ಮಟ್ಟದ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರಗಳನ್ನು ಸ್ಥಾಪಿಸುವುದರಲ್ಲಿ ಮುಂಚೂಣಿಯಲ್ಲಿದೆ. ತಂತ್ರಜ್ಞಾನದ ಸೇವಾ ವಲಯದಲ್ಲಿ ಕರ್ನಾಟಕ ಜಾಗತಿಕ ಮಟ್ಟದಲ್ಲಿ ಪ್ರಖ್ಯಾತಿ. ಮುಖ್ಯವಾಗಿ

[1] United Nations, Department of Economic and Social Affairs, Population Division (2011): World Population Prospects: The 2010 Revision. New York.

ಮಾಹಿತಿ ತಂತ್ರಜ್ಞಾನ ವಲಯದಲ್ಲಿ ಜಗತ್ತಿನಲ್ಲೇ ಎರಡನೇ ಅತಿದೊಡ್ಡ ಸ್ಥಾನ ಕರ್ನಾಟಕಕ್ಕೆ ಪ್ರಾಪ್ತವಾಗಿದೆ. ಇದರ ಜೊತೆಗೆ, ಈಗ ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕವು ಅತ್ಯುನ್ನತ ಕೇಂದ್ರವಾಗಿ ಜಾಗತಿಕ ಮಟ್ಟದಲ್ಲಿ ಹೊರಹೊಮ್ಮಬೇಕು. ಇದು ನನಸಾಗಬೇಕಾದರೆ, ಭಾರತದಲ್ಲೇ ಅತ್ಯುನ್ನತ ಗುಣಮಟ್ಟವನ್ನು ಶಿಕ್ಷಣ ಕ್ಷೇತ್ರದಲ್ಲಿ ಸಾಧಿಸುವ ಗುರಿಯೊಂದಿಗೇ, ತನ್ನೊಂದಿಗೆ ಹೋಲಿಕೆಯಾಗಬಹುದಾದ ಹಲವು ದೇಶಗಳ ವ್ಯವಸ್ಥೆಯೊಂದಿಗೆ ಸ್ಪರ್ಧೆಗೆ ಅಣಿಯಾಗಬೇಕಾದ ಸವಾಲೂ ಸಹ ಕರ್ನಾಟಕದ ಎದುರಿಗಿದೆ.

2020 ರೊಳಗೆ ಕರ್ನಾಟಕವನ್ನು ಒಂದು ಸ್ಪಂದನಶೀಲ ಜ್ಞಾನಾಧಾರಿತ ಸಮಾಜವನ್ನಾಗಿ ಮಾರ್ಪಡಿಸಿದ್ದೇ ಆದಲ್ಲಿ, ಅದು ಹಲವು ಹೊಸ ಸಾಧನೆಗೆ ಸಾಕ್ಷಿಯಾಗುತ್ತದೆ.

ವಿಶ್ವಸಂಸ್ಥೆ, ಆರ್ಥಿಕ ಮತ್ತು ಸಾಮಾಜಿಕ ಅಫೇರ್ಸ್, ಪಾಪುಲೇಶನ್ ಡಿವಿಜನ್ (2011), ವಿಶ್ವ ಜನಸಂಖ್ಯಾ ವಿವರ : 2010ರ ಪುನರ್ ಪರಿಶೀಲನೆ, ನ್ಯೂಯಾರ್ಕ್ ಬಹಳ ಮುಖ್ಯವಾಗಿ ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಸಂಖ್ಯೆ ದೊಡ್ಡ ಪ್ರಮಾಣದಲ್ಲಿ ಏರಿಕೆಯಾಗಲಿದೆ. 2012–13 ರಲ್ಲಿದ್ದ 12,60,038 (ಒಟ್ಟು ದಾಖಲೀಕರಣ ಅನುಪಾತದ ಶೇ. 18.1ರಷ್ಟು) 2020ರಲ್ಲಿ 22,58,000 (ಒಟ್ಟು ದಾಖಲೀಕರಣ ಅನುಪಾತದ ಶೇ. 35ರಷ್ಟು)ಕ್ಕೆ ಏರಿಕೆಯಾಗಲಿದೆ[2]. ಈ ಬದಲಾವಣೆ ಸಂಪೂರ್ಣವಾಗಿ ವಿದ್ಯಾರ್ಥಿ ಕೇಂದ್ರಿತವಾಗಿರುತ್ತದಲ್ಲದೇ, ಈ ಕ್ಷೇತ್ರದ ವಿಸ್ತರಣೆಯು ವಿದ್ಯಾರ್ಥಿಗಳ ಆಕಾಂಕ್ಷೆ–ಬಯಕೆಯ ಮೇಲೆ ಸ್ಪಷ್ಟ ಪರಿಣಾಮವನ್ನು ಬೀರಲಿದೆ. ಈ ಹಿನ್ನೆಲೆಯಲ್ಲಿ, ಉನ್ನತ ಶಿಕ್ಷಣವನ್ನು ಪೂರೈಸುತ್ತಿರುವ ಶೈಕ್ಷಣಿಕ ಸಂಸ್ಥೆಗಳು ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಅಗತ್ಯವಿರುವ ಮತ್ತು ಅವರ ಆಕಾಂಕ್ಷೆಗಳನ್ನು ಪೂರೈಸುವಂತಹ ಕೋರ್ಸ್‌ಗಳನ್ನು ರೂಪಿಸಬೇಕು. ಜಾಗತಿಕ ಮತ್ತು ರಾಷ್ಟ್ರೀಯ ಮಟ್ಟದ ಔದ್ಯಮಿಕ ವಾತಾವರಣದಲ್ಲಿ ಸೃಷ್ಟಿಯಾಗುವ ಅವಕಾಶಗಳನ್ನು ಪಡೆಯಲು ಸಾಧ್ಯವಾಗುವಂತೆ ಅವರನ್ನು ಸಮರ್ಥರನ್ನಾಗಿ ರೂಪಿಸುವಲ್ಲಿ ಈ ಕೋರ್ಸ್‌ಗಳು ಯಶಸ್ವಿಯಾಗುವಂತಿರಬೇಕು. ತಮ್ಮ ಆಸೆ–ಆಕಾಂಕ್ಷೆಗಳಿಗೆ ಪೂರಕವಾಗುವಂತಹ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ವಿದ್ಯಾರ್ಥಿಗಳಿಗೆ ಕಲ್ಪಿಸಬೇಕು. ಹಾಗೆಯೇ, ಉತ್ತಮ ವಿದ್ಯಾರ್ಥಿಗಳನ್ನು ತಮ್ಮತ್ತ ಸೆಳೆದುಕೊಳ್ಳುವ ಸಲುವಾಗಿ ಹಾಗೂ ವಿದ್ಯಾರ್ಥಿಗಳಲ್ಲಿ ಆರೋಗ್ಯಕರ ಸ್ಪರ್ಧೆಯನ್ನು ನಿರ್ಮಿಸಲೋಸುಗ ಶೈಕ್ಷಣಿಕ ಸಂಸ್ಥೆಗಳು, ಆಗಾಗ್ಗೆ ಹೊಸ ಹೊಸ ಬದಲಾವಣೆಗಳನ್ನು ಕೈಗೊಳ್ಳುತ್ತಿರಬೇಕು. ಬೇರೆ ಮಾತಿನಲ್ಲಿ ಹೇಳುವುದಾದರೆ, ಸಾಂಪ್ರದಾಯಿಕ ಕೋರ್ಸ್‌ಗಳಿಗೇ ಜೋತು ಬೀಳುವ ಅನಿವಾರ್ಯತೆಯನ್ನು ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಸೃಷ್ಟಿಸಬಾರದು. ಅದು ಔದ್ಯಮಿಕ ವಾತಾವರಣದ ಅಗತ್ಯಕ್ಕೆ ತಕ್ಕಂತೆ ಅವರನ್ನು ರೂಪಿಸದು. ಒಬ್ಬ ಜವಾಬ್ದಾರಿಯುತ ನಾಗರಿಕನನ್ನಾಗಿಯೂ ರೂಪಿಸಲು ಉನ್ನತ ಶಿಕ್ಷಣವನ್ನು ಮುಂದುವರಿಸುವ ಮತ್ತು ತರಬೇತಿ ಪಡೆಯುವ ಅವಕಾಶ ನಿರಂತರವಾಗಿರಬೇಕು.

ಜನಸಂಖ್ಯಾವಾರು ಪರಸ್ಪರ ಹೋಲಿಸಬಹುದಾದ ದೇಶಗಳ ಕೆಲವು ಪ್ರಮುಖ ಅಂಶಗಳನ್ನು ತುಲನೆ ಮಾಡಿರುವ ಈ ಕೆಳಗಿನ ಕೋಷ್ಟಕ 2 ಮತ್ತು 3 ವಿಮರ್ಶಾತ್ಮಕ ನೆಲೆಯನ್ನು ಕಲ್ಪಿಸುತ್ತದೆ.

ಕೋಷ್ಟಕ – 2

ಒಟ್ಟು ದಾಖಲೀಕರಣ ಅನುಪಾತ ಮತ್ತು ಜಿಡಿಪಿ ಯ ಪ್ರಮಾಣದಲ್ಲಿ ಶಿಕ್ಷಣಕ್ಕೆ ಮಾಡುವ ವೆಚ್ಚದ ಹೋಲಿಕೆ

Country	Karnataka	South Korea	United Kingdom	France	Germany
GER (%)*	18.1# (2011-12)	98.9+ (2008)	57.42+ (2008)	54.58+ (2008)	47.94+ (2009)
Expenditure (% of Education Budget to total GSDP 2009-2010)	2.92^ (2010)	5.0* (2009)	5.16* (2009)	5.9* (2009)	4.6* (2008)

---

[2] Deloitte (2012), Higher Education GER projections for Karnataka (report prepared for the Karnataka Jnana Aayoga (KJA), GOK.

ಕೋಷ್ಟಕ – 3

ಭಾರತದ ಕೆಲವು ರಾಜ್ಯಗಳ ಒಟ್ಟು ದಾಖಲೀಕರಣ ಅನುಪಾತ ಮತ್ತು ಜಿಡಿಪಿ ಯ ಪ್ರಮಾಣದಲ್ಲಿ ಶಿಕ್ಷಣಕ್ಕೆ ಮಾಡುವ ವೆಚ್ಚದ ಹೋಲಿಕೆ (2009–10 ರಲ್ಲಿದ್ದಂತೆ)

Country	Karnataka	Maharashtra	Tamil Nadu	Andhra Pradesh	Kerala
GER (%) *	18.1"	21.4	19.0	16.9	13.1
Expenditure (% of Education Budget to total GSDP 2009-2010)	2.92	2.45	2.40	2.62	3.10

Source : Analysis of budgeted expenditure on education(2009-10), MHRD, GOI (Planning, Monitoring and Statistics Bureau) New Delhi P:54.

ಜ್ಞಾನಾಧಾರಿತ ಸಮಾಜವಾಗಿ ಪರಿವರ್ತನೆಗೊಳ್ಳುವ ಪ್ರಕ್ರಿಯೆಯಲ್ಲಿ ರಾಜ್ಯ ತನ್ನಷ್ಟಕ್ಕೇ 18–23ರ ನಡುವಿನ ವಯೋಮಾನದ ಯುವ ಸಮುದಾಯವನ್ನು ಹೆಚ್ಚು ಉನ್ನತ ಶಿಕ್ಷಣದ ವ್ಯಾಪ್ತಿಗೆ ಸೆಳೆದುಕೊಳ್ಳಲು ಸಜ್ಜಾಗುತ್ತಿದೆ. 2012ರಲ್ಲಿ ರಾಜ್ಯದ ಶೇ. 73.90ರಷ್ಟು ಪರೀಕ್ಷಾರ್ಥಿಗಳು ಎಸ್‌ಎಸ್‌ಎಲ್‌ಸಿ ಯಲ್ಲಿ ಉತ್ತೀರ್ಣರಾಗಿದ್ದರು. ಸದ್ಯದ ವಿದ್ಯಮಾನಗಳ ಪ್ರಕಾರ, ವಿದ್ಯಾರ್ಥಿನಿಯರು (ಶೇ. 78.81) ಒಟ್ಟು ಫಲಿತಾಂಶದಲ್ಲಿ ವಿದ್ಯಾರ್ಥಿಗಳಿಗಿಂತ (ಶೇ. 69.57) ಮುಂದಿದ್ದಾರೆ. ಈ ಎಲ್ಲರ ಪೈಕಿ ಸಾಮಾನ್ಯವಾಗಿ ಬಹುತೇಕ ಮಂದಿ ಪಿಯುಸಿ ಶಿಕ್ಷಣಕ್ಕೆ ಪ್ರವೇಶಿಸುತ್ತಾರೆ. ಕೆಲವೇ ಮಂದಿ ಡಿಪ್ಲೊಮಾ ಶಿಕ್ಷಣದತ್ತ ಮುಖ ಮಾಡಬಹುದು. ಪಿಯುಸಿ ಯಲ್ಲಿ ಶೇ. 57.03 ರಷ್ಟು ಮಂದಿ ಉತ್ತೀರ್ಣರಾಗಿದ್ದಾರೆಂದರೆ, 3,39,421 ಮಂದಿ ಆ ವರ್ಷ ಉನ್ನತ ಶಿಕ್ಷಣವನ್ನು ಪಡೆಯಲು ಅರ್ಹರಾದರೆಂದೇ ಅರ್ಥ. ಇದರೊಂದಿಗೆ, ಸಿಬಿಎಸ್‌ಇ, ಐಸಿಎಸ್‌ಇ ಹಾಗೂ ಕೇಂದ್ರೀಯ ವಿದ್ಯಾಲಯದ ಶಿಕ್ಷಣ ವ್ಯವಸ್ಥೆಯಲ್ಲೂ ಸಾಕಷ್ಟು ಮಂದಿ ಹನ್ನೆರಡನೇ ತರಗತಿ ಪೂರೈಸಿ ಈ ಉನ್ನತ ಶಿಕ್ಷಣದ ಮುಖ್ಯವಾಹಿನಿಗೆ ಸೇರುತ್ತಿದ್ದಾರೆ. 2012–13ನೇ ಸಾಲಿಗೆ ಅಂದಾಜಿಸಿರುವ ಒಟ್ಟು ದಾಖಲೀಕರಣ ಅನುಪಾತ (ಜಿಇಆರ್)ದಂತೆ, ಶೇ. 21.8[3]. 2020ರೊಳಗೆ ಒಟ್ಟು ದಾಖಲೀಕರಣ ಅನುಪಾತ ಶೇ. 35 ರಷ್ಟನ್ನು ಸಾಧಿಸುವ ಗುರಿಯನ್ನು ನಿಗದಿಪಡಿಸಿಕೊಳ್ಳುವ ಮೂಲಕ ಭಾರತದ ರಾಜ್ಯಗಳ ಪೈಕಿ ಕರ್ನಾಟಕ ಅಗ್ರಸ್ಥಾನ ಪಡೆಯಲಿದೆ ಹಾಗೂ ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಒಪ್ಪಂದದಡಿ ಮುಂಚೂಣಿಯಲ್ಲಿರುವ ದೇಶಗಳ ಸಾಲಿನಲ್ಲಿ ನಿಲ್ಲಲಿದೆ. ಅಂದಾಜು ಮಾಡಿರುವಂತೆ ಕರ್ನಾಟಕದಲ್ಲಿ 2012–13ರಲ್ಲಿ ನಿರೀಕ್ಷಿಸಿರುವ 12,60,038 (ಜಿಇಆರ್ ಶೇ. 18.1) ವಿದ್ಯಾರ್ಥಿಗಳ ಪ್ರಮಾಣ 22,58,434[4] (ಜಿಇಆರ್ ಶೇ. 35)ಕ್ಕೆ ಏರಲಿದೆ. ಅಂತರರಾಷ್ಟ್ರೀಯ ಮಟ್ಟದ ಗುಣಮಟ್ಟದ ಜ್ಞಾನ ಕೌಶಲಗಳನ್ನುಳ್ಳ ಅಭ್ಯರ್ಥಿಗಳನ್ನು ತಯಾರು ಮಾಡುವ ಮೂಲಕ ಉನ್ನತ ಶಿಕ್ಷಣ ಕ್ಷೇತ್ರದ ವಿಸ್ತರಣೆ ಸಾಧ್ಯವಾಗಬೇಕಿದೆ. ಇದರೊಟ್ಟಿಗೇ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಶಿಕ್ಷಣದಲ್ಲಿ ಉತ್ತೀರ್ಣರಾಗುವ ಸಂಖ್ಯೆಯನ್ನು ಹೆಚ್ಚಿಸುವತ್ತ ಸೂಕ್ತ ಕ್ರಮಗಳನ್ನು ಕೈಗೊಳ್ಳುವ ಮೂಲಕ ಉನ್ನತ ಶಿಕ್ಷಣದತ್ತ ಅರ್ಹರ ಸಂಖ್ಯೆ ನಿರಂತರವಾಗಿ ಹರಿಯುವತ್ತಲೂ ಹೆಚ್ಚಿನ ಗಮನವಹಿಸಬೇಕು.

2009–10 ರಲ್ಲಿ, ಪ್ರಾಥಮಿಕ ಶಿಕ್ಷಣದಿಂದ ಕಾಲೇಜು ಶಿಕ್ಷಣದವರೆಗೆ ವಿವಿಧ ಹಂತಗಳಲ್ಲಿ ಒಟ್ಟು ದಾಖಲೀಕರಣ ಅನುಪಾತ (ಜಿಇಆರ್) ಕುಸಿದಿದೆ. ಒಂದನೇ ತರಗತಿಯಲ್ಲಿ 104.7 ರಿಂದ ಕಾಲೇಜು ಮಟ್ಟದಲ್ಲಿ 18. 1ಕ್ಕೆ ಕುಸಿದಿದೆ.

[3] Deloitte (2012), Higher Education GER projections for Karnataka (report prepared for the Karnataka Janna Aayoga (KJA), GOK

[4] Ibid

ಚಿತ್ರ – 1ರಲ್ಲಿ ನೀಡಿರುವ ಜಿಇಆರ್, ಕರ್ನಾಟಕ ರಾಜ್ಯದಲ್ಲಿ ಶಿಕ್ಷಣದ ನಾನಾ ಹಂತದಲ್ಲಿರುವ ಒಟ್ಟು ದಾಖಲೀಕರಣ ಪ್ರಮಾಣವನ್ನು ವಿವರಿಸುತ್ತದೆ.

ಚಿತ್ರ – 1

ಕರ್ನಾಟಕದ ಶಿಕ್ಷಣದ ವಿವಿಧ ಹಂತದ ಜಿಇಆರ್ ವಿವರ



Source : Derived from Statistics of Higher and Technical Education 2009-10 (provisional) MHRD, GOI; Statistics of School Education (Provisional) cited in Sector paper for Karnataka's 12th five Year Plan (2012-17) for Karnataka Evaluation Authority, Planning, Programme Monitoring & Statistics Dept, GOK. (Includes Distance Education)

ಉದ್ದೇಶಿತ ಗುರಿಯಾದ ಶೇ. 35ರಷ್ಟು ಒಟ್ಟು ದಾಖಲೀಕರಣ ಪ್ರಮಾಣವನ್ನು 2020ರೊಳಗೆ ತಲುಪಬೇಕಾದರೆ, ಉನ್ನತ ತರಗತಿಗಳಿಗೆ ಪ್ರವೇಶ ಪಡೆಯುವವರ ಸಂಖ್ಯೆ ಕಡ್ಡಾಯವಾಗಿ ಹೆಚ್ಚಳವಾಗಲೇಬೇಕು. ಹಾಗಾಗಿ ಎಲ್ಲ ಹಂತದಲ್ಲೂ ದಾಖಲೀಕರಣ ಆಂದೋಲನ ಭರದಿಂದ ನಡೆಯಬೇಕು ಹಾಗೂ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ಸಲುವಾಗಿ ಗುಣಮಟ್ಟ ಹೆಚ್ಚಳದತ್ತಲೂ ಗಮನಹರಿಸಬೇಕು. ಆಗ ಮಾತ್ರ ಉದ್ದೇಶಿತ ಗುರಿಯಾದ ಶೇ. 35ರಷ್ಟು ಸಾಮಾನ್ಯ ದಾಖಲೀಕರಣ ಅನುಪಾತವನ್ನು ತಲುಪಲು ಯಾವುದೇ ಸಮಸ್ಯೆಯಾಗದು. ಇದರೊಂದಿಗೆ ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಡಿ ಪ್ರತಿ ಮಗುವಿಗೂ 8 ವರ್ಷದ ಕಡ್ಡಾಯ ಶಿಕ್ಷಣ ನೀಡುವ ಬದಲು, ಅದನ್ನು 12 ವರ್ಷಕ್ಕೆ ಏರಿಸುವ ಸಂಬಂಧ ಕರ್ನಾಟಕ ಸರಕಾರ ಸ್ಪಷ್ಟ ನಿರ್ಧಾರ ತಳೆದು, ನೀತಿ ರೂಪಿಸಿ ಜಾರಿಗೊಳಿಸಬೇಕು. ಈ ನಿರ್ಧಾರವು, ಶಾಲೆಗಳಲ್ಲಿನ ವಿದ್ಯಾರ್ಥಿಗಳ ಪ್ರಮಾಣದ ಕುಸಿತವನ್ನು ತಡೆಯಬಲ್ಲದು ಹಾಗೂ ಕನಿಷ್ಠ 12 ವರ್ಷದ ಶಾಲಾ ಶಿಕ್ಷಣ ಪಡೆದವರು ಉತ್ತಮ ಮಾನವ ಸಂಪನ್ಮೂಲವಾಗಿ ರೂಪುಗೊಳ್ಳಬಲ್ಲರು.

2009–10ರಲ್ಲಿ ಕರ್ನಾಟಕದ ಒಟ್ಟೂ ನಾಗರಿಕರು ಮತ್ತು ಅವರ ವಿದ್ಯಾರ್ಹತೆಯ ಮಟ್ಟವನ್ನು ಚಿತ್ರ – 2 ವಿವರಿಸುತ್ತದೆ.

ಚಿತ್ರ – 2

ಚಿತ್ರ–2: ಒಂದು ಸಾವಿರ ಮಂದಿಯಂತೆ ಏಳು ವರ್ಷ ಮತ್ತು ಅದರ ಮೇಲ್ಪಟ್ಟವರ ಸಾಮಾನ್ಯ ಶಿಕ್ಷಣ ಮಟ್ಟವನ್ನು (2009–10) ಇಲ್ಲಿ ನೀಡಲಾಗಿದೆ.



Source : Report of employment and unemployment survey (2009-10), Ministry of Labour and Employment, GOI derived from Sector paper(2012) for Karnataka's 12 th Five Year Plan (2012-17) for Karnataka Evaluation Authority, Planning and Programme Monitoring & Statistics Dept, GOK.

ಈ ಚಿತ್ರದಿಂದ ನಾವು ತಿಳಿದುಕೊಳ್ಳಬಹುದಾದ ಅಂಶವೆಂದರೆ, 1000 ಮಂದಿಯಲ್ಲಿ ಸಂಪೂರ್ಣ ಉನ್ನತ ಶಿಕ್ಷಣ ಪಡೆದ ಮಂದಿ 41 ಮಾತ್ರ. 2020 ರೊಳಗೆ ಕರ್ನಾಟಕ ಜ್ಞಾನಾಧಾರಿತ ಸಮಾಜವಾಗಿ ಪರಿವರ್ತನೆಗೊಳ್ಳಬೇಕಾದರೆ ಈ ಸಂಖ್ಯೆ ಕಡ್ಡಾಯವಾಗಿ ಏರಿಕೆಯಾಗಲೇಬೇಕು.

ಆಶಾದಾಯಕ ಸಂಗತಿಯೆಂದರೆ, ಕರ್ನಾಟಕದಲ್ಲಿ ಕಳೆದ ಕೆಲವು ವರ್ಷಗಳಿಂದ ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯುವವರ ಸಂಖ್ಯೆ ಸತತವಾಗಿ ಏರುಗತಿಯಲ್ಲಿದೆ. ಉನ್ನತ ಶಿಕ್ಷಣದ ಒಟ್ಟು ದಾಖಲೀಕರಣ ಅನುಪಾತ 2007–08 ರಲ್ಲಿ ಶೇ. 12.9 ರಷ್ಟಿದ್ದರೆ, 2008–09ರಲ್ಲಿ ಶೇ. 13.6 ರಷ್ಟಿತ್ತು[5]. ಇದಕ್ಕೆ ಹೋಲಿಸಿದರೆ, 2011–12ರಲ್ಲಿ ಈ ಪ್ರಮಾಣ ಶೇ. 18.1ಕ್ಕೆ ಏರಿಕೆಯಾಗಿದೆ. ಈ ಅನುಪಾತದ ಪೈಕಿ ಶೇ. 19.8ರಷ್ಟು ಬಾಲಕರಿದ್ದರೆ, ಶೇ. 16.3ರಷ್ಟು ಬಾಲಕಿಯರಿದ್ದಾರೆ. ಅದೇ ಪರಿಶಿಷ್ಟ ವರ್ಗ ಶೇ. 18.4, ಇವರಲ್ಲಿ ಶೇ. 22.5ರಷ್ಟು ಬಾಲಕರಿದ್ದರೆ, ಶೇ. 13.9ರಷ್ಟು ಬಾಲಕಿಯರಿದ್ದಾರೆ. ಅದರಂತೆಯೇ ಪರಿಶಿಷ್ಟ ಪಂಗಡದಲ್ಲಿ ಶೇ. 14.9 ರಷ್ಟು ಒಟ್ಟು ಪ್ರಮಾಣವಿದ್ದರೆ, ಶೇ. 18.5 ರಷ್ಟು ಬಾಲಕರು ಮತ್ತು ಶೇ. 11ರಷ್ಟು ಬಾಲಕಿಯರು ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಪ್ರವೇಶ ಪಡೆದಿದ್ದಾರೆ. ಅಂಕಿಅಂಶಗಳ ಲೆಕ್ಕಾಚಾರದಂತೆ, 2011–12ರಲ್ಲಿ

5

ಕರ್ನಾಟಕದಲ್ಲಿ ಒಟ್ಟು 12.60 ಲಕ್ಷ ಮಂದಿ ಉನ್ನತ ಶಿಕ್ಷಣದ ವ್ಯಾಪ್ತಿಗೆ ಬಂದಿದ್ದಾರೆ. 2020 ರೊಳಗೆ ಒಟ್ಟು ದಾಖಲೀಕರಣ ಅನುಪಾತ ಶೇ. 35ನ್ನು ತಲುಪಬೇಕಾದರೆ, ಈ ಪ್ರವೇಶ ಪಡೆಯುವವರ ಸಂಖ್ಯೆ 22.58 ಲಕ್ಷವನ್ನು ಮುಟ್ಟಬೇಕು.

ಕರ್ನಾಟಕದಲ್ಲಿ 2010–11ರಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಯ ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪಡೆದವರ ವಿವರ ಇಂತಿದೆ.

ಕೋಷ್ಟಕ – 4

ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ಪಡೆದವರ ವಿವರ (2011–12)

Courses	Arts	Commerce	Engineering	Science	Medicine	Education	Law	Management
Under Graduate	349668	190548	178432	90144	63260	9362	9308	6198
% of Enrolment	39	21.2	20	10	7	1	1	0.7
Post Graduate	11034	2938	3398	5474	6732	127	72	282
% of Enrolment	37	10	11	18	22	0.4	0.2	1

Source : Statistics of Higher and Technical Education 2009-10 (provisional)MHRD, GOI.





2010–11ನೇ ಸಾಲಿನಲ್ಲಿ 3134 ಶಿಕ್ಷಣ ಸಂಸ್ಥೆಗಳು ಕಾಲೇಜು ಶಿಕ್ಷಣದ ವ್ಯಾಪ್ತಿಯಲ್ಲಿದ್ದವು. ಈ ಪೈಕಿ ಅರ್ಧದಷ್ಟು (ಶೇ. 51.9) ಸಂಸ್ಥೆಗಳು ಖಾಸಗಿಯವು. ಇದು ಉನ್ನತ ಶಿಕ್ಷಣದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಪ್ರಗತಿಯನ್ನು ವಿವರಿಸುತ್ತದೆ. ಎಂಜಿನಿಯರಿಂಗ್ (ಶೇ. 87.2) ಮತ್ತು ಪಾಲಿಟೆಕ್ನಿಕ್ (ಶೆ.57.4) ಸಂಸ್ಥೆಗಳ ಪೈಕಿ ಬಹುಪಾಲು ಖಾಸಗಿಯವು.

ರಾಜ್ಯವಾರು 1998–2007ರೊಳಗೆ ಘೋಷಿತವಾಗಿರುವ ಪಿ.ಎಚ್.ಡಿ ಪದವಿಗಳನ್ನು ಗಮನಿಸಿದರೆ, ಕರ್ನಾಟಕವು ರಾಷ್ಟ್ರೀಯ ಮಟ್ಟದಲ್ಲಿ ಶೇ. 6.1ರಷ್ಟು ಪ್ರಮಾಣವನ್ನು ಹೊಂದಿದ್ದು, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶ[6] ರಾಜ್ಯಗಳಿಗಿಂತ ಹಿಂದಿದೆ. ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಗುರುತಿಸುವ ಪ್ರಮುಖ ಸೂಚಕಗಳೆಂದರೆ, ಪಡೆದ ಪೇಟೆಂಟ್‌ಗಳ ಸಂಖ್ಯೆ, ಗ್ರಂಥ–ಲೇಖನಗಳ ಪ್ರಕಟಣೆ ಹಾಗೂ ಅದರ ಪರಿಣಾಮಗಳು. 2006–07ರಲ್ಲಿ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿನ ಬೋಧಕ ವರ್ಗದ ಅನುಪಾತದ ಪ್ರಮಾಣವಾರು ಪ್ರಬಂಧ ಪ್ರಕಟಣೆಗಳನ್ನು ಗಮನಿಸಿದರೆ, ಗುಲ್ಬರ್ಗ ವಿಶ್ವವಿದ್ಯಾಲಯ (ಶೇ. 2.58) ಮೊದಲ ಸ್ಥಾನದಲ್ಲಿದ್ದರೆ, ಕುವೆಂಪು ವಿಶ್ವವಿದ್ಯಾಲಯ (ಶೇ. 0.54) ಕೊನೆಯ ಸ್ಥಾನದಲ್ಲಿದೆ. ಇದರೊಂದಿಗೆ ಈ ಪ್ರಬಂಧ ಪ್ರಕಟಣೆಗಳ ಪರಿಣಾಮವನ್ನು ಪರಿಗಣಿಸಿಲ್ಲ.

ಭಾರತದ ವಿವಿಧ ರಾಜ್ಯಗಳ ಪೈಕಿ 2009–10ರಲ್ಲಿ ಪೇಟೆಂಟ್ ಅರ್ಜಿ ಸಲ್ಲಿಸಿದವರ ಪೈಕಿ ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ. ಒಟ್ಟೂ 7044 ಅರ್ಜಿಗಳ ಪೈಕಿ 755 ಕರ್ನಾಟಕದವು. ಒಂದು ದಶಲಕ್ಷ ಜನಸಂಖ್ಯೆಗೆ ಶೇ. 12.4ರಷ್ಟು ಪೇಟೆಂಟ್ ಅರ್ಜಿಗಳನ್ನು ಸಲ್ಲಿಸಿರುವ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಆದರೆ, ಈ ಎರಡೂ ಸ್ಥಾನಗಳ ಮಾಹಿತಿ ಸಮರ್ಪಕವಾಗಿಲ್ಲ. ಯಾಕೆಂದರೆ, ಕರ್ನಾಟಕದಲ್ಲಿ ವಿಶ್ವವಿದ್ಯಾಲಯದ ವ್ಯಾಪ್ತಿಯಿಂದ ಹೊರಗೂ ಸಾಕಷ್ಟು ಸಂಖ್ಯೆಯ ಸಂಶೋಧನಾ ಸಂಸ್ಥೆಗಳು ಕಾರ್ಯಪ್ರವೃತ್ತವಾಗಿವೆ ಹಾಗೂ ಪ್ರಕಟಿತ ಸಂಶೋಧನಾ ಪ್ರಬಂಧ ಮತ್ತು ಪೇಟೆಂಟ್ ಅರ್ಜಿ ಸಲ್ಲಿಕೆಯ ಪ್ರಮಾಣದಲ್ಲಿ ಈ ಸಂಸ್ಥೆಗಳು ಪ್ರಮುಖ ಪಾತ್ರವನ್ನು ವಹಿಸಿವೆ.

ಯುಜಿಸಿ (ವಿಶ್ವವಿದ್ಯಾಲಯ ಧನಸಹಾಯ ಆಯೋಗ) 2012 ರಲ್ಲಿ ಹೊರತಂದ "ಭಾರತದಲ್ಲಿ ಉನ್ನತ ಶಿಕ್ಷಣ : ಒಂದು ನೋಟ" ವರದಿಯ ಪ್ರಕಾರ, ಕರ್ನಾಟಕದಲ್ಲಿ 2010–11 ರಲ್ಲಿ ಒಟ್ಟು 44 ವಿಶ್ವವಿದ್ಯಾಲಯ ಮತ್ತು ವಿಶ್ವವಿದ್ಯಾಲಯ ಮಟ್ಟದ ಶಿಕ್ಷಣ ಸಂಸ್ಥೆಗಳಿದ್ದವು. ಈ ಪೈಕಿ 22 ರಾಜ್ಯ ವಿಶ್ವವಿದ್ಯಾಲಯಗಳು, 2 ಖಾಸಗಿ ವಿಶ್ವವಿದ್ಯಾಲಯಗಳು, 18 ಡೀಮ್ಡ್ ವಿಶ್ವವಿದ್ಯಾಲಯಗಳು, ಒಂದು ಕೇಂದ್ರೀಯ ವಿಶ್ವವಿದ್ಯಾಲಯ ಹಾಗೂ ಒಂದು ರಾಷ್ಟ್ರೀಯ ಮಟ್ಟದ ಶಿಕ್ಷಣ ಸಂಸ್ಥೆ. ಇದೇ ಸಾಲಿನಲ್ಲಿ 3078 ಕಾಲೇಜುಗಳು ಕಾರ್ಯಪ್ರವೃತ್ತವಾಗಿದ್ದವು. ಇವುಗಳಲ್ಲಿ ವಿದ್ಯಾರ್ಥಿ–ಬೋಧಕ ಅನುಪಾತ 15ರಂತೆ[7,8] (15 ವಿದ್ಯಾರ್ಥಿಗೆ 1 ಬೋಧಕ) ಒಟ್ಟು 63,743 ಮಂದಿ ಬೋಧಕರು ಉನ್ನತ ಶಿಕ್ಷಣ ಬೋಧನೆಯಲ್ಲಿ ತೊಡಗಿದ್ದರು. ಹನ್ನೊಂದನೇ ಪಂಚವಾರ್ಷಿಕ ಯೋಜನೆ (2007–12)ರ ಪ್ರಕಾರ ಕರ್ನಾಟಕದಲ್ಲಿ ಶಿಕ್ಷಣಕ್ಕೆ ಹೂಡಲಾದ ಬಂಡವಾಳ 8,412.04 ಕೋಟಿ ರೂ.ಗಳು. ಈ ಮೊತ್ತದಲ್ಲಿ 1,368.70 ಕೋಟಿ ರೂ. (ಶೇ. 16.27) ವಿಶ್ವವಿದ್ಯಾಲಯ, ಕಾಲೇಜು ಶಿಕ್ಷಣ, ತಾಂತ್ರಿಕ ಹಾಗೂ ವೃತ್ತಿ ಶಿಕ್ಷಣ ವಲಯಗಳನ್ನು ಹೊಂದಿರುವ ಉನ್ನತ ಶಿಕ್ಷಣದ ಪಾಲಾಗಿದೆ. ಅದರಂತೆ 12ನೇ ಪಂಚವಾರ್ಷಿಕ ಯೋಜನೆಯಡಿ ಉನ್ನತ ಶಿಕ್ಷಣಕ್ಕೆ ಅಂದಾಜು ಮಾಡಿರುವ ಮೊತ್ತದ ಪ್ರಮಾಣ ಜಿಎಸ್‌ಡಿಪಿ ಯ ಶೇ. 6ರಷ್ಟು. ಇದು ಹನ್ನೊಂದನೇ ಪಂಚವಾರ್ಷಿಕ ಯೋಜನೆಯಡಿ ನೀಡಲಾಗಿದ್ದ ಶೇ. 3.3 ಕ್ಕಿಂತ ಹೆಚ್ಚು. ಉಜ್ವಲ ಭವಿಷ್ಯದತ್ತ ಸಾಗಲು, ಉದ್ದೇಶಿತ ಗುರಿ ಮುಟ್ಟಲು ಕರ್ನಾಟಕದಲ್ಲಿ ಉನ್ನತ ಶಿಕ್ಷಣದ ಈ ಹಿನ್ನೆಲೆ ಮಹತ್ವಪೂರ್ಣದ್ದು ಮತ್ತು ವಿಶ್ವಾಸನೀಯ ನೆಲೆಯದ್ದು.

---

[6] Trends in Higher Education: Creation and Analysis of Database of PhDs in India, Anitha Kurup and Jagdish Arora, National Institute of Advanced Studies, 2010.

[7] Statistics of Higher and technical Education 2009-10 Provisional) MHRD, GOI

[8] Total number of Teachers was 63743 for 937131 total number of students enrolled (MHRD, 2009-2010).

ಕರ್ನಾಟಕದ ಉನ್ನತ ಶಿಕ್ಷಣಕ್ಕೊಂದು ದೂರದೃಷ್ಟಿ

ಕರ್ನಾಟಕವನ್ನು ಸ್ಪಂದನಶೀಲ ಜ್ಞಾನಾಧಾರಿತ ಸಮಾಜವನ್ನಾಗಿ ರೂಪುಗೊಳಿಸುವುದಲ್ಲದೇ, ಉನ್ನತ ಶಿಕ್ಷಣದಲ್ಲಿ ಅತ್ಯುನ್ನತ ತಾಣವನ್ನಾಗಿ ಅಭಿವೃದ್ಧಿಗೊಳಿಸಲು ಕೆಲವು ಕ್ರಮಗಳು ತೀರಾ ಅವಶ್ಯ. ಜಾಗತಿಕ ಗುಣಮಟ್ಟದೊಂದಿಗೆ ಸಾರ್ವತ್ರಿಕ ಲಭ್ಯತೆ ಮತ್ತು ಪಾರದರ್ಶಕತೆ, ಹೆಚ್ಚು ಆಯ್ಕೆಗಳ ಸಾಧ್ಯತೆಯ ವಾತಾವರಣವನ್ನು ಶೈಕ್ಷಣಿಕ ನೆಲೆಯಲ್ಲಿ ನಿರ್ಮಿಸಿದರೆ, ಅದು ಹೆಚ್ಚು ಸೃಜನಶೀಲ ಮತ್ತು ಉದ್ಯಮಶೀಲ ಸ್ಫೂರ್ತಿಯೊಂದಿಗೆ ಜವಾಬ್ದಾರಿಯುತ ನಾಗರಿಕತ್ವದ ಅಗತ್ಯವನ್ನೂ ಪ್ರೋತ್ಸಾಹಿಸಬಲ್ಲದು.

ಕರ್ನಾಟಕವನ್ನು ಸ್ಪಂದನಶೀಲ ಜ್ಞಾನಾಧಾರಿತ ಸಮಾಜವನ್ನಾಗಿ ಪರಿವರ್ತಿಸುವ ಬಗೆ

2020 ವಿಷನ್ (ದೂರದೃಷ್ಟಿ)ನಡಿ ಗುರುತಿಸಲಾಗಿರುವ 12 ಪ್ರಮುಖ ಅಂಶಗಳಲ್ಲಿ ಕರ್ನಾಟಕವನ್ನು ಸ್ಪಂದನಶೀಲ ಜ್ಞಾನಾಧಾರಿತ ಸಮಾಜವನ್ನಾಗಿ ಪರಿವರ್ತಿಸುವುದೂ ಸೇರಿದೆ. ಇದನ್ನು ಸಾಧಿಸುವ ದಿಸೆಯಲ್ಲಿ ಈಗಾಗಲೇ ರಾಜ್ಯ ಸರಕಾರವು ಜ್ಞಾನಾಧಾರಿತ ಉದ್ಯಮ ಕ್ಷೇತ್ರಗಳಾದ ಬಾಹ್ಯಾಕಾಶ ತಂತ್ರಜ್ಞಾನ, ವಿದ್ಯುನ್ಮಾನ ಮತ್ತು ಸಂವಹನ, ಸಾಫ್ಟ್‌ವೇರ್, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮುಂತಾದವುಗಳಿಗೆ ಸೂಕ್ತ ನೆಲೆಯನ್ನು ಕಲ್ಪಿಸಿದೆ. ಇವುಗಳನ್ನು ಆಧರಿಸಿ ಕ್ಷೇತ್ರಗಳ ಸುಸ್ಥಿರ ಅಭಿವೃದ್ಧಿ ಹಾಗೂ ಹೆಚ್ಚಿನ ಲಾಭ ಗಳಿಸುವತ್ತ ಸೂಕ್ತ ಕ್ರಮಗಳನ್ನು ಅನುಸರಿಸಬೇಕು. ಈ ಸ್ಪರ್ಧಾತ್ಮಕ ಹಂತವನ್ನು ತಲುಪಬೇಕೆಂದರೆ, ಆರೋಗ್ಯ, ಕೃಷಿ, ಗ್ರಾಮೀಣಾಭಿವೃದ್ಧಿ, ಸಣ್ಣ ಕೈಗಾರಿಕೆಗಳು ಮುಂತಾದ ಕ್ಷೇತ್ರಗಳಿಗೆ ಜ್ಞಾನಾಧಾರಿತ ಆನ್ವಯಿಕಗಳು ಅಗತ್ಯವಿದೆ. ಜನರ ಜೀವನಮಟ್ಟ ಸುಧಾರಣೆಗೂ ಈ ಆನ್ವಯಿಕಗಳು ಅವಶ್ಯಕ. ಇದಕ್ಕೆ ಉಪಕ್ರಮವೆನ್ನುವಂತೆ ರಾಜ್ಯವು, ಜ್ಞಾನಾಧಾರಿತ ಸಮಾಜದ ಸಹಜ ಗುಣಲಕ್ಷಣಗಳನ್ನು ಕ್ರಿಯಾಶೀಲಗೊಳಿಸಬೇಕು. ಈ ಕೆಳಗಿನ ಚಿತ್ರವು ಒಂದು ಜ್ಞಾನಾಧಾರಿತ ಸಮಾಜದ ಸಹಜ ಗುಣಲಕ್ಷಣಗಳನ್ನು ಹೇಳುತ್ತಲೇ, ಅವುಗಳ ಪರಸ್ಪರ ಸಂಬಂಧ-ಸಂಪರ್ಕವನ್ನು ಹೇಳುತ್ತದೆ.



1. ಸಾರ್ವತ್ರಿಕ ಅಸ್ತಿತ್ವ (universal presence) – ಎಲ್ಲದರಲ್ಲೂ ಜ್ಞಾನದ ಅಸ್ತಿತ್ವ
2. ಸಾರ್ವತ್ರಿಕ ಲಭ್ಯತೆ (universal access) – ಎಲ್ಲರಿಗೂ ಜ್ಞಾನವು ಲಭ್ಯ
3. ಜ್ಞಾನಾರ್ಜನೆಯ ಸಮಾನ ಅವಕಾಶ (equity in access) – ಎಲ್ಲರಿಗೂ ಜ್ಞಾನ ಪಡೆಯಲು ಸಮಾನ ಅವಕಾಶ.
4. ಜ್ಞಾನ ಸಬಲೀಕರಣ (knowledge empowerment) – ಸಮಾಜದ ನಾಗರಿಕರ ಸಬಲೀಕರಣಕ್ಕೆ ತಳಮಟ್ಟದ ದೃಷ್ಟಿಕೋನ.
5. ಮುಂದುವರಿಕೆ ಶಿಕ್ಷಣ (lifelong learning) : ನಿರಂತರ ಕಲಿಕಾ ಪ್ರಕ್ರಿಯೆ, ಅಭಿವೃದ್ಧಿ ಮತ್ತು ಜ್ಞಾನಾಧಾರಿತ ತಲೆಮಾರುಗಳ ಸೃಷ್ಟಿ.

ಈ ಎಲ್ಲ ಗುಣಲಕ್ಷಣಗಳೂ ಮೂರು ಪ್ರಧಾನ ಅಂಶಗಳನ್ನು ಆಧರಿಸಿವೆ. ಅವುಗಳೆಂದರೆ ;

- ಜ್ಞಾನದ ಸೃಜನೆ ಅಥವಾ ಸೃಷ್ಟಿ – ಜ್ಞಾನವನ್ನು ಸೃಷ್ಟಿಸುವುದು
- ಜ್ಞಾನದ ಪ್ರಸರಣ – ಅದರ ಪ್ರಸರಣ ಮತ್ತು ವಿನಿಮಯ
- ಜ್ಞಾನದ ಆನ್ವಯಿಕ – ಜ್ಞಾನವನ್ನು ಪರಿಣಾಮಕಾರಿ ಕ್ರಿಯೆಗೆ ಪರಿವರ್ತಿಸುವುದು.

ಈ ಸಂದರ್ಭವನ್ನು ಉಲ್ಲೇಖಿಸಿ ವಿವರಿಸುವುದಾದರೆ, ಜ್ಞಾನವನ್ನು ಒಂದು ಪಿರಮಿಡ್ ಆಕಾರದಲ್ಲಿ ಊಹಿಸಿಕೊಂಡರೆ, ಮೂರು ಹಂತಗಳು ಕಂಡುಬರುತ್ತವೆ. ಅವುಗಳೆಂದರೆ, ಆರ್ಥಿಕವಾಗಿ ಶೈಕ್ಷಣಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಪ್ರಬಲವಾಗಿರುವಂಥದ್ದು. ಈ ಶೈಕ್ಷಣಿಕ ಪ್ರಾಬಲ್ಯದ ಹಂತದಲ್ಲಿ ಬರುವ ಉನ್ನತ ಶಿಕ್ಷಣ, ಆರ್ಥಿಕ ಮತ್ತು ಸಾಂಸ್ಕೃತಿಕ ಪ್ರಾಬಲ್ಯಕ್ಕೆ ತನ್ನದೇ ಆದ ರೀತಿಯಲ್ಲಿ ಕೊಡುಗೆಯನ್ನು ನೀಡುತ್ತದೆ. ಈ ಕಾರಣಗಳಿಂದ ಸಾಮಾನ್ಯ ಶಿಕ್ಷಣ ಮತ್ತು ಅದರಲ್ಲೂ ಉನ್ನತ ಶಿಕ್ಷಣವು ಕರ್ನಾಟಕವನ್ನು ಒಂದು ಸ್ಪಂದನಶೀಲ ಜ್ಞಾನಾಧಾರಿತ ಸಮಾಜವನ್ನಾಗಿ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಈ ರೂಪಾಂತರ ಸಾಧ್ಯವಾಗಬೇಕಾದರೆ, ಕರ್ನಾಟಕದಲ್ಲಿನ ಉನ್ನತ ಶಿಕ್ಷಣ ವ್ಯವಸ್ಥೆಯು ಈ ಕೆಳಕಂಡ ಉದ್ದೇಶಗಳನ್ನು ಈಡೇರಿಸುವಲ್ಲಿ ಸಫಲವಾಗಬೇಕು. ಅವುಗಳೆಂದರೆ :

1. ಉನ್ನತ ಶಿಕ್ಷಣವನ್ನು ಪಡೆಯಲು ಎಲ್ಲರಿಗೂ ಅವಕಾಶಗಳನ್ನು ಕಲ್ಪಿಸಬೇಕು ಹಾಗೂ ಸಾಮಾಜಿಕ-ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ, ಮಹಿಳೆಯರಿಗೆ ಹಾಗೂ ವಿಭಿನ್ನ ಸಾಮರ್ಥ್ಯದವರಿಗೆ ಉನ್ನತ ಶಿಕ್ಷಣ ಪಡೆಯುವಂತೆ ಪ್ರೋತ್ಸಾಹಿಸಬೇಕು. ಇದಕ್ಕಿರುವ ಅಡ್ಡಿಗಳನ್ನು ನಿವಾರಿಸಬೇಕು.

2. ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಲ್ಲಿ ಅತ್ಯುತ್ತಮ ಬೋಧಕ ವರ್ಗವನ್ನು ಹೊಂದಲು ಸಹಕರಿಸಬೇಕು ಹಾಗೂ ಬೋಧಕ ಮತ್ತು ಸಂಶೋಧಕರ ಹುದ್ದೆಗಳಿಗೆ ಪ್ರತಿಭಾವಂತರನ್ನು ಆಕರ್ಷಿಸಬೇಕು.

3. ವಿದ್ಯಾರ್ಥಿ ಸಮುದಾಯವನ್ನೇ ಕೇಂದ್ರ ನೆಲೆಯಾಗಿಟ್ಟುಕೊಂಡು, ದಕ್ಷ ಮತ್ತು ಕ್ರಿಯಾಶೀಲ ಮೌಲ್ಯಮಾಪನ, ಸಮಕಾಲೀನ ಪಠ್ಯಕ್ರಮ ಹಾಗೂ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗುವ ಪದ್ಧತಿಗಳನ್ನು ಅಳವಡಿಸಬೇಕು.

4. ಉನ್ನತ ಶಿಕ್ಷಣದ ವ್ಯಾಪ್ತಿಯನ್ನು ವಿಸ್ತರಿಸುವ ಹಂತವಾಗಿ, ವೃತ್ತಿಪರ ಶಿಕ್ಷಣವನ್ನು ಉನ್ನತ ಶಿಕ್ಷಣದೊಳಗೆ ಏಕೀಕೃತಗೊಳಿಸಿ, ಸಮಗ್ರಗೊಳಿಸುವ ಮೂಲಕ ಸರಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಸಾಧ್ಯತೆಗಳನ್ನು ಹೆಚ್ಚುಗೊಳಿಸುವುದು, ಮತ್ತಷ್ಟು ವೈವಿಧ್ಯಮಯಗೊಳಿಸುವುದು ಹಾಗೂ ಹೊಸ ಸಂಸ್ಥೆಗಳನ್ನು ಸ್ಥಾಪಿಸುವುದು.

5. ಉನ್ನತ ಶಿಕ್ಷಣದಲ್ಲಿನ ಅಂತಾರಾಷ್ಟ್ರೀಕರಣವನ್ನು ಪ್ರೋತ್ಸಾಹಿಸುವ ದಿಸೆಯಲ್ಲಿ ವಿದೇಶದ ಸರಕಾರಗಳೊಂದಿಗೆ, ಸಂಸ್ಥೆಗಳೊಂದಿಗೆ ಹಾಗೂ ಪ್ರಾದೇಶಿಕ ಸಂಶೋಧನಾ ಸಂಸ್ಥೆಗಳೊಂದಿಗೆ ಪಾಲುದಾರಿಕೆಗೆ ಮುಂದಾಗಬೇಕು. ಜಾಗತಿಕ ಮಟ್ಟದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಏಷ್ಯಾ ಮತ್ತು ಆಫ್ರಿಕಾ ಖಂಡದ ಪ್ರಾಮುಖ್ಯತೆಯನ್ನು ಅರಿತು ಅವುಗಳತ್ತ ರಾಜ್ಯವು ಗಮನರಿಸಬೇಕು.

6. ರಾಜ್ಯದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸ್ವಾಯತ್ತೆ, ನಾವೀನ್ಯತೆ ಹಾಗೂ ಶೈಕ್ಷಣಿಕ ಸುಧಾರಣೆಗಳನ್ನು ಪ್ರೋತ್ಸಾಹಿಸಬೇಕು.

7. ಸರಕಾರಿ, ಖಾಸಗಿ–ಸರಕಾರಿ ಹಾಗೂ ಖಾಸಗಿ ವಲಯವೂ ಸೇರಿದಂತೆ ಎಲ್ಲ ಮಾರ್ಗಗಳಿಂದಲೂ ಉನ್ನತ ಶಿಕ್ಷಣದ ವರ್ಧನೆ–ವಿಸ್ತರಣೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು.

8. ಅಂತರ್‌ಶಿಸ್ತೀಯ ಮತ್ತು ಬಹುಶಿಸ್ತೀಯ ಅಧ್ಯಯನವನ್ನು ಪ್ರೋತ್ಸಾಹಿಸಬೇಕು.

ಈ ಎಲ್ಲ ಮೇಲಿನ ಉದ್ದೇಶಗಳು ಕಾರ್ಯರೂಪಕ್ಕೆ ಬರಬೇಕೆಂದರೆ, ಶಾಲಾ ಶಿಕ್ಷಣ ಹಂತದಿಂದ ಹಿಡಿದು ಶಿಕ್ಷಣದ ವಿವಿಧ ಹಂತಗಳನ್ನೂ ಒಳಗೊಂಡಂತೆ ಸಾಮಾನ್ಯ, ತಾಂತ್ರಿಕ, ವೃತ್ತಿಪರ ಹಾಗೂ ವೃತ್ತಿ ಶಿಕ್ಷಣದ ನಡುವಿನ ಪರಸ್ಪರ ಇರುವ ಸಾಧ್ಯತೆಗಳನ್ನು ಸ್ಪಷ್ಟವಾಗಿ ಅರಿತುಕೊಳ್ಳುವುದಲ್ಲದೇ, ವಿಶ್ಲೇಷಿಸಿರಬೇಕು. ಕರ್ನಾಟಕದಲ್ಲಿನ ಉನ್ನತ ಶಿಕ್ಷಣ ಕ್ಷೇತ್ರದಲ್ಲಿನ ಸಾಧ್ಯತೆಯನ್ನು ಚಿತ್ರ 4 ವಿವರಿಸುತ್ತದೆ.

ಕರ್ನಾಟಕದಲ್ಲಿನ ಉನ್ನತ ಶಿಕ್ಷಣ ಸಂರಚನೆ



Source : Deloitte Sector paper for Karnataka's 12 th Five Year Plan (2012-17) from Karnataka Evaluation Authority, Planning and Programme Monitoring & Statistics Dept. GOK : Pp 7.

ಈ ಮೇಲೆ ವಿವರಿಸಲಾದ ಉದ್ದೇಶಗಳ ಈಡೇರಿಕೆಗೆ ಮತ್ತು ರಾಜ್ಯದ ಉನ್ನತ ಶಿಕ್ಷಣ ಕ್ಷೇತ್ರದ ಪರಿವರ್ತನೆಗೆ ಸ್ಪಷ್ಟ ಧ್ಯೇಯದಿಂದ ಗುರಿಯನ್ನು ಹೊಂದಿ ಕಾರ್ಯಗತಗೊಳಿಸಬೇಕು.

ಗುರಿಗಳು

ಕರ್ನಾಟಕದಲ್ಲಿನ ಉನ್ನತ ಶಿಕ್ಷಣ 2020ರ ಗುರಿ ವಿವರ ಇಂತಿದೆ.

1. ಅತ್ಯುನ್ನತ ಗುಣಮಟ್ಟದ ಬೋಧಕ ವರ್ಗ, ಹೆಚ್ಚು ಸಂಪನ್ಮೂಲಗಳನ್ನು ಒಳಗೊಂಡು ಹೆಚ್ಚು ವೈವಿಧ್ಯಮಯ ಕೋರ್ಸ್‌ಗಳನ್ನು ಪೂರೈಸುವತ್ತ ಪ್ರಸ್ತುತ ಇರುವ ಸಂಸ್ಥೆಗಳ ಸಾಮರ್ಥ್ಯ ಹೆಚ್ಚಳಕ್ಕೆ ಕ್ರಮ ಕೈಗೊಳ್ಳುವುದು ಇಲ್ಲವೇ ಈ ಉದ್ದೇಶ ಸಾಧನೆಗೆ ಹೊಸ ಸಂಸ್ಥೆಗಳನ್ನು ಸ್ಥಾಪಿಸುವುದು.
2. ಭೌಗೋಳಿಕವಾಗಿ, ಸಾಮಾಜಿಕ–ಆರ್ಥಿಕವಾಗಿ ಹಿಂದುಳಿದ, ಲಿಂಗ, ವಿಭಿನ್ನ ಸಾಮರ್ಥ್ಯವುಳ್ಳವರು–ಎಲ್ಲರಿಗೂ ಮುಂದುವರಿಕೆ ಶಿಕ್ಷಣದ ಮೂಲಕ ನಿರಂತರ ಕಲಿಕೆಗೆ ಸಮಾನ ಅವಕಾಶಗಳನ್ನು ಕಲ್ಪಿಸುವ ಬಗ್ಗೆ ಭರವಸೆ ನೀಡುವುದು.
3. ಬೋಧನೆ–ಕಲಿಕೆ ಪ್ರಕ್ರಿಯೆ, ಸಂಶೋಧನೆ, ನಾವೀನ್ಯತೆ, ಆಡಳಿತ, ಸಾಂಸ್ಥಿಕ ಸಂರಚನೆಯಲ್ಲಿ ಉತ್ಕೃಷ್ಟತೆಯನ್ನು ಸಾಧಿಸುವುದಲ್ಲದೇ, ಸಾಮಾಜಿಕ ಹೊಣೆಗಾರಿಕೆ ನಿರ್ವಹಣೆ, ಮೌಲ್ಯಮಾಪನ, ಪ್ರಸ್ತುತತೆ ಹಾಗೂ ಮಾಹಿತಿ ಸಂವಹನ ತಂತ್ರಜ್ಞಾನ ಬಳಕೆಯಲ್ಲೂ ಗರಿಷ್ಠ ಸಾಧನೆ ಕೈಗೊಳ್ಳಬೇಕು.

ಜ್ಞಾನಾಧಾರಿತ ಸಮಾಜದ ನಿರ್ಮಾಣ ಮತ್ತು ಶೈಕ್ಷಣಿಕ ಉತ್ಕೃಷ್ಟತೆಯ ಕೇಂದ್ರವನ್ನಾಗಿ ಕರ್ನಾಟಕವನ್ನು ರೂಪಿಸಲು ಪೂರಕವಾಗುವಂತೆ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಕೈಗೊಳ್ಳಬೇಕಾದ ಬದಲಾವಣೆಗಳಲ್ಲಿ, ಮೊದಲಿಗೆ ವಿಸ್ತರಣೆ, ಸಮತೆ ಹಾಗೂ ಉತ್ಕೃಷ್ಟತೆಯ ಅಂಶಗಳ ಬಗ್ಗೆ ಗಮನಹರಿಸಬೇಕಿದೆ. ಈ ಮೇಲೆ ಹೇಳಲಾದ ಮೂಲಭೂತ ತತ್ವಗಳನ್ನು ವಿಸ್ತರಿಸಿದರೆ, 2020ರಷ್ಟರಲ್ಲಿ ಪ್ರಮುಖ ಬದಲಾವಣೆಗಳನ್ನು ಸಾಧಿಸುವತ್ತ ಹೆಜ್ಜೆ ಇಡಲು ಸಾಧ್ಯ. ಈ ಕೆಳಗಿನ ಐದನೇ ಚಿತ್ರವು ಗುರಿಯ ಪ್ರಮುಖ ಅಂಶಗಳನ್ನು ಮತ್ತು ಪ್ರಮುಖ ಸೂಚಕಗಳನ್ನು ಹಾಗೂ ರೂಪಾಂತರದ ಸಾಧ್ಯತೆಯನ್ನು ವಿವರಿಸುತ್ತದೆ.

ಚಿತ್ರ 5

ಜ್ಞಾನಾಧಾರಿತ ಸಮಾಜವಾಗಿ ರೂಪುಗೊಳ್ಳುವತ್ತ ಪ್ರಮುಖ ಅಂಶಗಳು, ಸೂಚಕಗಳು ಮತ್ತು ರೂಪಾಂತರದ ಸಾಧ್ಯತೆಗಳು

ವಿಸ್ತರಣೆ

- ಬೇಡಿಕೆಯನ್ನು ಪೂರೈಸಲು ಅಗತ್ಯವಿರುವ ಸಂಖ್ಯೆಯ ಸಂಸ್ಥೆಗಳು ಹಾಗೂ ಕೈಗೆಟುಕುವ (ದುಬಾರಿಯಲ್ಲದ್ದರ) ಲಭ್ಯತೆ.
- **ಪ್ರವೇಶ ಮತ್ತು ದಾಖಲೀಕರಣ ಸೂಚಕಗಳು** : ಜಿಇಆರ್ ; ರಾಜ್ಯದಲ್ಲಿರುವ ಉನ್ನತ ಶಿಕ್ಷಣ ಸಂಸ್ಥೆಗಳು (ಬೇಡಿಕೆ ಮತ್ತು ಪೂರೈಕೆ); ಬೋಧಕ ವರ್ಗ; ಸಂಪನ್ಮೂಲ ಮತ್ತು ಕೋರ್ಸ್‌ಗಳು.
- **ರೂಪಾಂತರ ಅಂಶಗಳು** : ಗುಣಮಟ್ಟದ ಉನ್ನತ ಶಿಕ್ಷಣಕ್ಕೆ ಹೆಚ್ಚು ಅವಕಾಶ ಕಲ್ಪಿಸುವುದು, ಪದವಿಪೂರ್ವ ಶಿಕ್ಷಣ ಹಂತದಲ್ಲಿ ವಿಜ್ಞಾನ, ಮಾನವಿಕ ಮತ್ತು ವೃತ್ತಿಪರ ಶಿಕ್ಷಣದ ಅಂಶಗಳನ್ನು ಸಂಯುಕ್ತಗೊಳಿಸುವುದು. ಇದರಿಂದ ಮುಂದಿನ ಹಂತದಲ್ಲಿ ಯಾವುದೇ ಮಾದರಿಯ ಶಿಕ್ಷಣ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಂಡರೂ ಮೂಲಭೂತವಾದ ಕೆಲವು ಕೌಶಲಗಳನ್ನು ಹೊಂದಿರಬಲ್ಲರು.

ಸಮತೆ

- ಉನ್ನತ ಶಿಕ್ಷಣದಲ್ಲಿ ಸಮಾಜದ ಎಲ್ಲ ವರ್ಗಗಳಿಗೆ ಸಮಾನ ಅವಕಾಶವನ್ನು ಕಲ್ಪಿಸುವುದು.
- **ಸಮಗ್ರ ಸೂಚಕಗಳು** : ಸಾಮಾಜಿಕ ಜನಸಂಖ್ಯಾ ಸಂರಚನೆ; ಲಿಂಗ; ವಿಭಿನ್ನ ಸಾಮರ್ಥ್ಯದ ಶಿಕ್ಷಣದ ಅಗತ್ಯಗಳು; ಸಾಮಾಜಿಕ–ಆರ್ಥಿಕ ಸ್ಥಿತಿಗತಿ; ಮುಂದುವರಿಕೆ ಶಿಕ್ಷಣ ಮತ್ತು ಭೌಗೋಳಿಕತೆ.
- **ರೂಪಾಂತರ ಅಂಶಗಳು** : ತಾರತಮ್ಯ ಮುಕ್ತ ಶೈಕ್ಷಣಿಕ ವಾತಾವರಣವನ್ನು ಕಲ್ಪಿಸುವುದು.

ಉತ್ಕೃಷ್ಟತೆ

- ಉತ್ತಮ ಫಲಿತಾಂಶ ಮತ್ತು ಗುಣಮಟ್ಟದ ಸಾಧನೆಗಾಗಿ ಸೂಕ್ತ ಮೂಲಭೂತ ಸೌಕರ್ಯ, ತರಬೇತಿ ಪಡೆದ ಬೋಧಕ ವರ್ಗ ಹಾಗೂ ಪರಿಣಾಮಕಾರಿ ಶಿಕ್ಷಣ ವಿಧಾನಗಳನ್ನು ಉನ್ನತ ಶಿಕ್ಷಣ ಒದಗಿಸುವ ಸಂಸ್ಥೆಗಳಲ್ಲಿ ಜಾರಿಗೊಳಿಸುವುದು.
- ಗುಣಮಟ್ಟ ಸೂಚಕಗಳು : ಮೌಲ್ಯಮಾಪನ ಮತ್ತು ಮೌಲ್ಯಾಂಕನ; ಆಡಳಿತ, ಮಾಹಿತಿ ಸಂವಹನ ತಂತ್ರಜ್ಞಾನ; ಬೋಧನೆ–ಕಲಿಕೆ ಪ್ರಕ್ರಿಯೆ ; ಸಾಮಾಜಿಕ ಸಾಂಸ್ಥಿಕ ಸಂರಚನೆ/ಪ್ರಸ್ತುತತೆ; ಮೌಲ್ಯಾಂಕನ, ಸಂಶೋಧನೆಯಲ್ಲಿ ನಾವೀನ್ಯತೆ.
- ರೂಪಾಂತರ ಅಂಶಗಳು : ವಿಶ್ವವಿದ್ಯಾಲಯಗಳು ಉತ್ಕೃಷ್ಟತೆಯ ಕೇಂದ್ರಗಳಾಗಬೇಕು; ಆಡಳಿತ ವಿನ್ಯಾಸ ಮತ್ತು ವಿತರಣೆಯಲ್ಲದೇ ಪಠ್ಯಕ್ರಮದಲ್ಲೂ ಮಾಹಿತಿ ಸಂವಹನ ತಂತ್ರಜ್ಞಾನದ ಆನ್ವಯಿಕಗಳ ಸೇರ್ಪಡೆ; ಕಾಲೇಜುಗಳನ್ನು ಸಮುದಾಯ ಸಂಪನ್ಮೂಲ ಕೇಂದ್ರಗಳನ್ನಾಗಿಸುವುದು; ರಾಜ್ಯದ ಉನ್ನತ ಶಿಕ್ಷಣದ ಆಡಳಿತ ಮತ್ತು ನಿರ್ವಹಣೆಯಲ್ಲಿ ವೃತ್ತಿಪರತೆ ಮತ್ತು ಸಮಕಾಲೀನತೆಯನ್ನು ರೂಢಿಸುವುದು.

ವಿಸ್ತರಣೆ–ಮಾರ್ಗ

ಕರ್ನಾಟಕದಲ್ಲಿ ಇತ್ತೀಚಿನ ವರ್ಷಗಳಲ್ಲಿ ಒಟ್ಟು ದಾಖಲೀಕರಣ ಅನುಪಾತದಲ್ಲಿ ಹೆಚ್ಚಳ ಕಂಡುಬಂದಿದೆ. ಅಂದರೆ, ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯಲು ಇರುವ ಕನಿಷ್ಠ ಅರ್ಹತೆಯನ್ನು ಪಡೆದವರ ಸಂಖ್ಯೆ ಏರಿಕೆಯಾಗಿದೆ. 2020ರಲ್ಲಿ ಶೇ. 35ರಷ್ಟು ಒಟ್ಟು ದಾಖಲೀಕರಣ ಅನುಪಾತ ಸಾಧ್ಯವಾಗಬೇಕಾದರೆ, 22 ಲಕ್ಷ (22,58,000) ಮಂದಿಗೆ ಅವಕಾಶವನ್ನು ಕಲ್ಪಿಸುವ ನೆಲೆಯಲ್ಲಿ ಉನ್ನತ ಶಿಕ್ಷಣ ಕ್ಷೇತ್ರ ವಿಸ್ತಾರಗೊಳ್ಳಬೇಕು. ಪ್ರಸ್ತುತ ಇರುವ ಕಾಲೇಜುಗಳು, ವಿಶ್ವವಿದ್ಯಾಲಯಗಳ ಪ್ರವೇಶ ಸಂಖ್ಯೆಯ ಮಿತಿಯನ್ನು ಹೆಚ್ಚಿಸುವ ಅಥವಾ ಇನ್ನಷ್ಟು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ವಿಸ್ತರಣೆ ಸಾಧ್ಯವಾಗಬೇಕಿದೆ. ವಿದ್ಯಾರ್ಥಿ ಸಮುದಾಯದ ಹೆಚ್ಚಳದ ಹಿನ್ನೆಲೆಯಲ್ಲಿ ವ್ಯವಸ್ಥೆಯಂತೂ ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲೇಬೇಕು. ಇದರೊಂದಿಗೆ, ಉತ್ತಮ ಗುಣಮಟ್ಟದ ಬೋಧಕ ವರ್ಗ ಹಾಗೂ ಮೂಲಭೂತ ಸೌಕರ್ಯಗಳ ನೆಲೆಯಲ್ಲೂ ಹೆಚ್ಚಳವಾಗಬೇಕಿದೆ. ಒಟ್ಟು ದಾಖಲೀಕರಣ ಅನುಪಾತ ಹೆಚ್ಚಳವಾಗಬೇಕಾದರೆ, ಉನ್ನತ ಶಿಕ್ಷಣವನ್ನು ಬಯಸುವ ಸಮುದಾಯಕ್ಕೆ ಪ್ರವೇಶಾವಕಾಶ ನೀಡಬೇಕು. ಅದರಲ್ಲೂ, ಮೊದಲ ತಲೆಮಾರಷ್ಟೇ ಶಿಕ್ಷಣ ಕಲಿತಿರುವ ಮನೆಗಳ ಮಕ್ಕಳಿಗೆ, ಸಮಾಜದಲ್ಲಿ ಹಿಂದುಳಿದಿರುವ ವಿವಿಧ ವರ್ಗಗಳ ಮಕ್ಕಳಿಗೆ ಆದ್ಯತೆ ನೀಡಬೇಕು. ಶ್ರೇಷ್ಠತೆಯಿಂದ ಸಾಮೂಹಿಕ ಉನ್ನತ ಶಿಕ್ಷಣದತ್ತ ಚಲಿಸಬೇಕು. ಇದು ಸಾಧ್ಯವಾಗಬೇಕಾದರೆ, ಶಿಕ್ಷಣವೆಂಬ ಪರಿಕಲ್ಪನೆಯೇ ಇನ್ನಷ್ಟು ಸಮಗ್ರಗೊಳ್ಳಬೇಕು.

ಈ ಸನ್ನಿವೇಶದಲ್ಲಿ ಉನ್ನತ ಶಿಕ್ಷಣದ ಪ್ರವೇಶಕ್ಕೆ ಸಂಬಂಧಿಸಿದಂತೆ ಎರಡು ಬೃಹತ್ ಸವಾಲುಗಳು ನಮ್ಮ ಮುಂದಿವೆ. ಮೊದಲಿಗೆ, ಈಗಿರುವ ಉನ್ನತ ಶಿಕ್ಷಣ ಕ್ಷೇತ್ರದ ವ್ಯಾಪ್ತಿಯನ್ನು ಹಿಗ್ಗಿಸುವುದು (ವಿಸ್ತರಣೆ). ಎರಡನೆಯದಾಗಿ, ಉನ್ನತ ಶಿಕ್ಷಣ ಹೊಂದುವ ಬಯಕೆ ಹೊಂದಿದ್ದೂ, ಈ ವ್ಯಾಪ್ತಿಗೆ ಬರಲಾಗದ ಅಸಂಖ್ಯಾತ ಮಂದಿಗೆ ಈ ಕ್ಷೇತ್ರ ಆರ್ಥಿಕವಾಗಿ ಕೈಗೆಟುಕುವಂತೆ ಮಾಡುವುದು. ಈ ನಿಟ್ಟಿನಲ್ಲಿ ರಾಜ್ಯ ಸರಕಾರ ಅತ್ಯಂತ ಮಹತ್ವದ ಪಾತ್ರ ವಹಿಸಬೇಕಿದೆ. ಆಗ ಮಾತ್ರ ಉನ್ನತ ಶಿಕ್ಷಣದ ಅವಕಾಶ ವಂಚಿತರೂ ಈ ವಿಸ್ತರಣೆಯ ಲಾಭವನ್ನು ಪಡೆಯಲು ಸಾಧ್ಯವಾದೀತು. ಉನ್ನತ ಶಿಕ್ಷಣದ ಅವಕಾಶವನ್ನು ಎಲ್ಲರಿಗೂ ಸಿಗುವಂತೆ ಮಾಡುವುದೇ ಜ್ಞಾನಾಧಾರಿತ ಸಮಾಜದ ನಿರ್ಮಾಣದ ಹಂತದಲ್ಲಿ ಪ್ರಮುಖ ಮೈಲಿಗಲ್ಲು.

ರಾಜ್ಯದಲ್ಲಿ ಉನ್ನತ ಶಿಕ್ಷಣ ಕ್ಷೇತ್ರದ ವಿಸ್ತರಣೆಗೆ ಸಂಬಂಧಿಸಿದಂತೆ, ವಿದ್ಯಾರ್ಥಿಗಳ ದಾಖಲೀಕರಣ ಮತ್ತು ಉಳಿಸಿಕೊಳ್ಳುವುದು, ಕ್ಷೇತ್ರದ ವಿಸ್ತರಣೆ ಮತ್ತು ವರ್ಧನೆ, ನಾವೀನ್ಯ ವಿಧಾನಗಳ ಬಳಕೆ ಹಾಗೂ ಹೆಚ್ಚು ಸಾರ್ವಜನಿಕ–ಖಾಸಗಿ ಸಂಸ್ಥೆಗಳ ಪಾಲ್ಗೊಳ್ಳುವಿಕೆಗೆ ಅವಕಾಶ ಕಲ್ಪಿಸುವ ಬಗ್ಗೆ ಕೆಲವು ತಂತ್ರೋಪಾಯಗಳನ್ನು ಸೂಚಿಸಲಾಗಿದೆ.

ಸಮತೆ–ಒಳಗೊಳ್ಳುವಿಕೆ

ರಾಜ್ಯದಲ್ಲಿ ಉನ್ನತ ಶಿಕ್ಷಣವನ್ನು ಬಯಸುವ ಜನಸಂಖ್ಯೆಯ ಸಾಮಾಜಿಕ ಹಿನ್ನೆಲೆ ಬಹಳ ವಿಶಾಲ ಮತ್ತು ವಿಭಿನ್ನ. ಈ ವೈವಿಧ್ಯತೆಯನ್ನು ಉಳಿಸಿಕೊಳ್ಳುವ ಮತ್ತು ಅದರ ಅಗತ್ಯವನ್ನು ಪೂರೈಸುವುದು ಕರ್ನಾಟಕದ ಪ್ರಮುಖ ಕಾಳಜಿಗಳಲ್ಲೊಂದು. ಉನ್ನತ ಶಿಕ್ಷಣದಲ್ಲಿ ಸಮತೆ ಎನ್ನುವುದರ ಅರ್ಥ ಸಮಾಜದ ಎಲ್ಲ ವರ್ಗಗಳಿಗೂ ಸಮಾನ ಅವಕಾಶ ಕಲ್ಪಿಸುವುದು ಅಥವಾ ಸಾರ್ವತ್ರಿಕ ಲಭ್ಯತೆಯನ್ನು ಸಾಧ್ಯವಾಗಿಸುವುದು. ಉನ್ನತ ಶಿಕ್ಷಣದ ವಿಸ್ತರಣೆಯ ಬೃಹತ್ ಚೌಕಟ್ಟಿನಡಿ ಈ ಕೆಳಗಿನ ಕೆಲವು ಅಂಶಗಳನ್ನು ಗಮನಿಸಬೇಕಿದೆ.

ಲಿಂಗ ಬೇಧ : ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯುವವರ ಹಾಗೂ ಆ ಕ್ಷೇತ್ರಕ್ಕೆ ಕೊಡುಗೆ ನೀಡುತ್ತಿರುವವರ ಸಂಖ್ಯೆಯಲ್ಲಿ ಮಹಿಳೆಯರ ಪ್ರಮಾಣ ಗಣನೀಯವಾಗಿ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ, ಪ್ರಮುಖವಾಗಿ ಲಿಂಗ ಸೂಕ್ಷ್ಮತೆ ಬಗ್ಗೆ ಗಮನಿಸಲೇಬೇಕಿದೆ. ಪ್ರಸ್ತುತ, ಲಿಂಗ ಬೇಧ ಸೂಚಕವಾರು ಕರ್ನಾಟಕ (0.82)ವು ಕೇರಳ (1.18) ಹಾಗೂ ತಮಿಳುನಾಡು (0.83)ಕ್ಕಿಂತ ಹಿಂದಿದೆ[9].

[9] Gender Parity Index (GPI) is a female to male ratio in enrolment and participation in higher education institutions in this context. The index represents range from 0 to 1 (0 means inequality and 1 means equality).

ವಿಶೇಷ ಅಗತ್ಯಗಳು : ಮಕ್ಕಳನ್ನೂ ಒಳಗೊಂಡಂತೆ ವಿಭಿನ್ನ ಸಾಮರ್ಥ್ಯದ ಜನರಿಗೆ ಉನ್ನತ ಶಿಕ್ಷಣ ಅವಕಾಶ ಲಭ್ಯವಾಗಬೇಕು ಹಾಗೂ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಬೇಕು. ಅನುಪಮ ಕೌಶಲಗಳನ್ನು ರೂಢಿಸಿಕೊಳ್ಳುವುದರೊಂದಿಗೆ ಔದ್ಯಮಿಕ ಕ್ಷೇತ್ರದ ಅಗತ್ಯಕ್ಕೆ ತಕ್ಕಂತೆ ರೂಪುಗೊಂಡು ಯಶಸ್ವಿಯಾಗುವತ್ತ ಅವರಿಗೆ ಸೂಕ್ತ ಅವಕಾಶಗಳನ್ನು ಕಲ್ಪಿಸುವುದು ಅತ್ಯವಶ್ಯ. ರಾಜ್ಯಾದ್ಯಂತ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿರುವ ಬೋಧಕ ವರ್ಗಕ್ಕೆ ಇನ್ನಷ್ಟು ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಲ್ಲದೇ, ಉನ್ನತ ಕೌಶಲ ತರಬೇತಿಯನ್ನೂ ನೀಡಬೇಕಿದೆ. ಸಾಂದರ್ಭಿಕವಾಗಿ ಹೇಳಲೇಬೇಕಾದ ಸಂಗತಿಯೆಂದರೆ, ಪ್ರಸ್ತುತ ಕರ್ನಾಟಕದಲ್ಲಿ 18–23 ವರ್ಷದೊಳಗಿನ ವಿಭಿನ್ನ ಸಾಮರ್ಥ್ಯದ/ಅಂಗವಿಕಲರ ಅಂಕಿಸಂಖ್ಯೆ ಸಾರ್ವಜನಿಕವಾಗಿ ಲಭ್ಯವಿಲ್ಲ.

ಪ್ರಾದೇಶಿಕ ಅಸಮತೋಲನ: ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಘಟನೆಯ (ಎನ್‌ಎಸ್‌ಎಸ್‌ಒ) 61ನೇ ಸುತ್ತಿನ ಸಮೀಕ್ಷೆ (2009–10) ಪ್ರಕಾರ ಕರ್ನಾಟಕದಲ್ಲಿ ಗ್ರಾಮೀಣ ಪ್ರದೇಶದ ಶೇ. 3 ರಷ್ಟು ಮಂದಿ ಮಾತ್ರ ಪದವಿ, ಡಿಪ್ಲೊಮಾ ಅಥವಾ ಸರ್ಟಿಫಿಕೇಶನ್ ಕೋರ್ಸ್ ಪ್ರಮಾಣಪತ್ರ ಹೊಂದಿದ್ದಾರೆ. ಇದರರ್ಥವೇನೆಂದರೆ, ಕರ್ನಾಟಕದ ಗ್ರಾಮೀಣ ಭಾಗದ ಆಕಾಂಕ್ಷಿಗಳ ಬಳಿ ಉನ್ನತ ಶಿಕ್ಷಣವನ್ನು ಕೊಂಡೊಯ್ಯಬೇಕಾದ ಅಗತ್ಯವಿದೆ ಎಂಬುದು. ಗ್ರಾಮೀಣ ಭಾಗದಲ್ಲಿ ವಿವಿಧ ಕೋರ್ಸ್‌ಗಳನ್ನು ನೀಡುವ ನಿಟ್ಟಿನಲ್ಲಿ ಕಾಲೇಜುಗಳನ್ನು ಮತ್ತು ವಿಶ್ವವಿದ್ಯಾಲಯಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಇದರೊಂದಿಗೆ, ಈ ಎಲ್ಲ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳು ಅಗತ್ಯ ಹೆಚ್ಚುವರಿ ಮೂಲಭೂತ ಸೌಲಭ್ಯ ಮತ್ತು ಅಗತ್ಯ ಸಂಖ್ಯೆಯ ಗುಣಮಟ್ಟದ ಬೋಧಕ ವರ್ಗವನ್ನು ಹೊಂದಿರುವಂತೆ ಕ್ರಮ ತೆಗೆದುಕೊಳ್ಳಬೇಕು. ರಾಜ್ಯ ಮತ್ತು ದೇಶದ ಅತ್ಯುನ್ನತ ಸಂಸ್ಥೆಗಳಲ್ಲಿ ಕಲಿಯಲು ಸಾಧ್ಯವಾಗುವ ನಿಟ್ಟಿನಲ್ಲಿ ಮತ್ತು ಉನ್ನತ ಶಿಕ್ಷಣದ ಪ್ರಯೋಜನ ಪಡೆಯಲು ಅನುವಾಗುವಂತೆ ಗ್ರಾಮೀಣ ಪ್ರದೇಶದ ಮಕ್ಕಳನ್ನು ತರಬೇತುಗೊಳಿಸಲು ವಿಶೇಷ ಕಾರ್ಯಕ್ರಮಗಳನ್ನು ರೂಪಿಸಬೇಕು. ಉನ್ನತ ಶಿಕ್ಷಣ ಕ್ಷೇತ್ರದಲ್ಲೂ ಪ್ರಾದೇಶಿಕ ತಾರತಮ್ಯ ನಿವಾರಣೆಯತ್ತ ಹೆಜ್ಜೆ ಇಡಲು ಕರ್ನಾಟಕದ ಪ್ರಾದೇಶಿಕ ಅಸಮತೋಲನ ಕುರಿತು ಡಾ. ಡಿ.ಎಂ. ನಂಜುಂಡಪ್ಪನವರು ನೀಡಿರುವ ವರದಿಯು ಅತ್ಯುತ್ತಮ ಸಂಪನ್ಮೂಲ. ಸಾಮಾಜಿಕ–ಆರ್ಥಿಕವಾಗಿ ಅತಿ ಹಿಂದುಳಿದ ಮತ್ತು ಹಿಂದುಳಿದ ತಾಲ್ಲೂಕುಗಳನ್ನು ಈ ವರದಿಯ ಪಟ್ಟಿ ಮಾಡಿದೆ.

ಆರ್ಥಿಕ ಅಂತರ : ಎಲ್ಲರಿಗೂ ಗುಣಮಟ್ಟದ ಉನ್ನತ ಶಿಕ್ಷಣ ಲಭ್ಯವಾಗಬೇಕಾದರೆ ಶ್ರೀಮಂತ ಮತ್ತು ಬಡ ವರ್ಗದ ನಡುವಿನ ಅಂತರವನ್ನು ಕಡಿಮೆ ಮಾಡುವುದೂ ಅವಶ್ಯವೇ. ಶಾಲಾ ಶಿಕ್ಷಣ ಕಡ್ಡಾಯ ಮತ್ತು ಮೂಲಭೂತ ಹಕ್ಕಾಗಿದ್ದು, ಉಚಿತವಾಗಿ ಒದಗಿಸಲಾಗುತ್ತಿದೆ ಎಂದು ಸರಕಾರ ಹೇಳಿಕೊಂಡರೂ, ಮಕ್ಕಳನ್ನು ಸ್ಕೂಲಿಗೆ ಕಳುಹಿಸಲು ಪೋಷಕರು ಹಲವು ಪರೋಕ್ಷ ವೆಚ್ಚಗಳನ್ನು ಭರಿಸಬೇಕಾಗಿರುವುದನ್ನು ಅಧ್ಯಯನವು ಬಹಿರಂಗ ಪಡಿಸಿದೆ. ಹೀಗಾಗಿ, ಉನ್ನತ ಶಿಕ್ಷಣ ಎಂಬುದು ಇಂಥವರಿಗೆ ಗಗನ ಕುಸುಮವಾಗಿದೆ.

ಉತ್ಕೃಷ್ಟತೆ–ಗುಣಮಟ್ಟ

ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸ್ವಾಯತ್ತೆ ನೀಡಬೇಕೆಂಬ ಸಲಹೆಯನ್ನು ಪ್ರತಿಪಾದಿಸುತ್ತಲೇ, ಪ್ರತಿ ವಿಶ್ವವಿದ್ಯಾಲಯಗಳು ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ರೂಪಿಸಿಕೊಂಡ ತಮ್ಮ ನಿಗದಿತ ಗುರಿಯನ್ನು ಮುಟ್ಟಲು ತಮ್ಮದೇ ನೀತಿ–ನಿಯಮಗಳನ್ನು ಚಾಚೂ ತಪ್ಪದೇ ಪಾಲಿಸುತ್ತಿವೆಯೇ? ಅವುಗಳನ್ನು ಪಾಲಿಸಲು ಬೇಕಾದ ಸ್ವಾಯತ್ತೆ ಮತ್ತು ಸಂಪನ್ಮೂಲಗಳು ಅವುಗಳಿಗೆ ಲಭ್ಯವಿದೆಯೇ? ಎಂಬುದರ ಬಗ್ಗೆ ಮೌಲ್ಯಮಾಪನ ಮಾಡುತ್ತಿರಬೇಕು. ಈ ಕೆಲಸವನ್ನೇ ಅಸೋಸಿಯೇಷನ್ ಟು ಅಡ್ವಾನ್ಸ್ ಕೊಲಿಗೇಟ್ ಸ್ಕೂಲ್ಸ್ ಆಫ್ ಬ್ಯುಸಿನೆಸ್ (AACSB) ಮತ್ತು ಯುರೋಪಿಯನ್ ಕ್ವಾಲಿಟಿ ಇಂಪ್ರೂವ್‌ಮೆಂಟ್ ಸಿಸ್ಟಂ (EQUIS) ನಂಥ ಮೌಲ್ಯಾಂಕನ ಸಂಸ್ಥೆಗಳು ಮಾಡುತ್ತಿವೆ. ಗುಣಮಟ್ಟಕ್ಕೆ ಒಂದೇ ನಿರ್ದಿಷ್ಟ ವ್ಯಾಖ್ಯೆಯಿಲ್ಲ. ತಮ್ಮದೇ ಆದ ದೂರದೃಷ್ಟಿ/ಗುರಿಯನ್ನು ಹೊಂದಿರುವ ಪ್ರತಿ ಸಂಸ್ಥೆಯೂ ಅದನ್ನು ಮುಟ್ಟಬೇಕೆಂಬ ಹಂಬಲದ ಮುಗಿಯದ ಪಯಣದಲ್ಲಿ ತೊಡಗಿರುತ್ತದೆ. ಸಾಮಾನ್ಯವಾಗಿ ಈ ಮೌಲ್ಯಾಂಕನ ಸಂಸ್ಥೆಗಳು, ಪ್ರತಿ ವಿಶ್ವವಿದ್ಯಾಲಯ–ಶಿಕ್ಷಣ ಸಂಸ್ಥೆಯ ದೂರದೃಷ್ಟಿ–ಗುರಿಯು ಉನ್ನತ ಶಿಕ್ಷಣ ಕ್ಷೇತ್ರದ ಗುರಿ–ಉದ್ದೇಶ ಈಡೇರಿಕೆಗೆ ಪೂರಕವಾಗಿದೆಯೇ? ಇಲ್ಲವೇ? ಬೋಧಕ ವರ್ಗದ ಸಾಮರ್ಥ್ಯ, ನೇಮಕ ನೀತಿ–ನಿಯಮ, ಪಠ್ಯಕ್ರಮ ಅಭಿವೃದ್ಧಿ–

ನೀಡಿಕೆಯ ಪ್ರಕ್ರಿಯೆಯನ್ನೂ ಗಂಭೀರವಾಗಿ ಗಮನಿಸುವ ಮೂಲಕ. ಯಾವ ಫ್ಯಾಕಲ್ಟಿ ನಿಗದಿತ ಗುರಿಯನ್ನು ತಲುಪುವಲ್ಲಿ ಶ್ರಮಿಸುತ್ತಿದೆ ಎಂಬುದನ್ನೂ ಗಮನಿಸುತ್ತದೆ.

ಇವೆಲ್ಲದರ ಮಧ್ಯೆಯೂ, ಉತ್ಕೃಷ್ಟತೆ ಕುರಿತ ಸಾಮಾನ್ಯ ಕಲ್ಪನೆ ಬಗ್ಗೆ ಸಾಕಷ್ಟು ಸಂಶೋಧನೆ, ಅಧ್ಯಯನ ನಡೆದಿದೆ. ಆದರೆ ಉತ್ಕೃಷ್ಟತೆಯ ಮಾನದಂಡಗಳ ಅಥವಾ ಅದನ್ನು ಅರಿಯುವ ವಿಧಾನಗಳ ಬಗೆಗಾಗಲೀ ಒಮ್ಮತ ಮೂಡಿದ್ದು ಕಡಿಮೆ. ಯುಜಿಸಿ (ವಿಶ್ವವಿದ್ಯಾಲಯ ಧನಸಹಾಯ ಆಯೋಗ) ಉಲ್ಲೇಖಿಸಿರುವ ಪ್ರಕಾರ, ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಉತ್ಕೃಷ್ಟತೆಯ ಉದ್ದೇಶವೇನೆಂದರೆ, 1. ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿನ ಅತ್ಯುತ್ತಮ ಗುಣಮಟ್ಟದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಗುರುತಿಸುವುದು ಮತ್ತು ಪ್ರೋತ್ಸಾಹಿಸುವುದು 2. ಹೆಚ್ಚು ಅನುದಾನಗಳನ್ನು ನೀಡಿ ಪ್ರೋತ್ಸಾಹಿಸುವ ಮೂಲಕ ಶಿಕ್ಷಣ ವಿಧಾನದ ಗುಣಮಟ್ಟವನ್ನು ಹೆಚ್ಚಳಗೊಳಿಸುವುದು 3. ಎಲ್ಲ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಶೈಕ್ಷಣಿಕ ಉತ್ಕೃಷ್ಟತೆಯನ್ನು ಪ್ರೋತ್ಸಾಹಿಸುವುದು. ಉನ್ನತ ಶಿಕ್ಷಣ ಕ್ಷೇತ್ರದ ಗುಣಮಟ್ಟ ಹೆಚ್ಚಿಸಲು ಶಿಕ್ಷಣ, ಸಂಶೋಧನೆ, ಸೇವೆ, ಆಡಳಿತ ಮತ್ತು ನಿರ್ವಹಣೆ–ಎಲ್ಲದರಲ್ಲೂ ಉತ್ಕೃಷ್ಟತೆ ತೀರಾ ಅವಶ್ಯ. ಈ ಸನ್ನಿವೇಶಗಳ ಹಿನ್ನೆಲೆಯಲ್ಲಿ ಉತ್ಕೃಷ್ಟತೆಯನ್ನು ಸಾಧಿಸುವುದೆಂದರೆ ಈ ಕೆಳಗಿನ ಅಂಶಗಳನ್ನು ಅಗತ್ಯವಾಗಿ ಖಚಿತಪಡಿಸಲೇಬೇಕು.

1. ನಿಯತಕಾಲಿಕವಾಗಿ ಶಿಕ್ಷಣ ಸಂಸ್ಥೆಗಳ ಮೌಲ್ಯಾಂಕನವನ್ನು ಕಡ್ಡಾಯಗೊಳಿಸುವುದು.
2. ಆಡಳಿತ ಸಂರಚನೆಯಲ್ಲಿ ಸುಧಾರಣೆ ತರುವುದು.
3. ನಿಯತಕಾಲಿಕವಾಗಿ ಪಠ್ಯಕ್ರಮ, ಮೌಲ್ಯಮಾಪನ ಮತ್ತು ಮೌಲ್ಯ ನಿರ್ಧಾರಣದ ಸುಧಾರಣೆ.
4. ಬೋಧಕ ವರ್ಗದ ಪ್ರಗತಿ ಮತ್ತು ವೃತ್ತಿಪರತೆ ರೂಢಿಸಿಕೊಳ್ಳುವತ್ತ ಗಮನ.
5. ಉತ್ಕೃಷ್ಟತೆಯ ಸಾಧನೆಗೆ ಪೂರಕವಾಗುವಂತೆ ಶಿಕ್ಷಣ ವಿಧಾನ ಮತ್ತು ಸಂಶೋಧನೆಯಲ್ಲಿ ನಾವೀನ್ಯತೆ.

ಕೆಲವು ಕ್ರಮಗಳು ಮತ್ತು ನೀತಿ ಶಿಫಾರಸ್ಸುಗಳು

ಈ ಕೆಳಗೆ ಹೇಳಲಾಗಿರುವ ಆರು ಕ್ರಮಗಳಿಗೆ ಆಧಾರವೆಂದರೆ 3ಇ ಅಂದರೆ, ವಿಸ್ತರಣೆ, ಸಮತೆ ಮತ್ತು ಉತ್ಕೃಷ್ಟತೆಯ ಅಂಶಗಳೇ. ಕರ್ನಾಟಕವು ರೂಪಿಸಿರುವ ವಿಷನ್ 2020 ಗುರಿಯನ್ನು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ತಲುಪಲು ಈ 3ಇ ಮಾದರಿ, ಕ್ರಮಗಳು ಹಾಗೂ ನೀತಿ ಕುರಿತಾದ ಶಿಫಾರಸ್ಸುಗಳು ಒಂದು ಸಮರ್ಥ ಮತ್ತು ಕಾರ್ಯಸಾಧ್ಯ ಮಾರ್ಗನಕ್ಷೆಯಾದೀತು. ಕ್ರಮಗಳು ಕಾರ್ಯ ಯೋಜನೆಯನ್ನು ಸಿದ್ಧಪಡಿಸುವಲ್ಲಿ ನೆರವಾದರೆ, ನೀತಿ ಕುರಿತಾದ ಶಿಫಾರಸ್ಸುಗಳು ರಾಜ್ಯ ಸರಕಾರದ ಮಧ್ಯಪ್ರವೇಶದ ಅಗತ್ಯದ ಬಗ್ಗೆ ಹೇಳುತ್ತವೆ.

ಕರ್ನಾಟಕದ ಉನ್ನತ ಶಿಕ್ಷಣ ಕ್ಷೇತ್ರದ ಅಗತ್ಯಗಳನ್ನು ಆರು ವಿಭಾಗಗಳನ್ನಾಗಿ ಮಾಡಿ, ಕ್ರಮಗಳನ್ನು ಹುಡುಕಲಾಗಿದೆ. ಆ ವಿಭಾಗಗಳೆಂದರೆ, ವಿದ್ಯಾರ್ಥಿ ಕೇಂದ್ರಿತ, ಬೋಧಕ ವರ್ಗ ಸಂಬಂಧಿತ, ಪಠ್ಯ ಸಂಬಂಧಿ, ಶಿಕ್ಷಣ ವಿಧಾನ ಹಾಗೂ ಮೌಲ್ಯಮಾಪನ ಪದ್ಧತಿ, ಆಡಳಿತ/ನಿರ್ವಹಣೆ/ಸೇವೆ, ವೃತ್ತಿಪರ/ಮುಂದುವರಿಕೆ ಶಿಕ್ಷಣ ಹಾಗೂ ಅಂತಾರಾಷ್ಟ್ರೀಕರಣ/ಪ್ರಸ್ತುತತೆ. ಈ 3 ಇ ಮಾದರಿ ಎಷ್ಟು ವ್ಯಾಪಕ ಮತ್ತು ಕ್ರಿಯಾಶೀಲವಾಗಿದೆಯೆಂದರೆ, ಈ ಕೆಳಗೆ ಚರ್ಚಿಸಿದ ಎಲ್ಲ ಕ್ರಮಗಳನ್ನೂ ಒಳಗೊಂಡಿದೆ. 2020ರಲ್ಲಿ ಕರ್ನಾಟಕವನ್ನು ಜ್ಞಾನಾಧಾರಿತ ಸಮಾಜವನ್ನಾಗಿ ಪರಿವರ್ತಿಸುವ ಉದ್ದೇಶ, ಗುರಿ ಮತ್ತು ದೂರದೃಷ್ಟಿಗೆ ಹೊಂದುವಂತೆಯೇ ಈ ಕ್ರಮಗಳಿವೆ.

ವಿದ್ಯಾರ್ಥಿ ಕೇಂದ್ರಿತ ಕ್ರಮಗಳು

ಉನ್ನತ ಶಿಕ್ಷಣ ವ್ಯವಸ್ಥೆಯ ಹೃದಯ ಮತ್ತು ಆತ್ಮಗಳೆಂದರೆ ವಿದ್ಯಾರ್ಥಿ ಸಮುದಾಯವೇ. ಈ ವ್ಯವಸ್ಥೆಯಲ್ಲಿ ಅವರದ್ದೇ ಬಹುಮತ ಮತ್ತು ಅವರೇ ಸಂಕಷ್ಟಕ್ಕೆ ಒಳಗಾಗುವವರೂ ಸಹ. ರಾಜ್ಯದಲ್ಲಿ ಉನ್ನತ ಶಿಕ್ಷಣ ವ್ಯವಸ್ಥೆಯು ಪುನರ್ ನವೀಕರಣಗೊಳ್ಳಬೇಕಾದರೆ ಇಡೀ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿ ಕೇಂದ್ರದಲ್ಲಿರಬೇಕು ಹಾಗೂ ಅವನ/ಆ ಸಮುದಾಯದ

ಆಕಾಂಕ್ಷೆಗಳೇ ಚಾಲನಾ ಶಕ್ತಿಯಾಗಿರಬೇಕು. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿ ಕೇಂದ್ರಿತ ಕ್ರಮಗಳನ್ನು ಉಲ್ಲೇಖಿಸುವುದು ಬಹುಮುಖ್ಯವಾದುದು.

ಶಿಫಾರಸ್ಸುಗಳು

1. ಸ್ಥಳೀಯ ವಿದ್ಯಾರ್ಥಿ ಸಮುದಾಯದ ಅಗತ್ಯ ಮತ್ತು ಆಕಾಂಕ್ಷೆಗಳಿಗೆ ಅನುಗುಣವಾಗಿ ವಿಜ್ಞಾನ, ಮಾನವಿಕ ಮತ್ತು ತಂತ್ರಜ್ಞಾನ ಸಮ್ಮಿಳಿತ ಅಂತರ್ ಶಿಸ್ತೀಯ/ಬಹುಶಿಸ್ತೀಯ ಕೋರ್ಸ್‌ಗಳನ್ನು ಆರಂಭಿಸಲು ಎಲ್ಲ ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳಿಗೆ ಅನುಮತಿ ನೀಡಬೇಕು.

2. ರಾಜ್ಯಾದ್ಯಂತ ಒಂದು ಕಾಲೇಜು ಅಥವಾ ವಿಶ್ವವಿದ್ಯಾಲಯದಿಂದ ಮತ್ತೊಂದು ಕಾಲೇಜು ಅಥವಾ ವಿಶ್ವವಿದ್ಯಾಲಯಕ್ಕೆ ತನ್ನ ಆಯ್ಕೆಗೆ ತಕ್ಕಂತೆ ಪ್ರವೇಶ ಪಡೆಯುವ ಅವಕಾಶ ವಿದ್ಯಾರ್ಥಿಗಳಿಗೆ ನೀಡಬೇಕು. ಆಯಾ ಕಾಲೇಜುಗಳ ಅಥವಾ ವಿಶ್ವವಿದ್ಯಾಲಯಗಳ ಅನುಮತಿಯೊಂದಿಗೆ ಕೋರ್ಸ್‌ನಲ್ಲಿ ಗಳಿಸಿದ್ದರ ಅಂಕ ವಿವರ, ಇತ್ಯಾದಿಯನ್ನು ಸುಲಭವಾಗಿ ವರ್ಗಾಯಿಸುವಂತಿರಬೇಕು.

3. ಹದಿನೈದು ವರ್ಷದಷ್ಟು ಹಳೆಯ ಮತ್ತು ಅತ್ಯುನ್ನತ ಶೈಕ್ಷಣಿಕ ಸಾಧನೆಯ ಹಿನ್ನೆಲೆಯನ್ನು ಹೊಂದಿರುವ ಹಾಗೂ ರಾಜ್ಯದ ಸರಾಸರಿ ಫಲಿತಾಂಶಕ್ಕಿಂತ ಶೇ. 10ರಷ್ಟು ಹೆಚ್ಚಳವನ್ನು ಸಾಧಿಸಿರುವ ಖಾಸಗಿ ಕಾಲೇಜುಗಳಿಗೆ ಎಲ್ಲ ಕೋರ್ಸ್‌ಗಳಿಗೂ ತಮ್ಮ ವ್ಯಾಪ್ತಿಯನ್ನು ವಿಸ್ತರಿಸಲು ಮುಕ್ತ ಅವಕಾಶ ನೀಡಬೇಕು. ಆದರೆ, ಮೂಲಭೂತ ಸೌಕರ್ಯ, ಬೋಧಕ ವರ್ಗ, ಬೋಧಕ–ವಿದ್ಯಾರ್ಥಿಯ ಅನುಪಾತದ ನಿರ್ವಹಣೆ, ಶುಲ್ಕ ಸಂರಚನೆ ಹಾಗೂ ಗುಣಮಟ್ಟ ಕುರಿತು ಸರಕಾರವಾಗಲೀ ಅಥವಾ ಸಂಬಂಧಪಟ್ಟ ಸಂಸ್ಥೆಗಳಾಗಲೀ ನಿಗದಿಪಡಿಸುವ ಮಾನದಂಡಗಳು ಈ ಕಾಲೇಜುಗಳಿಗೂ ಅನ್ವಯವಾಗಬೇಕು.

4. ತಮ್ಮ ವಸ್ತುನಿಷ್ಠ, ಪಾರದರ್ಶಕ ಕ್ರಮಗಳಿಂದ ಹೆಚ್ಚು ವೈವಿಧ್ಯದ ಕೋರ್ಸ್‌ಗಳು ಮತ್ತು ಉತ್ತಮ ಗುಣಮಟ್ಟದ ಶಿಕ್ಷಣದ ಮುಖೇನ ವಿದ್ಯಾರ್ಥಿಗಳ ಸಾಮರ್ಥ್ಯ ಹೆಚ್ಚಿಸುವುದಾಗಿ ಖಚಿತ ಭರವಸೆ ನೀಡುವ ಹೊಸ ಖಾಸಗಿ ವಿಶ್ವವಿದ್ಯಾಲಯಗಳಿಗೆ ಒಂದು ಸ್ವತಂತ್ರ ಮತ್ತು ವೃತ್ತಿನಿರತ ನಿಯಂತ್ರಣ ವ್ಯವಸ್ಥೆ ಮೂಲಕ ಅನುಮತಿ ನೀಡಬೇಕು.

5. ದೇಶ ಮತ್ತು ವಿದೇಶದ ನಾನಾ ಭಾಗಗಳ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವ ಮೂಲಕ ಉನ್ನತ ಶಿಕ್ಷಣದಲ್ಲಿ ಬಹುಸಂಸ್ಕೃತೀಕರಣ ಮತ್ತು ಅಂತಾರಾಷ್ಟ್ರೀಕರಣವನ್ನು ಪ್ರೋತ್ಸಾಹಿಸಲು ನಿಗದಿತ ಸೀಟುಗಳ ಪೈಕಿ ಶೇ. 15 ರಷ್ಟು ಹೆಚ್ಚುವರಿ ಸೂಪರ್ ನ್ಯೂಮರರಿ ಸೀಟುಗಳನ್ನು ತುಂಬಿಕೊಳ್ಳುವ ಅಧಿಕಾರವನ್ನು ವಿಶ್ವವಿದ್ಯಾಲಯಗಳಿಗೆ ನೀಡಬೇಕು.

6. ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಕಲಿಯಲು ಅನುಕೂಲವಾಗುವಂತೆ ವಿಶ್ವವಿದ್ಯಾಲಯಗಳು, ಸರಕಾರ, ಅನುದಾನಿತ ಕಾಲೇಜುಗಳು ವಿಶೇಷ ಸೌಲಭ್ಯವನ್ನಾಗಿ ಉತ್ತಮ ಗುಣಮಟ್ಟದ ವಸತಿ ನಿಲಯಗಳನ್ನು ನಿರ್ಮಿಸಿ ಹಂಚಿಕೆ ಮಾಡಬೇಕು.

7. ಕರ್ನಾಟಕ ಮತ್ತು ಕರ್ನಾಟಕೇತರ ರಾಜ್ಯಗಳ ವಿದ್ಯಾರ್ಥಿಗಳನ್ನು ತನ್ನತ್ತ ಸೆಳೆಯುವ ನಿಟ್ಟಿನಲ್ಲಿ ಅತ್ಯಂತ ಉತ್ಕೃಷ್ಟ ಗುಣಮಟ್ಟದ ಶೈಕ್ಷಣಿಕ ಪ್ರಯೋಗಾಲಯವನ್ನು ಹೊಂದಲು ವಿಶ್ವವಿದ್ಯಾಲಯಗಳಿಗೆ ರಾಜ್ಯ ಸರಕಾರವು ವಿಶೇಷ ಅನುದಾನವನ್ನು ನೀಡಬೇಕು.

8. ರಾಜ್ಯಾದ್ಯಂತ ಪ್ರತಿ ವಿಶ್ವವಿದ್ಯಾಲಯಗಳು ಹೊಂದಿರುವ ಪ್ರಾದೇಶಿಕ ಸರಹದ್ದು–ನಿರ್ಬಂಧಗಳನ್ನು ತೆಗೆದು ಹಾಕುವುದರೊಂದಿಗೆ, ಯಾವುದೇ ವಿಶ್ವವಿದ್ಯಾಲಯ ಕರ್ನಾಟಕದ ಯಾವುದೇ ಭಾಗದಲ್ಲಿ ಕ್ಯಾಂಪಸ್

ಆರಂಭಿಸಿ ಚಟುವಟಿಕೆ ನಡೆಸಲು ಮುಕ್ತ ಅವಕಾಶ ಕಲ್ಪಿಸಬೇಕು. ಆಗ, ವಿದ್ಯಾರ್ಥಿಗಳು ತಮ್ಮಿಷ್ಟ ಕೋರ್ಸ್‌ಗಳನ್ನು ನೀಡುವ ವಿಶ್ವವಿದ್ಯಾಲಯಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದಂತಾಗುತ್ತದೆ.

9. 2020ರೊಳಗೆ ಒಟ್ಟು ಪದವಿಪೂರ್ವ ಶಿಕ್ಷಣಕ್ಕೆ ಶೇ. 20ರಷ್ಟು ವಿದ್ಯಾರ್ಥಿಗಳನ್ನಾದರೂ ತಸ್ಸತ್ತ ಸೆಳೆದುಕೊಳ್ಳಲು ವಿಶ್ವವಿದ್ಯಾಲಯಗಳು, ಸಮಗ್ರ ವಿದ್ಯಾರ್ಥಿವೇತನ ಯೋಜನೆಯನ್ನು ರೂಪಿಸಿ ಸ್ನಾತಕೋತ್ತರ ಮತ್ತು ಪಿಎಚ್‌ಡಿ ಕೋರ್ಸ್‌ಗಳಿಗೆ ನೀಡುವ ಪ್ರವೇಶ ಸಂಖ್ಯೆಯನ್ನು ಹೆಚ್ಚಿಸಬೇಕು.

10. ಕಾಲೇಜು ಮತ್ತು ವಿಶ್ವವಿದ್ಯಾಲಯಗಳಿಗೆ ವಿದ್ಯಾರ್ಥಿ ಕೇಂದ್ರಿತವಾಗಿಯೇ ಅನುದಾನವನ್ನು ನೀಡಬೇಕು ಹಾಗೂ ವಿದ್ಯಾರ್ಥಿವೇತನ ಪ್ರತಿಭಾವಂತ ಮತ್ತು ಅವಶ್ಯವುಳ್ಳವರಿಗೇ ಸಿಗಬೇಕು. ಕೋರ್ಸ್‌ಗಳಿಗೆ ತಗಲುವ ವಾಸ್ತವ ಖರ್ಚನ್ನು ಆಧರಿಸಿ ಶುಲ್ಕ ನಿಗದಿಗೊಳಿಸಿ, ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದ ಶುಲ್ಕ ನಿಗದಿ ಸಮಿತಿಯ ಅನುಮೋದನೆ ಪಡೆದು ಜಾರಿಗೊಳಿಸಲು ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಿಗೆ ಸೂಚಿಸಬೇಕು. ಎಸ್‌ಸಿ,ಎಸ್‌ಟಿ ಮತ್ತು ಹಿಂದುಳಿದ ವರ್ಗ (ಒಬಿಸಿ)ಗಳ ವಿದ್ಯಾರ್ಥಿಗಳ, ಪ್ರಸ್ತುತ ಶುಲ್ಕ ರಿಯಾಯಿತಿ ಪಡೆಯುತ್ತಿರುವ ಹಾಗೂ ವಾರ್ಷಿಕ 3 ಲಕ್ಷಕ್ಕಿಂತಲೂ ಕಡಿಮೆ ಆದಾಯ ಹೊಂದಿರುವ ವಿದ್ಯಾರ್ಥಿಗಳ ಶೇ. ನೂರರಷ್ಟು ವೆಚ್ಚವನ್ನು ಭರಿಸುವುದರೊಂದಿಗೆ, ಎಲ್ಲ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿ ವೇತನವನ್ನು ನೀಡಬೇಕು. ಈ ವಿದ್ಯಾರ್ಥಿ ವೇತನದ ಒಂದು ಭಾಗ ಶುಲ್ಕ ಪಾವತಿಗೆ ಹೋದರೆ, ಉಳಿದದ್ದು ಜೀವನ ನಿರ್ವಹಣೆಗೆ ಲಭ್ಯವಾಗುತ್ತದೆ. ಶುಲ್ಕವನ್ನು ಇವರ ಪರವಾಗಿ ನೇರವಾಗಿ ಆಯಾ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಿಗೆ ಪಾವತಿಸಬೇಕು. ಜೀವನ ನಿರ್ವಹಣಾ ವೆಚ್ಚವನ್ನು ಆಯಾ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ಕರ್ನಾಟಕ ವಿದ್ಯಾರ್ಥಿ ವೇತನ ಮತ್ತು ಸಾಲನಿಧಿ ಪ್ರಾಧಿಕಾರದಿಂದ ಜಮೆಯಾಗುವಂತಾಗಬೇಕು. ಇದರಿಂದ ಕಾಲೇಜು ಮತ್ತು ವಿಶ್ವವಿದ್ಯಾಲಯಗಳು ಆ ವಿದ್ಯಾರ್ಥಿಗಳಿಗೆ ಒಳ್ಳೆಯ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಯಶಸ್ವಿಯಾಗಲು ಅನುಕೂಲವಾಗುತ್ತದೆ.

11. ಪ್ರತಿ ಮೂರು ವರ್ಷಕ್ಕೊಮ್ಮೆ ವಿದ್ಯಾರ್ಥಿಗಳ ಬದಲಾಗುವ ಆಕಾಂಕ್ಷೆ ಮತ್ತು ನಿರೀಕ್ಷೆಗಳ ಕುರಿತಾಗಿ ಹಾಗೂ ಚಾಲ್ತಿಯಲ್ಲಿರುವ ಶಿಕ್ಷಣ ವ್ಯವಸ್ಥೆ/ಕೋರ್ಸ್‌ಗಳಿಂದ ವಿದ್ಯಾರ್ಥಿಗಳಿಗೆ ಸೃಷ್ಟಿಯಾಗುವ ಉದ್ಯೋಗ ಸಾಧ್ಯತೆ ಕುರಿತು ಸಮೀಕ್ಷೆ ನಡೆಸಬೇಕು. ಇಂಥ ಸಮೀಕ್ಷೆಗಳು ಬರಿದೇ ಪ್ರತಿಕ್ರಿಯೆಯಾಗಿರುವುದಿಲ್ಲ. ಜತೆಗೆ ಯಾವ ಬಗೆಯ ಕೋರ್ಸ್‌ಗಳನ್ನು ರೂಪಿಸಬೇಕೆಂಬುದರ ಬಗ್ಗೆಯೂ ದಿಕ್ಸೂಚಿಯಾಗಬಲ್ಲದು.

12. ಎಲ್ಲ ಮಾನ್ಯತೆ ಪಡೆದ ಕಾಲೇಜುಗಳು, ಸ್ವಾಯತ್ತ ಕಾಲೇಜುಗಳು ಹಾಗೂ ಸ್ನಾತಕೋತ್ತರ ಕೇಂದ್ರಗಳಲ್ಲಿ ಕೆರಿಯರ್ ಮಾರ್ಗದರ್ಶನ ಕೇಂದ್ರ ಮತ್ತು ಸಲಹಾ ಕೇಂದ್ರಗಳನ್ನು ತೆರೆಯಬೇಕು. ಈ ಕೇಂದ್ರಗಳು ಸೂಕ್ತ ವೇಳಾಪಟ್ಟಿ ಮತ್ತು ವೃತ್ತಿನಿರತ ಸಿಬ್ಬಂದಿಯೊಂದಿಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಬೇಕು. ವಿವಿಧ ನೆಲೆಯ ವಿದ್ಯಾರ್ಥಿಗಳ ಅಗತ್ಯಗಳನ್ನು ಪೂರೈಸುವ ಸಲುವಾಗಿ ಒಂದು ವಿದ್ಯಾರ್ಥಿ ಸಹಾಯವಾಣಿ ಹಾಗೂ ಪೋರ್ಟಲ್‌ನ್ನು ಹೊಂದಿರಬೇಕು.

13. ಶೈಕ್ಷಣಿಕ ನೀತಿ ನಿರೂಪಣೆ, ಚಟುವಟಿಕೆ ಮತ್ತು ನಿರ್ವಹಣೆಗೆ ಸಂಬಂಧಿಸಿದ ತೀರ್ಮಾನ ಕೈಗೊಳ್ಳುವ ಪ್ರತಿ ಪ್ರಕ್ರಿಯೆಯಲ್ಲೂ ವಿದ್ಯಾರ್ಥಿಗಳ ಪ್ರತಿನಿಧಿಗಳು/ಸಂಘಟನೆಗಳು ಒಳಗೊಳ್ಳಬೇಕು. ಚುನಾಯಿತ ವಿದ್ಯಾರ್ಥಿ ಪ್ರತಿನಿಧಿಗಳು ವಿಶ್ವವಿದ್ಯಾಲಯಗಳ ಸಮಿತಿಗಳ ಭಾಗವಾದರೆ, ವಿದ್ಯಾರ್ಥಿಗಳ ದೃಷ್ಟಿಕೋನ/ಅಭಿಮತವನ್ನು ಹೇಳಲು ಅವಕಾಶ ಕಲ್ಪಿಸಿದಂತಾಗುತ್ತದೆ. ಇಂಥ ವ್ಯವಸ್ಥೆಯನ್ನು ಎಲ್ಲ ಮಾನ್ಯತೆ ಪಡೆದ ಕಾಲೇಜುಗಳು ಮತ್ತು ಸ್ವಾಯತ್ತ ಕಾಲೇಜುಗಳಲ್ಲೂ ಜಾರಿಗೆ ಬರಬೇಕು.

14. ಕರ್ನಾಟಕದ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಪದವಿ ಮತ್ತು ನಂತರದ ಕೋರ್ಸ್ ಕಲಿಯುವ ಪ್ರತಿ ವಿದ್ಯಾರ್ಥಿಗೂ ಬಹುಮಾಧ್ಯಮದಲ್ಲಿ ಅಗತ್ಯ ಪಠ್ಯಕ್ರಮಗಳನ್ನು ಒಳಗೊಂಡ ಟ್ಯಾಬ್ಲೆಟ್‌ನ್ನು ಉಚಿತವಾಗಿ ನೀಡಬೇಕು. ಇದು ಸ್ವಯಂಕಲಿಕೆಗೆ ಅನುಕೂಲವಾಗುತ್ತದೆ.
15. ವಿದ್ಯಾರ್ಥಿಗಳ ಶೇ. 40 ರಷ್ಟು ಅಂತರ್ ಮೌಲ್ಯಮಾಪನವನ್ನು ವಿದ್ಯುನ್ಮಾನ ನೆಲೆಯಲ್ಲಿ ಕೈಗೊಳ್ಳಲು ಶೈಕ್ಷಣಿಕ ಸಂಸ್ಥೆಗಳು ಕಾರ್ಯೋನ್ಮುಖವಾದರೆ, ಮಾನವ ಸಂಪನ್ಮೂಲದ ಮೇಲಿನ ಅಧಿಕ ಹೊರೆ ಕಡಿಮೆಯಾದೀತು.
16. ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಲ್ಲೂ ಬೋಧಕರ ಮತ್ತು ಕೋರ್ಸ್‌ಗಳ ಬಗ್ಗೆ ವಿದ್ಯಾರ್ಥಿಗಳು ಪ್ರತಿಕ್ರಿಯೆ ನೀಡುವ ಪದ್ಧತಿಯನ್ನು ಜಾರಿಗೆ ತರಬೇಕು. ವಿದ್ಯಾರ್ಥಿಗಳ ನಿರೀಕ್ಷೆಗಳು, ಸಲಹೆಗಳನ್ನು ಹಾಗೂ ಹಳೆಯ ವಿದ್ಯಾರ್ಥಿಗಳ ಅಗತ್ಯಗಳನ್ನೂ ಒಂದು ಔಪಚಾರಿಕ ವಿಧಾನದಲ್ಲಿ ಪಡೆಯಬೇಕು. ಪ್ರತಿಕ್ರಿಯೆ ಮತ್ತು ಕೈಗೊಂಡ ಸುಧಾರಣಾ ಕ್ರಮಗಳ ಬಗ್ಗೆ ಆಗಾಗ್ಗೆ ಪ್ರಕಟಿಸುತ್ತಿರಬೇಕು ಮತ್ತು ಪ್ರಚಾರ ಮಾಡಬೇಕು. ಇವುಗಳನ್ನು ವೆಬ್‌ಸೈಟ್‌ಗಳಲ್ಲೂ ಲಭ್ಯವಾಗುವಂತೆ ಮಾಡಬೇಕು.
17. ಎಲ್ಲ ಪದವಿ ಕೋರ್ಸ್‌ಗಳಿಗೂ ಆರು ತಿಂಗಳ ತರಬೇತಿ ಅವಧಿಯನ್ನು ಕಡ್ಡಾಯಗೊಳಿಸಬೇಕು. ಈ ಅವಧಿಯಲ್ಲಿ ಸಂಬಂಧಪಟ್ಟ ವಿದ್ಯಾರ್ಥಿಯು, ನೈಜ ಕಾರ್ಯ ಜಗತ್ತಿಗೆ ಮುಖಾಮುಖಿಯಾಗುತ್ತಾನೆ. ಉದ್ಯಮದಲ್ಲಿ ತರಬೇತಿ ಪಡೆಯುವ ಮೂಲಕ ಉದ್ಯಮದ ಅಗತ್ಯಗಳನ್ನು ತಿಳಿದುಕೊಳ್ಳುತ್ತಾನೆ. ತರಬೇತಿ ಅವಧಿಯ ಕಾರ್ಯವೈಖರಿಯನ್ನು ಆಧರಿಸಿ ಸಂಸ್ಥೆಗಳು ನೇಮಿಸಿಕೊಳ್ಳುವ ಸಾಧ್ಯತೆಯೂ ಇರುತ್ತದೆ. ಹಾಗೆಯೇ ಅವರವರ ಕೋರ್ಸ್‌ಗಳ ನಿಗದಿತ ಅಗತ್ಯವನ್ನೂ ಹೊರತುಪಡಿಸಿ, ಯಾವುದೇ ಹೆಚ್ಚುವರಿ ಕೋರ್ಸ್ ಅಥವಾ ಯೋಜನೆಗಳನ್ನು ಕೈಗೊಂಡಿದ್ದರೆ ಅದನ್ನು ಅಂಗೀಕರಿಸುವ ಅವಕಾಶವಿರಬೇಕು.

ಬೋಧಕ ವರ್ಗ ಆಧರಿತ ಕ್ರಮಗಳು

ಕರ್ನಾಟಕದ ಉನ್ನತ ಶಿಕ್ಷಣ ಕ್ಷೇತ್ರ ಕಳೆದ ದಶಕದಲ್ಲಿ ವಿಸ್ತರಣೆಗೊಂಡ ಮಾದರಿಗೂ, ಶಿಕ್ಷಣ ಸಂಸ್ಥೆಗಳು ಹೊಂದಿರುವ ಬೋಧಕ ವರ್ಗದ ಪ್ರಮಾಣಕ್ಕೂ ತಾಳೆಯಾಗದು. ಕರ್ನಾಟಕ ಆದಾಯ ಸುಧಾರಣಾ ಸಮಿತಿ (ಫೆಬ್ರವರಿ 2011)ರ ಪ್ರಕಾರ 2010 ರಲ್ಲಿ ಶೇ. 13.6ರಷ್ಟು ಉಪನ್ಯಾಸಕರ ಹುದ್ದೆಗಳು ಖಾಲಿಯಿವೆ. ರಾಜ್ಯಾದ್ಯಂತ ಉನ್ನತ ಶಿಕ್ಷಣ ಸಂಸ್ಥೆಗಳು ಬೋಧಕ ವರ್ಗದ ಕೊರತೆಯನ್ನು ಎದುರಿಸುತ್ತಿವೆ. ಕೆಲವೆಡೆ ನಿರ್ದಿಷ್ಟ ವಿಷಯಗಳಿಗಾದರೆ, ಮತ್ತೆ ಕೆಲವೆಡೆ ಎಲ್ಲ ವಿಷಯಗಳಲ್ಲೂ ಕೊರತೆಯಿದೆ. ಅದರಲ್ಲೂ ವೃತ್ತಿ ಶಿಕ್ಷಣವನ್ನು ಈ ಕೊರತೆ ಬಹುವಾಗಿ ಕಾಡುತ್ತಿದೆ. ಹೆಚ್ಚುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ವಿವಿಧ ವಿಷಯ ನಿಕಾಯಗಳಲ್ಲಿ ಅಗತ್ಯವಿರುವ ಬೋಧಕ ವರ್ಗದ ಸಂಖ್ಯೆಯನ್ನು ಅಂದಾಜಿಸುವತ್ತ ಇನ್ನೂ ಗಂಭೀರ ಪ್ರಯತ್ನ ನಡೆದಿಲ್ಲ. ವಿಶ್ವಾಸಾರ್ಹ ಅಂಕಿಅಂಶಗಳ ಕೊರತೆಯ ಪರಿಣಾಮವಾಗಿ ಶಿಕ್ಷಣ ಸಂಸ್ಥೆಗಳ ಬೋಧಕ ವರ್ಗದ ಅಗತ್ಯಗಳನ್ನು ಈಡೇರಿಸಲು ಯೋಜನೆ ರೂಪಿಸಲು ಮತ್ತು ಪರಿಶೀಲನೆ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಬೋಧಕ ವರ್ಗದ ಕೊರತೆಯೊಂದಿಗೆ, ಲಭ್ಯವಿರುವ ಬೋಧಕ ವರ್ಗದ ಗುಣಮಟ್ಟವೂ ಬಹಳ ದೊಡ್ಡ ಸವಾಲಾಗಿ ಪರಿಣಮಿಸಿದೆ. ಈ ಕ್ಯೂ2–ಗುಣಮಟ್ಟ–ಪ್ರಮಾಣ (Quality-Quantity)ದ ಸಮಸ್ಯೆಯು ದೇಶದ ಮತ್ತು ರಾಜ್ಯದ ಉನ್ನತ ಶಿಕ್ಷಣದ ಪ್ರಮುಖ ಸಮಸ್ಯೆಯಾಗಿ ಮಾರ್ಪಟ್ಟಿದೆ (Task Force, 2011)

ಶಿಫಾರಸ್ಸುಗಳು

1. ಜ್ಞಾನಾಧಾರಿತ ಸಮಾಜಕ್ಕೆ ಹೆದ್ದಾರಿಯಾಗಿ ಜ್ಞಾನವನ್ನು ರೂಪಿಸುವ ಉನ್ನತ ಶಿಕ್ಷಣದ ಉದ್ದೇಶವನ್ನು ಈಡೇರಿಸುವಲ್ಲಿ, ಕರ್ನಾಟಕದ ಎಲ್ಲ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಗೆ ಉತ್ತೇಜನ ನೀಡಬೇಕು. ಇದಕ್ಕೆ ಪೂರಕವಾಗಿ ಪ್ರಾರಂಭಿಕ ದೇಣಿಗೆಯಾಗಿ 50 ಕೋಟಿ ರೂ. ಗಳೊಂದಿಗೆ ಕರ್ನಾಟಕ

ರಾಜ್ಯ ಸಂಶೋಧನಾ ಪ್ರತಿಷ್ಠಾನವನ್ನು ಸ್ಥಾಪಿಸಬೇಕು. ಪ್ರಖ್ಯಾತ ವಿಜ್ಞಾನಿಗಳು, ಸರಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳ ಶಿಕ್ಷಣ ತಜ್ಞರು, ವಿಷಯ ತಜ್ಞರು ಹಾಗೂ ಗಣ್ಯ ನಾಗರಿಕರನ್ನು ಸದಸ್ಯರನ್ನಾಗಿ ಒಳಗೊಂಡ ಆಡಳಿತ ಮಂಡಳಿ ಇದನ್ನು ನಿರ್ವಹಿಸಬೇಕು. ವಸ್ತುನಿಷ್ಠ ಮತ್ತು ಪಾರದರ್ಶಕವಾದ ಮಾನದಂಡಗಳನ್ನು ಅನುಸರಿಸಿ ಸಂಶೋಧನಾ ಅನುದಾನಗಳನ್ನು ನೀಡಬೇಕು. ಈ ಎಲ್ಲ ವಿವರವೂ ಸಾರ್ವಜನಿಕವಾಗಿ ಲಭ್ಯವಾಗಬೇಕು. ಸಂಶೋಧನೆ ಮತ್ತು ಪ್ರಬಂಧ ಪ್ರಕಟಣೆಯಲ್ಲಿ ಬೋಧಕ ವರ್ಗದ ಕೊಡುಗೆಯನ್ನು ಗುರುತಿಸಿ ಪ್ರೋತ್ಸಾಹಿಸಲು ವಿಶೇಷ ಪ್ರೋತ್ಸಾಹ ಧನವನ್ನು ಮೀಸಲಿಡಬೇಕು. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಅನುಸರಿಸುವಂತೆ, ಕರ್ನಾಟಕ ರಾಜ್ಯ ಸಂಶೋಧನಾ ನಿಧಿಯ ಶೇ. 15 ರಷ್ಟನ್ನು ಸಂಶೋಧನಾ ಕ್ಷೇತ್ರಕ್ಕೆ ಸಲ್ಲಿಸಿದ ವೈಯಕ್ತಿಕ ಕೊಡುಗೆಯನ್ನು ಗಮನಿಸಿ, ಸಂಬಂಧಪಟ್ಟವರಿಗೆ ನೀಡಬೇಕು.

2. ಪ್ರಸ್ತುತ ವಿಶ್ವವಿದ್ಯಾಲಯಗಳಲ್ಲಿರುವ ಪಿಎಚ್‌ಡಿ ಕಾರ್ಯಕ್ರಮಗಳನ್ನು ಕಟು ವಿಮರ್ಶೆಗೆ ಒಳಪಡಿಸಿ, ವಿದೇಶದಲ್ಲಿರುವ ಅತ್ಯುತ್ತಮ ವಿಶ್ವವಿದ್ಯಾಲಯಗಳ ಕಾರ್ಯಕ್ರಮಗಳ ಮಟ್ಟಕ್ಕೆ ಇವುಗಳ ಗುಣಮಟ್ಟವನ್ನೂ ಏರಿಸಬೇಕು.

3. ಪಿಎಚ್‌ಡಿ ಆಕಾಂಕ್ಷಿಗಳು, ವಿದ್ವಾಂಸರಿಗೆ ಕಾಲೇಜು ಮಟ್ಟದಲ್ಲಿ ಬೋಧನಾ ಅನುಭವವನ್ನು ಪಡೆಯಲು ಅನುವಾಗುವಂತೆ ಎಲ್ಲ ಪಿಎಚ್‌ಡಿ ಕಾರ್ಯಕ್ರಮಗಳಲ್ಲೂ ಬೋಧನಾ ತರಬೇತಿ ಅವಧಿಯನ್ನು ಪರಿಚಯಿಸಬೇಕು.

4. ಪಿಎಚ್‌ಡಿ ಪದವಿಯನ್ನು ಪಡೆಯದ ಬೋಧಕ ವರ್ಗದವರನ್ನು ಪೂರ್ತಿ ಸಂಬಳದ ಭದ್ರತೆಯೊಂದಿಗೆ ಪಿಎಚ್‌ಡಿ ಪದವಿ ಪಡೆಯಲು ಕಳುಹಿಸಬೇಕು. ಇದರಿಂದ ಬೋಧನೆ ಮತ್ತು ಸಂಶೋಧನೆ ಎರಡರಲ್ಲೂ ಅವರ ಸಾಮರ್ಥ್ಯ ವೃದ್ಧಿಯಾಗಲು ಸಾಧ್ಯ. ಆರು ವರ್ಷಗಳಿಗೊಮ್ಮೆ ಒಂದು ವರ್ಷದ ಅಧ್ಯಯನ ನಿಮಿತ್ತ ರಜೆ (ಸಬಾಟಿಕಲ್)ಯನ್ನು ಪೂರ್ಣ ಸಂಬಳ, ಇತ್ಯಾದಿ ಸೌಲಭ್ಯಗಳೊಂದಿಗೆ ನೀಡಿ ದೇಶದ ಅಥವಾ ವಿದೇಶದ ಯಾವುದಾದರೂ ಸಂಸ್ಥೆಗಳಲ್ಲಿ ಸಂಶೋಧನೆ ಕೈಗೊಳ್ಳಲು ಬೋಧಕರನ್ನು ಕಳುಹಿಸಿಕೊಡಬೇಕು.

5. ವಿಶ್ವವಿದ್ಯಾಲಯದೊಳಗೆ ಅಥವಾ ರಾಜ್ಯದ ಯಾವುದೇ ವಿಶ್ವವಿದ್ಯಾಲಯಗಳಿಗೆ ತೆರಳಿ ಕೆಲಸ ಮಾಡುವ ಮುಕ್ತ ಅವಕಾಶ/ಸ್ವಾತಂತ್ರ್ಯ ಬೋಧಕ ವರ್ಗಕ್ಕಿರಬೇಕು. ವಿಶ್ವವಿದ್ಯಾಲಯಗಳು ಅವರ ಸೇವೆಯನ್ನು ಬಳಸಿಕೊಳ್ಳುವ ಸಂದರ್ಭದಲ್ಲಿ ಅವರ ಸೇವಾ ಹಿರಿತನ ಮತ್ತು ಇತ್ಯಾದಿ ಸೌಲಭ್ಯಗಳನ್ನು ರಕ್ಷಿಸಬೇಕು.

6. ಮೌಲ್ಯಮಾಪನ ಮತ್ತು ಬೋಧಕ ವರ್ಗದ ಪರಾಮರ್ಶನೆ ಎಂಬುದು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಬೋಧಕ ವರ್ಗದ ಗುಣಮಟ್ಟ ಹೆಚ್ಚಳದ ಪ್ರಕ್ರಿಯೆಯ ಭಾಗವಾಗಿರಬೇಕು. ಇದಕ್ಕೆ ಸಂಬಂಧಿಸಿದ ನಿಯಮಗಳು ಪಾರದರ್ಶಕವಾಗಿರಬೇಕು ಹಾಗೂ ಪರಾಮರ್ಶನೆ ಆರಂಭಿಸುವ ಮೊದಲು ಬೋಧಕ ವರ್ಗದೊಂದಿಗೆ ಸಮಾಲೋಚಿಸಬೇಕು. ಪ್ರತಿ ಬೋಧಕರಿಗೂ ಸ್ಪಷ್ಟ ಮಾಹಿತಿಯನ್ನು ನೀಡುವ ಮೂಲಕ ಪ್ರತಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲೂ ವಾರ್ಷಿಕ ಪರಾಮರ್ಶನ ವ್ಯವಸ್ಥೆ ಜಾರಿಗೊಳಿಸಬೇಕು. ಎಪಿಐ (API Score) ಸ್ಕೋರ್‌ಗೆ ಸಂಬಂಧಿಸಿದಂತೆ ಯುಜಿಸಿ (ವಿಶ್ವವಿದ್ಯಾಲಯ ಧನಸಹಾಯ ಆಯೋಗ)ಯ ನಿಯಮಗಳನ್ನು ಈ ಉದ್ದೇಶಕ್ಕೆ ಬಳಸಿಕೊಳ್ಳಬಹುದು. ಈ ಎಲ್ಲ ವಿವರಗಳನ್ನೂ ಆಗಾಗ್ಗೆ ಸಂಸ್ಥೆಯ ವೆಬ್‌ಸೈಟ್‌ನಲ್ಲಿನ ಬೋಧಕ ವರ್ಗದ ವಿವರಗಳಲ್ಲಿ ಪ್ರಕಟಿಸಬೇಕು.

7. ಪರಸ್ಪರ ಬೋಧಕ ವರ್ಗದ ವಿನಿಮಯ ಸಾಧ್ಯವಾಗುವಂತೆ ಬೇರೆ ದೇಶಗಳ ವಿಶ್ವವಿದ್ಯಾಲಯಗಳು ಮತ್ತು ಕೈಗಾರಿಕೆಗಳೊಂದಿಗೆ ವಿನಿಮಯ ಯೋಜನೆಯನ್ನು ಪ್ರಾರಂಭಿಸಬೇಕು.

8. ಪಾರದರ್ಶಕ ಮೌಲ್ಯಮಾಪನ ಪದ್ಧತಿಯಡಿ ಶ್ರೇಷ್ಠ ಬೋಧಕರೆಂದು ಗುರುತಿಸಲ್ಪಟ್ಟವರನ್ನು ನಿವೃತ್ತಿಯ ನಂತರವೂ ಐದು ವರ್ಷದ ಅವಧಿಗೆ ಗುತ್ತಿಗೆ ಆಧಾರದಲ್ಲಿ ಮರು ನೇಮಿಸಿಕೊಳ್ಳಬಹುದು. ಈ ವಿಸ್ತರಣಾ ಅವಧಿಗೆ ಹಿರಿಯ ತಜ್ಞರು, ಹಿರಿಯ ಪ್ರೊಫೆಸರ್‌ಗಳ ಸೇವೆಯನ್ನು ಬಳಸಿಕೊಳ್ಳಲು ಅನುಕೂಲವಾಗುವಂತೆ ವಿಶ್ವವಿದ್ಯಾಲಯಗಳು ಸೂಕ್ತ ಹುದ್ದೆಗಳನ್ನು ಸೃಷ್ಟಿಸಬೇಕು.

9. ಸೇವೆಯಲ್ಲಿರುವ ಪ್ರತಿ ಬೋಧಕನಿಗೂ ಮತ್ತು ಸೇವೆಗೆ ಸೇರಿದಾಗಲೇ ಉಚಿತವಾಗಿ ಲ್ಯಾಪ್‌ಟಾಪ್‌ನ್ನು ನೀಡಬೇಕಲ್ಲದೇ, ಅದನ್ನು ಬಳಸುವತ್ತ ಸೂಕ್ತ ತರಬೇತಿಯನ್ನೂ ಒದಗಿಸಬೇಕು. ಈ ಉದ್ದೇಶ ಸಾಧನೆಗೆ ಒಂದು ಸೂಕ್ತ ಸರ್ಟಿಫಿಕೇಟ್ ಕೋರ್ಸ್‌ನ್ನು ರೂಪಿಸಬಹುದು.

ಮೌಲ್ಯಮಾಪನ, ಪಠ್ಯಸಂಬಂಧಿ ಮತ್ತು ಶಿಕ್ಷಣ ವಿಧಾನಗಳು

ಉನ್ನತ ಶಿಕ್ಷಣದ ಗುಣಮಟ್ಟದ ಮೂಲಭೂತ ಅಂಶಗಳನ್ನಾಗಿ ಪಠ್ಯಸಂಬಂಧಿ, ಶಿಕ್ಷಣ ವಿಧಾನಗಳು ಹಾಗೂ ಮೌಲ್ಯಮಾಪನವನ್ನು ಗುರುತಿಸಲಾಗುತ್ತಿದೆ. ಈ ಮೂರು ಪರಸ್ಪರ ಜತೆಯಾಗಿಯೇ ಸಾಗುತ್ತವೆ ಮತ್ತು ಬಹುತೇಕ ಬೋಧಕ ವರ್ಗ, ವಿದ್ಯಾರ್ಥಿ ಹಾಗೂ ಸಂಸ್ಥೆಗಳ ವಿಧಗಳಿಂದ ನಿರ್ಣಯಿಸಲ್ಪಡುತ್ತವೆ. ಅಂದಹಾಗೆ, ಈ ಮೂರು ನಿರ್ಣಾಯಕ ಅಂಶಗಳ ವಿಕಸನ, ಅನುಷ್ಠಾನ ಮತ್ತು ಸುಧಾರಣೆಯತ್ತ ಪ್ರಸ್ತುತ ಗಮನಹರಿಸಲಾಗಿದೆ.

ಶಿಫಾರಸ್ಸುಗಳು

1. ಎಲ್ಲ ಪದವಿ ಕೋರ್ಸುಗಳೂ ಮೊದಲ ವರ್ಷದಲ್ಲಿ ಸಾಮಾನ್ಯ ಕೋರ್ಸ್‌ಗಳನ್ನು ಹೊಂದಿರಬೇಕು. ಆ ಮೂಲಕ ವಿದ್ಯಾರ್ಥಿಗಳು ವಿವಿಧ ಶೈಕ್ಷಣಿಕ ವಿಷಯಗಳಿಗೆ ತೆರೆದುಕೊಳ್ಳುವಂತಾಗಬೇಕು. ಎರಡು, ಮೂರು ಮತ್ತು ನಂತರದ ವರ್ಷಗಳಲ್ಲಿ ಶೇ. 70 ರಷ್ಟು ನಿರ್ದಿಷ್ಟ ವಿಷಯ (ಸ್ಪೆಷಲೈಶೇಷನ್) ಮತ್ತು ಶೇ. 30ರಷ್ಟು ವಿಷಯಗಳು ಆಯ್ಕೆ ಆಧಾರಿತವಾಗಿರಬೇಕು. ತಮ್ಮ ಅಧ್ಯಯನ ಅಷ್ಟೂ ವರ್ಷಗಳಲ್ಲಿ ವಿಜ್ಞಾನ, ಮಾನವಿಕ ಮತ್ತು ಸಮಾಜ ವಿಜ್ಞಾನಗಳಿಗೆ ಸಂಬಂಧಿಸಿದಂತೆ ತಮಗಿಷ್ಟವಾದ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಂಡು ಕಲಿಯುವ ಸ್ವಾತಂತ್ರ್ಯ ಇರಬೇಕು.

2. ವಿಜ್ಞಾನ, ವೃತ್ತಿಶಿಕ್ಷಣ, ವೃತ್ತಿಪರ, ಕಲೆ, ಮಾನವಿಕ/ಸಮಾಜ ವಿಜ್ಞಾನ ಎಲ್ಲ ವಿಷಯಗಳಿಗೂ ಏಕರೀತಿಯ ಆದ್ಯತೆ ನೀಡಬೇಕು. ಜ್ಞಾನಾಧಾರಿತ ಸಮಾಜದ ಅಭಿವೃದ್ಧಿಗೆ ಇವೆಲ್ಲವೂ ಅವಶ್ಯ.

3. ಪದವಿ ಶಿಕ್ಷಣದ (ಯುಜಿ) ಪಠ್ಯಕ್ರಮದ ಪೈಕಿ ಶೇ. 75ರಷ್ಟನ್ನು ಮಾತ್ರ ವಿಶ್ವವಿದ್ಯಾಲಯಗಳು ರೂಪಿಸಬೇಕು. ಉಳಿದ ಶೇ. 25ರಷ್ಟನ್ನು ಸ್ಥಳೀಯ ಅಗತ್ಯಗಳು ಮತ್ತು ವಿದ್ಯಾರ್ಥಿಗಳ ನಿರೀಕ್ಷೆಗಳು ಹಾಗೂ ಬದಲಾಗುತ್ತಿರುವ ಸಾಮಾಜಿಕ ನೆಲೆಗಳಿಗೆ ಪೂರಕವಾಗಿ ಸಿದ್ಧಪಡಿಸುವ ಹೊಣೆಯನ್ನು ಆಯಾ ಕಾಲೇಜುಗಳಿಗೆ ಬಿಡಬೇಕು.

4. ವಿಜ್ಞಾನ ಮತ್ತು ಮಾನವಿಕ ವಿಷಯಗಳಲ್ಲಿ ಪ್ರಸ್ತುತ ಇರುವ ಮೂರು ವರ್ಷಗಳ ಪದವಿ ಪದ್ಧತಿಯ ಬದಲಿಗೆ ನಾಲ್ಕು ವರ್ಷಗಳ ಕೋರ್ಸ್‌ನ್ನು ಜಾರಿಗೊಳಿಸುವ ಬಗ್ಗೆ ಎಲ್ಲ ವಿಶ್ವವಿದ್ಯಾಲಯಗಳು ಗಂಭೀರವಾಗಿ ಆಲೋಚಿಸಬೇಕು.

5. ಪ್ರಸ್ತುತ ಮತ್ತು ಸಮಕಾಲೀನವೆನಿಸುತ್ತಿರುವ ಕ್ರೆಡಿಟ್ ಬೇಸ್ಡ್ ಕೋರ್ಸ್ ಪದ್ಧತಿಯನ್ನು ಆರಂಭಿಸಲು ಬೋಧಕ ವರ್ಗವನ್ನು ಸಿದ್ಧಗೊಳಿಸಬೇಕು. ಹೆಚ್ಚು ಪ್ರಸ್ತುತವೆನಿಸುವ ಮತ್ತು ನಾವೀನ್ಯತೆಯಿಂದ ಕೂಡಿದ ಕ್ರೆಡಿಟ್ ಬೇಸ್ಡ್ ಕೋರ್ಸ್‌ಗಳನ್ನು ವಿನ್ಯಾಸಗೊಳಿಸಲು ಅಗತ್ಯವಿರುವ ಕೌಶಲಗಳನ್ನು ರೂಢಿಸಿಕೊಳ್ಳಲು ಅನುಕೂಲವಾಗುವಂತೆ ರಾಜ್ಯಾದ್ಯಂತ ಬೋಧಕ ವರ್ಗಕ್ಕೆ ಬೃಹತ್ ಪ್ರಮಾಣದ ತರಬೇತಿಯನ್ನು ನೀಡಬೇಕು.

6. ಸದಾ ಪಠ್ಯಕ್ರಮ ಪರಾಮರ್ಶನದಲ್ಲಿ ತೊಡಗುವ ವಿಷಯ ತಜ್ಞರ ಮಾಹಿತಿಯನ್ನು ಎಲ್ಲ ವಿಶ್ವವಿದ್ಯಾಲಯಗಳೂ ಕ್ರೋಢೀಕರಿಸಿಡಬೇಕು. ವಿಶ್ವದ ಮತ್ತು ದೇಶದ ಪ್ರಮುಖ ವಿಶ್ವವಿದ್ಯಾಲಯಗಳ ತಜ್ಞರನ್ನೂ ಒಳಗೊಳ್ಳಬೇಕು. ಈ ಹೊರಗಿನ ವಿದ್ವಾಂಸರು, ಬೋಧಕ ವರ್ಗ ವರ್ಚುಯಲ್ ಮೀಡಿಯಾದ

ಮೂಲಕ ಪಠ್ಯಕ್ರಮ ಪರಾಮರ್ಶನದಲ್ಲಿ ಪಾಲ್ಗೊಳ್ಳುವಂತಾಗಬೇಕು. ಈ ಉದ್ದೇಶದ ಸಾಧನೆಗೆ ವಿಶ್ವವಿದ್ಯಾಲಯದ ಆಯ್ದ ಕೆಲವು ಕೇಂದ್ರಗಳಿಗೆ ವಿಡಿಯೋ ಕಾನ್ಫರೆನ್ಸ್ ಸೌಲಭ್ಯವನ್ನು ಕಲ್ಪಿಸಬೇಕು.

7. ಉತ್ತಮ ಗುಣಮಟ್ಟದ ಶಿಕ್ಷಣ ಸಂಸ್ಥೆಗಳು ಆರಂಭಿಸುವ ಓಪನ್ ಕೋರ್ಸ್ (ಆನ್‌ಲೈನ್ ಕೋರ್ಸ್)ಗಳನ್ನು ಪ್ರೋತ್ಸಾಹಿಸಬೇಕು. ಅವರ ಕಾರ್ಯ ನಿರ್ವಹಣೆಯ ಮೌಲ್ಯಮಾಪನ ಸಂದರ್ಭ ಕ್ರೆಡಿಟ್‌ನ್ನೂ ಕೊಡಿ.

8. ಶೈಕ್ಷಣಿಕ–ಉದ್ಯಮ ಸ್ನೇಹಿ–ಸಂಪರ್ಕ–ಸಂವಹನವನ್ನು ಹೆಚ್ಚಿಸುವ ಸಲುವಾಗಿ ಕೆಲವು ಕೋರ್ಸ್‌ಗಳ ಸಂಘಟನೆಗೆ ಉದ್ಯಮದಲ್ಲಿನ ತಜ್ಞರನ್ನೂ ಬಳಸಿಕೊಳ್ಳಲು ಅವಕಾಶ ನೀಡಬೇಕು.

9. ಕನ್ನಡದಲ್ಲಿ ಬೋಧನೆಯನ್ನು ಕೈಗೊಳ್ಳುವ ಮತ್ತು ಪ್ರೋತ್ಸಾಹಿಸುವ ಸಲುವಾಗಿ ವಿಷಯಸೂಚಿಯನ್ನು ರೂಪಿಸುವುದಲ್ಲದೇ, ತಂತ್ರಜ್ಞಾನ ನೆಲೆಯಲ್ಲಿ ಬಳಸಿಕೊಳ್ಳುವಂತಿರಬೇಕು. ಆ ನಿಟ್ಟಿನಲ್ಲಿ ವಿಷಯಸೂಚಿಯನ್ನು ಸಿದ್ಧಪಡಿಸಲು ವೆಬ್ (ಜಾಲತಾಣ) ಪ್ರಮುಖವಾದ ಮಾರ್ಗವಾದೀತು.

10. ಪ್ರತಿ ವಿದ್ಯಾರ್ಥಿಗೂ ಉಚಿತ ಲ್ಯಾಪ್‌ಟಾಪ್ ನೀಡಬೇಕು. ಪ್ರತಿ ಕಾಲೇಜುಗಳಲ್ಲೂ 3ಜಿ/ವೈಫೈ ತಂತ್ರಜ್ಞಾನವನ್ನು ಅಳವಡಿಸಿ ವಿದ್ಯಾರ್ಥಿಗಳಿಗೆ ಇಂಟರ್‌ನೆಟ್ ಸೌಲಭ್ಯ ಕಲ್ಪಿಸಬೇಕು. ಕನಿಷ್ಠ ಬೋಧಕ ವರ್ಗದ ಸೌಲಭ್ಯದೊಂದಿಗೆ ತಮ್ಮನ್ನು ರೂಪುಗೊಳಿಸಿಕೊಳ್ಳಲು ಇಂಟರ್‌ನೆಟ್ ಸೌಲಭ್ಯವನ್ನು ಬಳಸಿಕೊಳ್ಳುವತ್ತ ವಿದ್ಯಾರ್ಥಿಗಳಿಗೆ ತರಬೇತಿ ನೀಡಬೇಕು.

11. ಎಲ್ಲ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳನ್ನು ಅಧಿಕ ಸಾಮರ್ಥ್ಯದ ಬ್ರಾಂಡ್‌ಬ್ಯಾಂಡ್ ಸಂಪರ್ಕದಡಿ ಒಗ್ಗೂಡಿಸಬೇಕು. ಆಗ ತಂತ್ರಜ್ಞಾನದ ಮೂಲಕವೇ ಅವುಗಳ ಶಿಕ್ಷಣ ವಿತರಣೆ ಮತ್ತು ಮಾಪನವನ್ನು ಕೈಗೊಳ್ಳಬಹುದು.

12. ಜ್ಞಾನ ಪ್ರಸರಣಕ್ಕಾಗಿ ಟೆಲಿ–ಶಿಕ್ಷಣ ಮತ್ತು ಸಮುದಾಯ ರೇಡಿಯೋಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು.

13. ವಿದ್ಯಾರ್ಥಿಗಳು ತಮ್ಮಿಷ್ಟದ ಕೋರ್ಸ್‌ಗಳನ್ನು ತಮ್ಮಿಷ್ಟದ ವಿಶ್ವವಿದ್ಯಾಲಯದಿಂದ ಕಲಿಯುವಂತಾಗಲು ಎಲ್ಲ ವಿಶ್ವವಿದ್ಯಾಲಯಗಳಿಗೆ ದೂರ ಶಿಕ್ಷಣ/ಆನ್‌ಲೈನ್ ಶಿಕ್ಷಣ ಆರಂಭಿಸಲು ಅನುಮತಿ ನೀಡಬೇಕು. ಮುಕ್ತ ವಿಶ್ವವಿದ್ಯಾಲಯ ಮಾತ್ರ ದೂರಶಿಕ್ಷಣ ನೀಡಬೇಕೆಂಬುದೂ ಸೇರಿದಂತೆ ದೂರಶಿಕ್ಷಣ ಸಂಬಂಧಿ ಇರುವ ಎಲ್ಲ ನಿರ್ಬಂಧಗಳನ್ನೂ ತೆರವುಗೊಳಿಸಿ, ಮುಕ್ತಗೊಳಿಸಬೇಕು. ವಿದ್ಯಾರ್ಥಿಗಳಿಗೆ ಸಂಪೂರ್ಣ ಆಯ್ಕೆಯ ಸ್ವಾತಂತ್ರ್ಯ ನೀಡಬೇಕು.

14. ವಿಶ್ವವಿದ್ಯಾಲಯಗಳು ತಮ್ಮ ಹಲವು ರೆಗ್ಯುಲರ್ ಕೋರ್ಸ್‌ಗಳ ಪಠ್ಯಕ್ರಮದ ಭಾಗವಾಗಿ ವರ್ಚುಯಲ್ ಅಥವಾ ಆನ್‌ಲೈನ್ ಕೋರ್ಸ್‌ಗಳನ್ನು ಆರಂಭಿಸಬೇಕು.

15. ರಾಜ್ಯಾದ್ಯಂತ ಇಂಟರ್‌ನೆಟ್ ಸಂಪರ್ಕವನ್ನು ಸಾಧ್ಯಗೊಳಿಸಿ, ರಾಜ್ಯವನ್ನು ಅತ್ಯಂತ ಸಮರ್ಪಕ–ಸಮರ್ಥ ಸಂವಹನ ರಾಜ್ಯವನ್ನಾಗಿ ಮಾರ್ಪಡಿಸಿದಾಗ, ಜ್ಞಾನಾಧಾರಿತ ಸಮಾಜ ನಿರ್ಮಾಣದ ಕನಸು ಈಡೇರಲು ಸಾಧ್ಯ. ವಿದ್ಯಾರ್ಥಿಗಳ ತಂತ್ರಜ್ಞಾನ ಸ್ನೇಹಿಗಳಾಗಿಸುವುದಲ್ಲದೇ, ತಂತ್ರಜ್ಞಾನದ ಸದ್ಬಳಕೆಗೆ ಬೋಧಕರನ್ನೂ ತಯಾರುಗೊಳಿಸಬೇಕು. ಈ ಒಮ್ಮೆ ತೊಡಗಿಸುವ ಬಂಡವಾಳವು ಬೃಹತ್ ಪ್ರಮಾಣದಲ್ಲಿ ಲಾಭವನ್ನು ತಂದುಕೊಡಬಲ್ಲದು. ಅತ್ಯಂತ ಕಡಿಮೆ ಅವಧಿಯಲ್ಲಿ ನಮ್ಮ ಕಾರ್ಯ ಸಾಧ್ಯವಾಗಬಹುದು. ಈ ನಿಟ್ಟಿನಲ್ಲಿ ಪ್ರತ್ಯೇಕ ಕಾರ್ಯಪಡೆಯನ್ನು ರಚಿಸುವುದು ಸೂಕ್ತ.

16. ಪದವಿ ಶಿಕ್ಷಣದ ಬಹುತೇಕ ಪಠ್ಯಕ್ರಮವನ್ನು ಅನ್ವಯಿಕ ಜ್ಞಾನಕ್ಕೆ ಮೀಸಲಿಡಬೇಕು. ಸಮಸ್ಯೆಗಳನ್ನು ವಿಶ್ಲೇಷಿಸುವ, ಬಿಡಿಸುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವಂತಿರಬೇಕು. ಉರು ಹೊಡೆಯುವ

ಮತ್ತು ಸ್ಮರಣಶಕ್ತಿ ಶಕ್ತಿ ಮೂಲಕ ಕಲಿಯುವ ಪದ್ಧತಿಯಿಂದ ಜ್ಞಾನದ ಅನ್ವಯಿಕ ಕಲಿಕೆಗೆ ಸ್ಥಳಾಂತರಗೊಳ್ಳಬೇಕು. ಜ್ಞಾನವನ್ನು ಪ್ರಸಾರ ಮಾಡುವುದಕ್ಕಿಂತ ಆ ನೆಲೆಯಲ್ಲಿ ಸೌಲಭ್ಯವನ್ನಷ್ಟನ್ನೇ ಒದಗಿಸುವವನ ಪಾತ್ರ ಬೋಧಕರದ್ದಾಗಬೇಕು. ಕಲಿಕೆಯ ಪ್ರಕ್ರಿಯೆಯಲ್ಲಿ ಬೋಧಕರು ಮತ್ತು ವಿದ್ಯಾರ್ಥಿಗಳು ಒಗ್ಗೂಡಿ ಕೈಗೊಳ್ಳುವಂಥ ಚಟುವಟಿಕೆಯೇ ಜ್ಞಾನದ ಸೃಜನೆ (ಸೃಷ್ಟಿ). ಕೋರ್ಸ್‌ಗಳಲ್ಲಿ ಜ್ಞಾನದ ಪ್ರಾಯೋಗಿಕ ಅನ್ವಯಕ್ಕೆ ಅವಕಾಶ ಕಲ್ಪಿಸುವ ಪ್ರಾಜೆಕ್ಟ್ ವರ್ಕ್‌ಗೆ ಒಟ್ಟು ಅಂಕಗಳ ಶೇ. 25ರಷ್ಟನ್ನು ನೀಡಬೇಕು.

ವೃತ್ತಿಪರ ಶಿಕ್ಷಣ/ಮುಂದುವರಿಕೆ ಶಿಕ್ಷಣಕ್ಕೆ ಕ್ರಮಗಳು

ದೇಶದ ಆರ್ಥಿಕತೆಗೆ ಅಗತ್ಯವಿರುವ ಮಾನವಶಕ್ತಿಯನ್ನು ಒದಗಿಸುವಲ್ಲಿ ಸಾಮಾನ್ಯ ಶಿಕ್ಷಣ ಮತ್ತು ವೃತ್ತಿಪರ ಶಿಕ್ಷಣದ ಪಾತ್ರ ಬಹಳ ಮಹತ್ವವಾದುದು. ರಾಜ್ಯದ ಆರ್ಥಿಕ ಪ್ರಗತಿಗೆ ನೈಪುಣ್ಯತೆ ಹೊಂದಿದ ಕಾರ್ಮಿಕರು ಪ್ರಮುಖ ಅಂಶ. ವೃತ್ತಿಪರ ಶಿಕ್ಷಣಕ್ಕಿಂತ ಸಾಮಾನ್ಯ ಶಿಕ್ಷಣಕ್ಕೆ ಹೆಚ್ಚು ಅನುಕೂಲಗಳು ಸಿಕ್ಕಿವೆ. ಉದಾಹರಣೆಗೆ ಅನುದಾನ, ಸುಧಾರಣೆ ಇತ್ಯಾದಿ ಅಂಶಗಳಲ್ಲಿ ಹೆಚ್ಚಿನ ಗಮನ ಹರಿಸಲಾಗಿದೆ. ಆದರೆ ಸಾಮಾನ್ಯ ಶಿಕ್ಷಣದಷ್ಟೇ ಮಹತ್ವವಾಗಿರುವ ವೃತ್ತಿಪರ ಶಿಕ್ಷಣ ಆರ್ಥಿಕತೆಯಲ್ಲಿ ಬಹಳ ಪ್ರಮುಖ ಪಾತ್ರ ವಹಿಸುವಂಥದ್ದು. ಉನ್ನತ ಶಿಕ್ಷಣದಲ್ಲಿ ಒಟ್ಟು ದಾಖಲೀಕರಣ ಅನುಪಾತ ಕಡಿಮೆ ಇರಲು ಮತ್ತೊಂದು ಕಾರಣವೆಂದರೆ, ಉನ್ನತ ಶಿಕ್ಷಣವನ್ನು ಮುಂದುವರಿಸುವ ಬದಲು ವಿದ್ಯಾರ್ಥಿಗಳು ಉದ್ಯೋಗಕ್ಕೆ ಸೇರುವುದು. ಸಾಮಾನ್ಯ ಶಿಕ್ಷಣಕ್ಕೆ ದಾಖಲಾಗದ ಮಂದಿಯನ್ನು ಈ ವೃತ್ತಿಪರ ಶಿಕ್ಷಣದ ಮುಖೇನ ಉನ್ನತ ಶಿಕ್ಷಣದ ವ್ಯಾಪ್ತಿಗೆ ತರಬಹುದು. ಈ ಮೂಲಕ ಒಟ್ಟು ದಾಖಲೀಕರಣ ಪ್ರಮಾಣವನ್ನು ಹೆಚ್ಚಿಸಬಹುದು. ಇಂದು ಸೃಷ್ಟಿಯಾಗುತ್ತಿರುವ ವೃತ್ತಿಪರ ಶಿಕ್ಷಣದ ಅಗತ್ಯ ಮತ್ತು ಪ್ರಸ್ತುತತೆ ನಮ್ಮ ಆಲೋಚನಾ ಕ್ರಮದಲ್ಲೇ ಬದಲಾವಣೆ ತರುವ ಹಂತದಲ್ಲಿದೆ. ಭಾರತದಲ್ಲಿ 19–23 ವರ್ಷದೊಳಗಿನ ಶೇ. 5 ರಷ್ಟು ಮಂದಿ ಮಾತ್ರ ವೃತ್ತಿಪರ ಶಿಕ್ಷಣದಿಂದ ಕೆಲವು ಕೌಶಲಗಳನ್ನು ರೂಢಿಸಿಕೊಂಡಿದ್ದಾರೆ. ಕೊರಿಯಾದಲ್ಲಿ ಈ ಪ್ರಮಾಣ ಶೇ. 96 (ಭಾರತ ಸರಕಾರದ 11ನೇ ಪಂಚವಾರ್ಷಿಕ ಯೋಜನೆಯ ದಾಖಲೆಯಲ್ಲಿ ಉಲ್ಲೇಖಿತ). ಈ ಹಿನ್ನೆಲೆಯಲ್ಲಿ ವೃತ್ತಿಪರ ಶಿಕ್ಷಣ ಪಡೆಯುತ್ತಿರುವ ಮಹತ್ವವನ್ನು ಅರಿತ ಭಾರತ ಸರಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (ಎಚ್‌ಆರ್‌ಡಿ)ವು ಬಹುತೇಕ ವೃತ್ತಿಪರ ಕೌಶಲಗಳನ್ನು ಸಂಯೋಜಿಸಿದ ರಾಷ್ಟ್ರೀಯ ವೃತ್ತಿಪರ ಶಿಕ್ಷಣ ಅರ್ಹತಾ ಕಾರ್ಯ ಚೌಕಟ್ಟನ್ನು (National Vocational Education Qualification Framework) ರೂಪಿಸಿತು (NVEQF–2012–13).

ಕರ್ನಾಟಕದಲ್ಲಿ ಪ್ರಸ್ತುತ ನೀಡಲಾಗುತ್ತಿರುವ ವೃತ್ತಿಪರ ತರಬೇತಿ ನೆಲೆಯಿಂದ ವೃತ್ತಿಪರ ಶಿಕ್ಷಣಕ್ಕೆ ಸಂಪೂರ್ಣ ಬದಲಾವಣೆಗೊಳ್ಳಬೇಕಿದೆ. ವೃತ್ತಿಪರ ಶಿಕ್ಷಣವನ್ನೂ ಒಳಗೊಂಡಂತೆ ವಿಜ್ಞಾನ ಮತ್ತು ಮಾನವಿಕ/ಕಲಾ ಶಿಕ್ಷಣ (ವಾಣಿಜ್ಯ ಶಿಕ್ಷಣವನ್ನೂ ಸೇರಿ)ದ ನಡುವೆ ಒಂದು ಸೌಹಾರ್ದ ಕಾರ್ಯಸಂಬಂಧವನ್ನು ರೂಪಿಸಬೇಕು. ಪದವಿ ಶಿಕ್ಷಣದ ಹಂತದಲ್ಲಿ ವೃತ್ತಿಪರ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವುದಲ್ಲದೇ, ಕೃಷಿ ವಲಯ, ಉತ್ಪಾದನಾ ವಲಯ ಹಾಗೂ ಸೇವಾ ವಲಯದಲ್ಲಿನ ಅಗತ್ಯಕ್ಕೆ ಸಂಬಂಧಿಸಿದ ಹಲವು ಕೌಶಲಗಳನ್ನು ಕಲಿಸಬೇಕು.

ಶಿಫಾರಸ್ಸುಗಳು

1. ರಾಜ್ಯದ ವೃತ್ತಿಪರ ಶಿಕ್ಷಣದ ಸುಧಾರಣೆ ಹಿನ್ನೆಲೆಯಲ್ಲಿ ವಿವಿಧ ವೃತ್ತಿಪರ ಅರ್ಹತೆಗಳನ್ನು ಪರಸ್ಪರ ಸಮನ್ವಯಗೊಳಿಸಲು ಪೂರಕವಾಗುವಂತೆ ರಾಜ್ಯ ವೃತ್ತಿಪರ ಶಿಕ್ಷಣ ಅರ್ಹತಾ ಕಾರ್ಯ ಚೌಕಟ್ಟನ್ನು (State Vocational Education Qualification Framework) ಹಾಗೂ ರಾಜ್ಯ ಮುಂದುವರಿಕೆ ಶಿಕ್ಷಣದ ಕಾರ್ಯ ಚೌಕಟ್ಟನ್ನು (State Lifelong Education Qualification Framework) ಅಭಿವೃದ್ಧಿಪಡಿಸಬೇಕು.

2. ಉದ್ಯೋಗದಾತ ಮತ್ತು ಉದ್ಯಮಾಧಾರಿತ ಸ್ನೇಹಿ ವಾತಾವರಣವನ್ನು ವೃತ್ತಿಪರ ಶಿಕ್ಷಣಕ್ಕೆ ಕಲ್ಪಿಸಬೇಕು. ವೃತ್ತಿಪರ ಶಿಕ್ಷಣದ ಅಭಿವೃದ್ಧಿಗೆ ಪ್ರಮುಖವಾಗಿ ಆರ್ಥಿಕ ಸಂಪನ್ಮೂಲ, ಮೂಲಭೂತ ಸೌಕರ್ಯ, ನುರಿತ ಬೋಧಕ ವರ್ಗ, ಪಠ್ಯಕ್ರಮ ಅಭಿವೃದ್ಧಿಗೊಳಿಸುವ ತಜ್ಞರು, ಮಾಪನ ತಜ್ಞರನ್ನು ಒದಗಿಸಬೇಕಾಗಿದೆ. ರಾಜ್ಯ ಸರಕಾರವು ಈ ನಿಟ್ಟಿನಲ್ಲಿ ಸ್ಪಷ್ಟ ನೀತಿಯನ್ನು ರೂಪಿಸಬೇಕು.

3. ಉದ್ಯಮಗಳು–ಕೈಗಾರಿಕೆಗಳು ಹೆಚ್ಚು ಸಂಖ್ಯೆಯ ಅಭ್ಯರ್ಥಿಗಳಿಗೆ ತರಬೇತಿ ನೀಡಲು ಪೂರಕವಾಗುವಂತೆ ಅಪ್ರೆಂಟ್‌ಶಿಪ್ ಕಾಯ್ದೆಯನ್ನು ತಿದ್ದುಪಡಿಗೊಳಿಸಬೇಕು. ಇದು ವೃತ್ತಿಪರ ಶಿಕ್ಷಣದ ಯಶಸ್ಸಿಗೆ ಕಾರಣವಾಗಬಲ್ಲದು.

4. ಉನ್ನತ ಶಿಕ್ಷಣದಲ್ಲಿ ಲೇಟರಲ್ ಎಂಟ್ರಿ (Lateral entry system) ಪದ್ಧತಿಯನ್ನು ಜಾರಿಗೆ ತರುವ ಮೂಲಕ, ಉದ್ಯೋಗದ ಅವಕಾಶಕ್ಕಾಗಿ ಅರ್ಧದಲ್ಲೇ ಶಿಕ್ಷಣವನ್ನು ಮೊಟಕುಗೊಳಿಸಿದವರಿಗೆ ಶಿಕ್ಷಣ ಮುಂದುವರಿಸಲು ಸುಲಭ ಅವಕಾಶ ಕಲ್ಪಿಸಬೇಕು. ಜೊತೆಗೆ, ಸಾಮಾನ್ಯ ಶಿಕ್ಷಣ ಮತ್ತು ವೃತ್ತಿಪರ ಶಿಕ್ಷಣದ ಮಧ್ಯೆ ಸಂಪರ್ಕ–ಚಲನೆ ಸಾಧ್ಯವಾಗುವಂಥ ರೀತಿಯಲ್ಲಿ ಕ್ರೆಡಿಟ್ ಟ್ರಾನ್ಸ್‌ಫರ್ ಪದ್ಧತಿಯನ್ನು ಜಾರಿಗೊಳಿಸಬೇಕು. ಈ ಉದ್ದೇಶ ಸಾಧನೆಗೆ ಸಮುದಾಯ ಕಾಲೇಜುಗಳು ಮತ್ತು ಸಹ ಪದವಿಗಳಂಥ ಮಾದರಿಗಳ ಪ್ರಯೋಗಗಳನ್ನು ಕೈಗೊಳ್ಳಬಹುದು.

5. ಎಲ್ಲ ವಿಶ್ವವಿದ್ಯಾಲಯಗಳ ಪದವಿ ಮತ್ತು ಸ್ನಾತಕೋತ್ತರ ಪದವಿಗಳ ಕಲಿಕೆಯ ಅಂತರ್ಗತ ಭಾಗವಾಗಿ ಕೌಶಲ ಅಭಿವೃದ್ಧಿಯನ್ನು ಸೇರಿಸಬೇಕು. ಇದರಿಂದ ವಿದ್ಯಾರ್ಥಿಗಳು ಜ್ಞಾನದೊಂದಿಗೇ, ವೃತ್ತಿ ಕೌಶಲ, ಕಸುಬುದಾರಿಕೆಯನ್ನೂ ರೂಢಿಸಿಕೊಳ್ಳಬಲ್ಲರು. ಇದಕ್ಕಾಗಿ ವಿವಿಧ ವಿಭಾಗಗಳಲ್ಲಿ ಸಣ್ಣ ಮಟ್ಟಿನಲ್ಲಿ ವಿಶೇಷ ಘಟಕಗಳನ್ನು ಸ್ಥಾಪಿಸುವ ಹಾಗೂ ವಿಶ್ವವಿದ್ಯಾಲಯ ಮಟ್ಟದಲ್ಲಿ ದೊಡ್ಡ ಮಟ್ಟದಲ್ಲೇ ಆರಂಭಿಸಬಹುದು.

6. ಸಮುದಾಯ ಮಟ್ಟದಲ್ಲಿ ಸಾಂಪ್ರದಾಯಿಕ ಮತ್ತು ಅನೌಪಚಾರಿಕ ಕೌಶಲಗಳನ್ನು ಪ್ರಮಾಣೀಕರಿಸಲು ವಿಶ್ವವಿದ್ಯಾಲಯಗಳು ತಮ್ಮದೇ ಸೂಕ್ತ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕು. ಇದಕ್ಕೆ ಹೆಚ್ಚುವರಿಯಾಗಿ, ಜ್ಞಾನ ಮತ್ತು ಕೌಶಲ ಅಭಿವೃದ್ಧಿ ಎರಡೂ ಇರುವ ಬಹುನೆಲೆಯ (ಹೈಬ್ರಿಡ್) ಸೂಕ್ತವೆನಿಸುವ ಸರ್ಟಿಫಿಕೇಟ್, ಡಿಪ್ಲೊಮಾ ಹಾಗೂ ಪದವಿ ಕೋರ್ಸ್‌ಗಳನ್ನು ವಿನ್ಯಾಸಗೊಳಿಸಬಹುದು.

ಶಿಕ್ಷಣದ ಅಂತಾರಾಷ್ಟ್ರೀಕರಣಕ್ಕೆ ಕ್ರಮಗಳು

ಉನ್ನತ ಶಿಕ್ಷಣ ವಲಯದಲ್ಲಿ ಕೊಡು–ಕೊಳ್ಳು (ಆಮದು–ರಫ್ತು)ವಿಕೆಯತ್ತ ಹೆಚ್ಚು ಬದ್ಧತೆ ತೋರಿದಾಗ ಮಾತ್ರ ಭಾರತೀಯ ಶಿಕ್ಷಣದಲ್ಲಿ ಜಾಗತೀಕರಣದ ಅಧ್ಯಾಯ ತೆರೆಯಲು ಸಾಧ್ಯವಾಗಬಹುದು. ಗ್ಯಾಟ್ ಒಪ್ಪಂದದಡಿ (General Agreement on Trade in Services) ಶಿಕ್ಷಣವನ್ನೂ ಮಾರಾಟ ಮಾಡಬಹುದಾದ ಸಾಮಗ್ರಿಯಾಗಿ ಪರಿಗಣಿಸಿರುವುದು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಬಹಳ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಮುಂದಿನ ದಿನಗಳಲ್ಲಿ ಉನ್ನತ ಶಿಕ್ಷಣದ ವಿತರಣಾ ವಿಧಾನದಲ್ಲಿ ವಿದೇಶಿ ಒಪ್ಪಂದಗಳು, ಪಾಲುದಾರಿಕೆಯಂಥ ಬಹಳಷ್ಟು ಹೊಸ ಉಪಕ್ರಮಗಳು ಆರಂಭವಾಗಬಹುದು. ಈ ಮಧ್ಯೆ, ಎಲ್ಲ ರಾಷ್ಟ್ರಗಳ, ಸಮುದಾಯಗಳ ಹಾಗೂ ಸಂಸ್ಕೃತಿಗಳ ವೈವಿಧ್ಯತೆ ಮತ್ತು ವೈಯಕ್ತಿಕ ಅಭಿವೃದ್ಧಿಯ ಕಾಳಜಿಗೆ ಈ ಇಡೀ ಒಗ್ಗೂಡುವ ಪ್ರಕ್ರಿಯೆ ಸಂವೇದನಾಶೀಲವಾಗಿರಬೇಕು. ಆ ನೆಲೆಯಲ್ಲೇ ಸಾಗಬೇಕು. ಆದರೂ, ಸಾಮಾಜಿಕ ಸಮಾನತೆಯಂಥ ಅಂಶಗಳನ್ನು ನಿರ್ವಹಿಸುವ ಬಗೆಯನ್ನು ಇನ್ನೂ ಶೋಧಿಸಬೇಕಿದೆ.

ಶಿಫಾರಸ್ಸುಗಳು

1. ಪರಸ್ಪರ ಎರಡೂ ಕಡೆಯಿಂದ ಬೋಧಕ ವರ್ಗ ಮತ್ತು ವಿದ್ಯಾರ್ಥಿಗಳ ವಿನಿಮಯ ಸಾಧ್ಯವಾಗಲು ಯುರೋಪ್‌ನಲ್ಲಿರುವ 'ಅವಳಿ ಮಾದರಿ' (Twinning model)ನ್ನು ಅನುಸರಿಸಬೇಕು.

2. ಅಂತಾರಾಷ್ಟ್ರೀಕರಣ ಪ್ರಕ್ರಿಯೆಯಲ್ಲಿ ಸಮನ್ವಯವನ್ನು ಕಾದುಕೊಳ್ಳಲು ಅನುಕೂಲವಾಗುವಂತೆ ರಾಜ್ಯದ ಎಲ್ಲ ಪ್ರಮುಖ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅಂತರರಾಷ್ಟ್ರೀಯ ಸಂಪರ್ಕ ಕಚೇರಿ ಅಥವಾ ಘಟಕಗಳನ್ನು ತೆರೆಯಬೇಕು. ಪ್ರತಿ ವಿಶ್ವವಿದ್ಯಾಲಯವೂ ಅಂತರರಾಷ್ಟ್ರೀಯ ಗುಣಮಟ್ಟದ ವೆಬ್‌ಸೈಟ್‌ಗಳನ್ನು ಹೊಂದಿರಬೇಕು ಹಾಗೂ ತಮ್ಮಲ್ಲಿ ಲಭ್ಯವಿರುವ ಕೋರ್ಸ್‌ಗಳ ವಿವರವು ಅದರಲ್ಲಿ ಲಭ್ಯವಿರುವಂತೆ ಕ್ರಮ ಕೈಗೊಳ್ಳಬೇಕು. ಅಂತಾರಾಷ್ಟ್ರೀಕರಣ ಪ್ರಕ್ರಿಯೆಯನ್ನು ಪ್ರೋತ್ಸಾಹಿಸಲು ಹೆಚ್ಚು ಪ್ರಚಾರ ಒದಗಿಸಬೇಕು.

3. ಏಷ್ಯಾ ಮತ್ತು ಆಫ್ರಿಕಾ ಖಂಡದ ದೇಶಗಳು ಮುಂಬರುವ ವರ್ಷಗಳಲ್ಲಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಪ್ರಮುಖವಾಗಿ ತೊಡಗಿಕೊಳ್ಳುವ ಸಾಧ್ಯತೆ ಇರುವುದರಿಂದ, ಅತ್ತ ಕರ್ನಾಟಕ ವಿಶೇಷ ಗಮನ ನೀಡಬೇಕು.

4. ರಾಜ್ಯದಲ್ಲಿ ಅಂತಾರಾಷ್ಟ್ರೀಕರಣ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸರಕಾರ ಕೈಗೊಳ್ಳುವ ನೀತಿ ಹಾಗೂ ಕೋರ್ಸ್ ಇತ್ಯಾದಿಯ ನಿಯಂತ್ರಣ–ಉಸ್ತುವಾರಿ ಹಾಗೂ ಸಮನ್ವಯ ಸಾಧಿಸಲು ಏಕಗವಾಕ್ಷಿ ಪದ್ಧತಿ ಅಥವಾ ಪ್ರತ್ಯೇಕ ಪ್ರಾಧಿಕಾರ ರಚಿಸಬೇಕು.

5. ಕೇಂದ್ರ ಸರಕಾರದ ಮೂಲಕ ಸಂಶೋಧನೆ ಮತ್ತು ಶೈಕ್ಷಣಿಕ ಕಾರಣಕ್ಕೆ ರಾಜ್ಯಕ್ಕೆ ಭೇಟಿ ನೀಡುವ ವಿದ್ಯಾರ್ಥಿ ಹಾಗೂ ಬೋಧಕ ಸಮುದಾಯಕ್ಕೆ ರಾಜ್ಯ ಸರಕಾರ ವೀಸಾ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು.

ನೀತಿನಿರೂಪಣೆ/ಆಡಳಿತ ನಿರ್ವಹಣೆ/ಸೇವೆಗೆ ಕುರಿತಾದ ಕ್ರಮಗಳು

ಉನ್ನತ ಶಿಕ್ಷಣ ಕ್ಷೇತ್ರವೆಂಬ ಬೃಹತ್ ಮತ್ತು ಸಂಕೀರ್ಣ ವ್ಯವಸ್ಥೆಯನ್ನು ನಿಭಾಯಿಸುವುದೇ ಅತಿಕಷ್ಟಕರವಾದುದು. ನಿರಂತರ ಸುಧಾರಣೆ ಮತ್ತು ಅವುಗಳ ಪರಿಣಾಮಕಾರಿ ಅನುಷ್ಠಾನವನ್ನು ಈ ಕ್ಷೇತ್ರ ಬಯಸುತ್ತಿದೆ. ಉನ್ನತ ಶಿಕ್ಷಣದ ನೀತಿನಿರೂಪಣೆ–ಆಡಳಿತದಲ್ಲಿ ಚರ್ಚಿಸಲೇಬೇಕಾದ ಕೆಲವು ಸಂಗತಿಗಳೆಂದರೆ: ಸ್ವಾಯತ್ತೆಯ ನೈಜ ಕೊರತೆ, ಮಿತಿಮೀರಿದ ಕೇಂದ್ರೀಕೃತ ವ್ಯವಸ್ಥೆ, ಉತ್ತರದಾಯಿತ್ವದ ಕೊರತೆ, ಅತಿಯಾದ ರಾಜಕೀಯ ಹಸ್ತಕ್ಷೇಪ, ಆರ್ಥಿಕ ಸಹಕಾರದ ಕೊರತೆ, ಖಾಸಗಿ ಶಿಕ್ಷಣ ಸಂಸ್ಥೆಗಳು ಹಾಗೂ ಅಂತರ್–ಸಾಂಸ್ಥಿಕ ಸುಧಾರಣೆ ಬಗ್ಗೆ ನೀರಸ ಪ್ರತಿಕ್ರಿಯೆ. ಹಲವು ಪ್ರಮುಖ ಬದಲಾವಣೆಗಳೊಂದಿಗೆ ಉನ್ನತ ಶಿಕ್ಷಣ ಕ್ಷೇತ್ರವು ಪ್ರಗತಿಪಥದತ್ತ ಸಾಗುವಲ್ಲಿ ನೀತಿ ನಿರೂಪಣೆಯ ಪಾತ್ರ ಮಹತ್ವದ್ದು.

ಶಿಫಾರಸ್ಸುಗಳು

1. ಸರಕಾರದ ಪಾತ್ರವನ್ನು ಮೂರು ವಿಭಾಗಗಳಾಗಿ ವಿಂಗಡಿಸುವುದು ಉತ್ತಮ. 1. ಸೌಲಭ್ಯ ಕಲ್ಪಿಸುವವ 2. ನಿಯಂತ್ರಣ ಮಾಡುವವ 3. ಉನ್ನತ ಶಿಕ್ಷಣ ಸೇವೆಯನ್ನು ಒದಗಿಸುವವ. ಈ ಎಲ್ಲಾ ಪಾತ್ರಗಳೂ ವಿಶಿಷ್ಟ ಮತ್ತು ಪ್ರತ್ಯೇಕ. ಈ ಪ್ರತ್ಯೇಕತೆಯೇ ಒಳ್ಳೆಯ ಆಡಳಿತ–ನೀತಿ ನಿರೂಪಣೆಗೆ ನೆಲೆಯಾಗುವಂಥದ್ದು. ಸೌಲಭ್ಯ ಕಲ್ಪಿಸುವವನ ಪಾತ್ರದಲ್ಲಿ ಉನ್ನತ ಶಿಕ್ಷಣ ಇಲಾಖೆಯು ನೀತಿ ನಿರೂಪಣೆ ಮತ್ತು ವಿದ್ಯಾರ್ಥಿ ಸಮುದಾಯದ ಸಬಲೀಕರಣಕ್ಕೆ ಗಮನಹರಿಸಬೇಕು. ನಿಯಮ ಪಾಲನೆ ಮತ್ತು ಗುಣಮಟ್ಟ ಪರಿಶೀಲನೆಗಾಗಿ ಸ್ವತಂತ್ರ ಮತ್ತು ವೃತ್ತಿಪರವಾದ ನಿಯಂತ್ರಣ ಸಂಸ್ಥೆ (ವ್ಯವಸ್ಥೆ)ಯೊಂದನ್ನು ಸರಕಾರವು ಸ್ಥಾಪಿಸುವ ಮೂಲಕ ನಿಯಂತ್ರಕನ ಪಾತ್ರವನ್ನು ನಿರ್ವಹಿಸಬೇಕು. ರಾಜ್ಯದ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡಲು ಅನುವಾಗಲು ಅಗತ್ಯಗಳನ್ನು ಪೂರೈಸಲು ಪ್ರತ್ಯೇಕ ಸ್ವತಂತ್ರ ವ್ಯವಸ್ಥೆಯನ್ನು (ಘಟಕ) ಉನ್ನತ ಶಿಕ್ಷಣ ಇಲಾಖೆ ಸ್ಥಾಪಿಸಬೇಕು. ಇದು ಸೇವೆಯನ್ನು ಒದಗಿಸುವವನ ಪಾತ್ರದ ಕರ್ತವ್ಯ.

2. ಭಾರತ ಸರಕಾರವು ರೂಪಿಸಿರುವ ವಸ್ತುನಿಷ್ಠ ಮತ್ತು ಪಾರದರ್ಶಕ ಮಾನದಂಡಗಳ ಆಧಾರದ ಮೇಲೆ ವಿದೇಶಿ ವಿಶ್ವವಿದ್ಯಾಲಯಗಳು ಕರ್ನಾಟಕಕ್ಕೆ ಬರುವಂತಾಗಲು ಸೂಕ್ತ ಕಾಯಿದೆಯನ್ನು ರೂಪಿಸಬೇಕು.

3. ರಾಜ್ಯದ ಸಾರ್ವಜನಿಕ ಮತ್ತು ಖಾಸಗಿ ವಿಶ್ವವಿದ್ಯಾಲಯಗಳ ಪಿಎಚ್‌ಡಿ ಕಾರ್ಯಕ್ರಮವೂ ಸೇರಿದಂತೆ ಎಲ್ಲದರ ಬಗೆಗಿನ ಇತ್ತೀಚಿನ ಅಂಕಿ ಅಂಶವನ್ನು ಸರಕಾರವು ಹೊಂದಿರಬೇಕು. ಆಗಾಗ್ಗೆ ಇತ್ತೀಚಿನ ಅಂಕಿಅಂಶಗಳನ್ನು ದಾಖಲಿಸಿ ಪ್ರಸ್ತುತಗೊಳಿಸುವ ಕೆಲಸವನ್ನು ಸಾಂಸ್ಥಿಕ ಹೊಣೆಗಾರಿಕೆಯನ್ನಾಗಿಸಬೇಕು. ಆಗ ಅಂಕಿಅಂಶಗಳ ವಿಶ್ಲೇಷಣೆ, ವರ್ತಮಾನದ ಅಲೆ (ಟ್ರೆಂಡ್)ಯ ವಿಶ್ಲೇಷಣೆಗೆ ಅನುಕೂಲವಾಗುತ್ತದೆ. ಜತೆಗೆ ಸಕಾಲದಲ್ಲಿ ಸೂಕ್ತ ನಿರ್ಧಾರ ತಳೆಯಲೂ ಸಾಧ್ಯವಾಗುತ್ತದೆ.

4. ಸ್ವಾಯತ್ತ ಸ್ಥಾನಮಾನ ಹೊಂದಲು ಕಾಲೇಜುಗಳನ್ನು ಪ್ರೋತ್ಸಾಹಿಸಬೇಕು ಹಾಗೂ 20 ವರ್ಷಕ್ಕೂ ಹೆಚ್ಚು ಕಾಲದಿಂದ ಇರುವ ಕಾಲೇಜುಗಳಿಗೆ ಸ್ವಾಯತ್ತ ಸ್ಥಾನಮಾನವನ್ನು ಹೊಂದಲು ಸಾಧ್ಯವಾಗುವಂತೆ ವಿಶೇಷ ಆರ್ಥಿಕ ಅನುದಾನವನ್ನು ನೀಡಬೇಕು. ಹೆಚ್ಚು ಕಾಲೇಜುಗಳು ಸ್ವಾಯತ್ತೆ ಹೊಂದುವಂತಾಗಲು ಪ್ರಸ್ತುತ ಇರುವ ನಿಯಮಾವಳಿಗಳನ್ನು ಪುನರ್ ಪರಿಶೀಲಿಸಿ ಮತ್ತಷ್ಟು ಉದಾರಗೊಳಿಸಬೇಕು. ಸ್ವಾಯತ್ತೆಯ ದಿಕ್ಕಿನಲ್ಲೇ ಶಾಶ್ವತ ಮಾನ್ಯತೆ ಕೊಡಲು ಸಾಧ್ಯವೇ ಎಂಬುದರ ಬಗ್ಗೆಯೂ ಚಿಂತನೆ ನಡೆಸಬೇಕು. ಈ ಕ್ರಮಗಳು ರಾಜ್ಯದಲ್ಲಿ ಬಹು ಆಯಾಮಗಳುಳ್ಳ ಅತ್ಯುನ್ನತ ಉನ್ನತ ಶಿಕ್ಷಣ ಕೇಂದ್ರಗಳು ರೂಪುಗೊಳ್ಳಲು ಪೂರಕವಾದೀತು.

5. ರಾಜ್ಯದಲ್ಲಿರುವ ಎಲ್ಲ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳು ಐದು ವರ್ಷದೊಳಗೆ ಮಾನ್ಯತೆ ಪಡೆಯಬೇಕು. ಆ ಮಾನ್ಯತೆಯನುಸಾರ ಅನುದಾನ ವಿತರಿಸಬೇಕು. ಇದು ಸಾಧ್ಯವಾಗಲು, ಸರಕಾರವೇ ಕೆಲವು ಅನುಮೋದಿತ ಮೌಲ್ಯಮಾಪನ (ಮಾನ್ಯತೆ ನೀಡುವ) ಸಂಸ್ಥೆಗಳನ್ನು ಗುರುತಿಸಬೇಕು ಇಲ್ಲವೇ ಸ್ವತಂತ್ರ ಮೌಲ್ಯಮಾಪನ ಸಂಸ್ಥೆಯನ್ನು ಹೊಂದಬೇಕು.

6. ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದಲ್ಲದೇ, ಉದ್ಯಮಶೀಲತಾ ಮತ್ತು ನಾವೀನ್ಯತಾ ಕೇಂದ್ರಗಳನ್ನು ಸ್ಥಾಪಿಸಬೇಕು. ಸರಕಾರವು ಎಲ್ಲ ವಿಶ್ವವಿದ್ಯಾಲಯಗಳಲ್ಲಿ 10 ಕೋಟಿ ರೂ.ಗಳ ಪ್ರಾರಂಭಿಕ ದೇಣಿಗೆಯೊಂದಿಗೆ "ಮಾರ್ಗದರ್ಶನ ಸಲಹಾ ಕೇಂದ್ರ" (Incubatgion Centre)ಗಳನ್ನು ತೆರೆಯಬೇಕು. ಈ ಕೇಂದ್ರಗಳು ಹೊಸ ಕ್ರಮಗಳು–ಸುಧಾರಣೆಗಳ ಅನುಷ್ಠಾನ ಸಂದರ್ಭ ಎದುರಾಗುವ ಸಂಕಷ್ಟಗಳನ್ನು ನಿವಾರಿಸಿ ಗುರಿ ಸಾಧನೆಗೆ ಪ್ರಯತ್ನಿಸುತ್ತವೆ.

7. ಬೌದ್ಧಿಕ ಆಸ್ತಿ (IP) ಸೃಷ್ಟಿಯನ್ನು ಪ್ರೋತ್ಸಾಹಿಸುವ ಸಲುವಾಗಿ ಪ್ರತಿ ವಿಶ್ವವಿದ್ಯಾಲಯಗಳ ಐಪಿ ಕೇಂದ್ರಗಳನ್ನು ಸ್ಥಾಪಿಸಬೇಕು. ಇವು ಬೌದ್ಧಿಕ ಆಸ್ತಿಯ ಸೃಜನೆ ಮತ್ತು ಸಂರಕ್ಷಣೆಗೆ ಸಹಕರಿಸುತ್ತವೆ.

8. ಸಂಶೋಧನೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಪ್ರತಿ ವಿಶ್ವವಿದ್ಯಾಲಯಗಳೂ ಪ್ರತ್ಯೇಕ ಸಂಶೋಧನಾ ವಿಭಾಗದ ನಿರ್ದೇಶಕರನ್ನು ನೇಮಿಸಬೇಕು. ಬೋಧಕ ವರ್ಗದ ಸಂಶೋಧನಾ ಪ್ರಸ್ತಾವನೆ, ಅದಕ್ಕೆ ಸಹಾಯಧನದ ಮೂಲಗಳ ಅನ್ವೇಷಣೆ, ಪೂರ್ಣಗೊಂಡ ಸಂಶೋಧನೆಗಳ ಪರಿಶೀಲನೆ, ಪೂರ್ಣಗೊಂಡ ಸಂಶೋಧನೆಗಳ ಭಂಡಾರ (ದಾಖಲೀಕರಣ)ದ ಸ್ಥಾಪನೆ, ಪ್ರಗತಿಯಲ್ಲಿರುವ ಸಂಶೋಧನೆಗಳ ಬಗ್ಗೆ ಗಮನ, ಮಾರುಕಟ್ಟೆ ಆಧಾರಿತ ಸಂಶೋಧನಾ ಯೋಜನೆಗಳು ಹಾಗೂ ಸಂಶೋಧನೆ ಮೂಲಕ ರೂಪುಗೊಂಡ ಬೌದ್ಧಿಕ ಆಸ್ತಿಯನ್ನು ನಿರ್ವಹಿಸುವ ಹೊಣೆಗಾರಿಕೆ ಈ ನಿರ್ದೇಶಕರದ್ದಾಗಿರುತ್ತದೆ.

ಕಾರ್ಯನೀತಿ ಶಿಫಾರಸ್ಸುಗಳು

ವಿಷನ್ 2020 ಯನ್ನು ತಲುಪಲು ಮೇಲೆ ಹೇಳಲಾದ ಕ್ರಮಗಳು ಸಹಾಯಕವಾಗಲಿದೆ ಎಂದು ನಿರೀಕ್ಷಿಸಲಾಗಿದೆ. ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು ಇವುಗಳನ್ನು ಹೆಚ್ಚು ಗಮನವಹಿಸಿ ಅನುಷ್ಠಾನಗೊಳಿಸಬೇಕು. ಕೆಲವು ಕ್ರಮಗಳ ಜಾರಿಗೆ ಸರಕಾರದ ಸಹಕಾರವೂ ಬೇಕು. ಆದರೂ, ಸಾಮಾನ್ಯವಾಗಿ ವಿಶ್ವವಿದ್ಯಾಲಯಗಳ ಸಕಾರಾತ್ಮಕ ಉಪಕ್ರಮ ಹಾಗೂ

ವಿಶೇಷವಾಗಿ ಸ್ವಾಯತ್ತ ಕಾಲೇಜುಗಳು ಈ ನಿಟ್ಟಿನಲ್ಲಿ ಕ್ರಿಯಾಶೀಲವಾಗಬೇಕು. ಉಳಿದಂತೆ ಈ ಕೆಳಗೆ ಉಲ್ಲೇಖಿಸುತ್ತಿರುವ ಕ್ರಮಗಳು ಸರಕಾರ ಮತ್ತು ಅದರ ಕಾರ್ಯನೀತಿಗೆ ಸಂಬಂಧಿಸಿದ್ದು.

1. ಬೋಧಕ ವರ್ಗದ ನೇಮಕ, ತರಬೇತಿ, ಕಾಲಾನುಕ್ರಮ ಸಾಮರ್ಥ್ಯ ವೃದ್ಧಿಗೆ ಕ್ರಮ, ಕಾರ್ಯಕ್ಷಮತೆಯ ಮೌಲ್ಯಮಾಪನ, ವೃತ್ತಿಪರ ಧೋರಣೆಯ ಅಭಿವೃದ್ಧಿ, ನೈತಿಕತೆ, ಸಂಶೋಧನೆ ಹಾಗೂ ದತ್ತಾಂಶ ಸಂಗ್ರಹದಂಥ ಹಲವು ಅಂಶಗಳ ನಿರ್ವಹಣೆಗೆ ಸಾರ್ವಜನಿಕ–ಖಾಸಗಿ ಪಾಲುದಾರಿಕೆಯ ಪ್ರತ್ಯೇಕ ಸ್ವತಂತ್ರ ಅಕಾಡೆಮಿಯನ್ನು ಸ್ಥಾಪಿಸಬೇಕು. ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಲ್ಲಿನ ಆಡಳಿತ ನಿರ್ವಹಣೆ ಸುಧಾರಣೆಗೆ ಅನುಕೂಲವಾಗಲು ಅಕಾಡೆಮಿಯು ಶೈಕ್ಷಣಿಕ ಆಡಳಿತ ನಿರ್ವಹಣೆ ವಿಷಯದಲ್ಲಿ ಒಂದು ವರ್ಷದ ಎಂಬಿಎ ಪದವಿಯನ್ನು ಆರಂಭಿಸಬೇಕು. ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ತಮ್ಮಲ್ಲಿನ ಆಡಳಿತ ನಿರ್ವಹಣೆಯಲ್ಲಿ ದಕ್ಷತೆ ತರುವ ಸಲುವಾಗಿ ಕಡ್ಡಾಯವಾಗಿ ಈ ಕೋರ್ಸ್‌ನ್ನು ಕಲಿಯಬೇಕು.

2. ಕರ್ನಾಟಕದಲ್ಲಿ ಉನ್ನತ ಶಿಕ್ಷಣ ಪಡೆಯಲು ಬಯಸುವ ವಿದ್ಯಾರ್ಥಿಗಳ ಬಯಕೆಯನ್ನು ಈಡೇರಿಸಲು ಕರ್ನಾಟಕ ವಿದ್ಯಾರ್ಥಿ ವೇತನ ಮತ್ತು ಸಾಲನಿಧಿ ಪ್ರಾಧಿಕಾರವನ್ನು ತೆರೆಯಬೇಕು. ಈ ಪ್ರಾಧಿಕಾರವು ವಿದ್ಯಾರ್ಥಿ ವೇತನ ಹಂಚಿಕೆ, ಸಾಲ ನೀಡಿಕೆ ಮತ್ತು ನಿರ್ವಹಣೆಯನ್ನು ಕೈಗೊಳ್ಳುತ್ತದೆ. ಕೇಂದ್ರ ಮತ್ತು ರಾಜ್ಯ ಸರಕಾರದ ವಿವಿಧ ಯೋಜನೆ–ಇಲಾಖೆಗಳಲ್ಲಿ ಲಭ್ಯವಿರುವ ವಿದ್ಯಾರ್ಥಿ ವೇತನ–ಸಹಾಯಧನದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರಕ್ಕೆ ವರ್ಗಾಯಿಸಬೇಕು. ಆಗ ಆಧಾರ್ ಗುರುತಿನ ಪತ್ರದ ಆಧಾರದ ಮೇಲೆ ಏಕಗವಾಕ್ಷಿ ಪದ್ಧತಿಯಡಿ ಅರ್ಹ ಮತ್ತು ಆರ್ಥಿಕ ಸಹಾಯ ಅವಶ್ಯವುಳ್ಳ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರೋತ್ಸಾಹಿಸಲು ಸಾಧ್ಯವಾಗುತ್ತದೆ. ಅಬಕಾರಿ ಸುಂಕದ ಮುಖೇನ ಮದ್ಯಪಾನೀಯಗಳ ಮೇಲೆ ಶೇ. 5ರಷ್ಟು ಉಪಕರ (ಸರ್‌ಚಾರ್ಜ್)ವನ್ನು ವಿಧಿಸಿ ವಸೂಲು ಮಾಡಿದ ವಾರ್ಷಿಕ 500 ಕೋಟಿ ರೂ. ಗಳನ್ನು ಪ್ರಾಧಿಕಾರದ ಕಾರ್ಯನಿರ್ವಹಣೆಗೆ ಅಗತ್ಯವಿರುವ ಆರಂಭಿಕ ನಿಧಿಯಾಗಿ ಸಂಗ್ರಹಿಸಬೇಕು.

3. ಕಾಲೇಜುಗಳಿಗೆ ಸ್ವಾಯತ್ತೆ ನೀಡುವುದು; ವಿದ್ಯಾರ್ಥಿಗಳ ಸಹಭಾಗಿತ್ವ ಹೆಚ್ಚಳ ಮಾಡುವುದು; ಆಡಳಿತ ಮತ್ತು ಮಾನ್ಯತೆ ನೀಡುವ ವ್ಯವಸ್ಥೆಯ ಬೇರ್ಪಡಿಸುವಿಕೆ; ಸಂಶೋಧನೆ ಮತ್ತು ನಾವೀನ್ಯತೆಗೆ ಪ್ರೋತ್ಸಾಹ; ಭೌಗೋಳಿಕ ಮಿತಿ–ನಿರ್ಬಂಧಗಳ ನಿವಾರಣೆ; ವಿದ್ಯಾಥಿಗಳಿಗೆ ಸ್ವಾತಂತ್ರ್ಯ ಮತ್ತು ಆಯ್ಕೆಯ ಅವಕಾಶ ; ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ತೀರ್ಮಾನ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಗೆ ಪ್ರಾತಿನಿಧ್ಯ; ಹೆಚ್ಚು ಅಂತರ್ ಮತ್ತು ಬಹುಶಿಸ್ತೀಯ ಅಧ್ಯಯನಕ್ಕೆ ಅವಕಾಶ ಕಲ್ಪಿಸುವ ಸಲುವಾಗಿ ಪರಸ್ಪರ ವಿಶ್ವವಿದ್ಯಾಲಯಗಳು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳ ನಡುವೆ ಸಮನ್ವಯ–ಸಹಕಾರ. ಇವೆಲ್ಲವೂ ಸಾಧ್ಯವಾಗಲು ಮತ್ತು 2020ರಲ್ಲಿ ಕರ್ನಾಟಕವನ್ನು ಜ್ಞಾನಾಧಾರಿತ ರಾಜ್ಯವನ್ನಾಗಿ ಮಾರ್ಪಡಿಸಲು ಪೂರಕವಾಗುವಂತೆ ಕರ್ನಾಟಕ ವಿಶ್ವವಿದ್ಯಾಲಯ ಕಾಯಿದೆ 2000ಕ್ಕೆ ಸಂಪೂರ್ಣ ತಿದ್ದುಪಡಿ ತರಬೇಕು.

   ಈ ಕಾಯಿದೆಗೆ ಪೂರಕವಾಗಿ ಉಪಕುಲಪತಿಗಳ ನೇಮಕ ಮತ್ತು ಇತರೆ ಸಾಂವಿಧಾನಿಕ ಹುದ್ದೆಗಳ ನೇಮಕ ಸಂಬಂಧ ಸ್ಪಷ್ಟ ಮಾರ್ಗಸೂಚಿಗಳನ್ನು ಸಿದ್ಧಪಡಿಸಬೇಕು. ಈ ಮಾರ್ಗಸೂಚಿ ಉಪಕುಲಪತಿಗಳು ಮತ್ತು ಸರಕಾರ ಕೈಗೊಳ್ಳುವ ನಾಮನಿರ್ದೇಶನಕ್ಕೂ ಸಂಬಂಧಪಟ್ಟಿರಬೇಕು.

4. ಮಹಿಳೆಯರು ಹೆಚ್ಚೆಚ್ಚು ಉನ್ನತ ಶಿಕ್ಷಣಕ್ಕೆ ಬರುವಂತೆ ಪ್ರೋತ್ಸಾಹಿಸುವ ಸಲುವಾಗಿ, ಹೆಚ್ಚು ಮಹಿಳಾ ಕಾಲೇಜುಗಳನ್ನು ತೆರೆದು, ವಿದ್ಯಾರ್ಥಿನಿ ನಿಲಯಗಳನ್ನು ಸ್ಥಾಪಿಸಿ, ಸೂಕ್ತ ವಿದ್ಯಾರ್ಥಿನಿ ವೇತನವನ್ನೂ ನೀಡಬೇಕು. ಸಾರಿಗೆ ಸೌಲಭ್ಯ ಮತ್ತು ಮಧ್ಯಾಹ್ನದ ಬಿಸಿಯೂಟ ಸೌಲಭ್ಯವನ್ನೂ ನೀಡಬೇಕು. ಒಟ್ಟು ದಾಖಲೀಕರಣ ಅನುಪಾತ ಶೇ. 35ನ್ನು ತಲುಪುವ ಉದ್ದೇಶದಿಂದ, ಮಹಿಳೆಯರು, ಅಲ್ಪಸಂಖ್ಯಾತರು, ಪರಿಶಿಷ್ಟ ವರ್ಗ–ಪಂಗಡ, ಹಿಂದುಳಿದ ವರ್ಗದವರು, ವಿಭಿನ್ನ ಸಾಮರ್ಥ್ಯವುಳ್ಳವರನ್ನು ಉನ್ನತ ಶಿಕ್ಷಣದತ್ತ

ಸೆಳೆಯಲು ಸಂಜೆ ಮತ್ತು ವಾರಾಂತ್ಯ ಕಾಲೇಜುಗಳು/ಸಂಸ್ಥೆಗಳನ್ನು ತೆರೆಯಬೇಕು. ಕೌಶಲ ಅಭಿವೃದ್ಧಿಯೂ ಸೇರಿದಂತೆ ವಿವಿಧ ಕೋರ್ಸ್‌ಗಳ ಸೌಲಭ್ಯ ಕಲ್ಪಿಸಬೇಕು.

5. ಸ್ವಾಯತ್ತ ಆಡಳಿತ ಸಂರಚನೆ ಮತ್ತು ಅಗತ್ಯದಷ್ಟು ಆರ್ಥಿಕ ಅನುದಾನ ನೀಡುವುದರೊಂದಿಗೆ ಜಿಲ್ಲಾ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಬೇಕು. ಅವು ಉತ್ತಮ ವಿದ್ಯಾರ್ಹತೆ ಮತ್ತು ಕೌಶಲ್ಯ ಹೊಂದಿದ ಮಾನವ ಸಂಪನ್ಮೂಲವನ್ನು ಸೃಷ್ಟಿಸುತ್ತವೆ. ಇದು ಜಿಲ್ಲೆಯಲ್ಲಿರುವ ಕೌಶಲ್ಯಪೂರ್ಣ ಮಾನವ ಸಂಪನ್ಮೂಲದ ಕೊರತೆಯನ್ನು ನೀಗಿಸುತ್ತದೆ. ಈ ಜಿಲ್ಲಾ ವಿಶ್ವವಿದ್ಯಾಲಯಗಳನ್ನು ಪ್ರಸ್ತುತ ಇರುವ ರಾಜ್ಯ ವಿಶ್ವವಿದ್ಯಾಲಯಗಳ ವ್ಯಾಪ್ತಿಗೆ ತರಬೇಕು. ಆಗ ರಾಜ್ಯ ವಿಶ್ವವಿದ್ಯಾಲಯಗಳು ರಾಜ್ಯ, ದೇಶ ಮತ್ತು ಜಾಗತಿಕ ಮಟ್ಟದಲ್ಲಿ ಉನ್ನತ ಶಿಕ್ಷಣ ಕ್ಷೇತ್ರದ ಅಗತ್ಯಗಳನ್ನು ಪೂರೈಸುವಲ್ಲಿ ಗಮನಹರಿಸಿದರೆ, ಜಿಲ್ಲಾ ವಿಶ್ವವಿದ್ಯಾಲಯಗಳು ಸ್ಥಳೀಯ ಅಗತ್ಯಗಳನ್ನು ಪೂರೈಸಲು ಉದ್ಯುಕ್ತವಾಗುತ್ತವೆ. ಸ್ಥಳೀಯವಾಗಿ ವಿವಿಧ ಜಿಲ್ಲೆಗಳಲ್ಲಿ ಲಭ್ಯವಿರುವ ಅವಕಾಶಗಳನ್ನು ಆಧರಿಸಿ ಕೋರ್ಸ್‌ಗಳನ್ನು ಇವು ರೂಪಿಸಿ ಪೂರೈಸುತ್ತವೆ. ಸಮುದಾಯ ಕಾಲೇಜುಗಳನ್ನು ಈ ಜಿಲ್ಲಾ ವಿಶ್ವವಿದ್ಯಾಲಯಕ್ಕೆ ಸಂಯೋಜಿಸಬೇಕು. ಸಮುದಾಯ ಕಾಲೇಜುಗಳಲ್ಲಿ ಅರ್ಹತೆ ಪಡೆದ ವಿದ್ಯಾರ್ಥಿಗಳನ್ನು ಲ್ಯಾಟರಲ್ ಎಂಟ್ರಿ ಮೂಲಕ ವಿಶ್ವವಿದ್ಯಾಲಯ ವ್ಯಾಪ್ತಿಗೆ ಸೇರಿಸಿಕೊಳ್ಳಬಹುದು. ಜಿಲ್ಲಾ ವಿಶ್ವವಿದ್ಯಾಲಯಗಳು ಕೃಷಿ, ರೇಷ್ಮೆಕೃಷಿ, ಗಣಿಗಾರಿಕೆ ಇತ್ಯಾದಿ ವಿಷಯಗಳ ಕುರಿತು ವೃತ್ತಿಪರ ಕೋರ್ಸ್‌ಗಳನ್ನು ಆರಂಭಿಸಿ, ಜಿಲ್ಲೆಯೊಳಗಿನ ಕಾರ್ಯಕ್ಷೇತ್ರದೊಂದಿಗೆ ನೇರವಾಗಿ ಸಂಪರ್ಕ ಕಲ್ಪಿಸಬಹುದು.

6. ಉನ್ನತ ಶಿಕ್ಷಣ ಇಲಾಖೆಗೆ ಆಯವ್ಯಯದಲ್ಲಿ ನೀಡುವ ಹಣದ ಪ್ರಮಾಣವನ್ನು ಜಿಎಸ್‌ಡಿಪಿಯ ಕನಿಷ್ಠ ಶೇ. 2ಕ್ಕೆ ಏರಿಸಬೇಕು ಹಾಗೂ ಒಟ್ಟೂ ಶೈಕ್ಷಣಿಕ ಬಜೆಟ್‌ನ ಶೇ. 30 ರಷ್ಟು ಹಣವನ್ನು ಉನ್ನತ ಶಿಕ್ಷಣಕ್ಕೆ ಮೀಸಲಿಡಬೇಕು.

7. ಉನ್ನತ ಶಿಕ್ಷಣ ವ್ಯಾಪ್ತಿಗೆ ಸಮಾಜದ ಎಲ್ಲ ವರ್ಗದವರನ್ನೂ ಸೆಳೆದುಕೊಳ್ಳುವ ಸಲುವಾಗಿ, ಸರಕಾರವು ಪ್ರಸ್ತುತ ಇರುವ ಕನಿಷ್ಠ ಶಿಕ್ಷಣ ಅರ್ಹತೆಯನ್ನು ಎಂಟನೇ ತರಗತಿಯ ಬದಲು 12ನೇ ತರಗತಿಗೆ ಹೆಚ್ಚಿಸಬೇಕು. ಸರಕಾರಿ ಸೇವೆಗೆ ಸೇರಲು ಕನಿಷ್ಠ 12ನೇ ತರಗತಿ ತನಕ ಓದಿರಬೇಕೆಂಬುದನ್ನು ಕಡ್ಡಾಯಗೊಳಿಸಬೇಕು.

8. ಉನ್ನತ ಶಿಕ್ಷಣದ ಎಲ್ಲ ಸಮಸ್ಯೆಗಳನ್ನು ಬಗೆಹರಿಸುವ ಸಂಸ್ಥೆಯಾಗಿ ರಾಜ್ಯ ಉನ್ನತ ಶಿಕ್ಷಣ ಮಂಡಳಿಯನ್ನು ಪುನಾರಚಿಸಬೇಕು. ಭಾರತ ಸರಕಾರದ ಎನ್‌ಸಿಎಚ್‌ಇಆರ್ ನ ವಿಧೇಯಕದಲ್ಲಿ ಗ್ರಹಿಸಿರುವಂತೆ ಈ ಮಂಡಳಿ ಒಂದು ಚಿಂತಕರ ಚಾವಡಿಯಾಗಿ ಕಾರ್ಯ ನಿರ್ವಹಿಸಬೇಕು. ಕರ್ನಾಟಕ ಮತ್ತು ಹೊರಗಿನ ಗಣ್ಯ ಶಿಕ್ಷಣ ತಜ್ಞರ ಸಮಿತಿಯನ್ನು ಈ ಕಾರ್ಯ ಸಾಧನೆಗಾಗಿ ರಚಿಸಬೇಕು.

9. ಪ್ರಯೋಗಾಲಯ, ಗ್ರಂಥಾಲಯ, ವಿದ್ಯಾರ್ಥಿ ನಿಲಯದಂಥ ಶೈಕ್ಷಣಿಕ ಮೂಲಭೂತ ಸೌಲಭ್ಯಗಳನ್ನು ಹೊಂದಲು ಹತ್ತು ವರ್ಷಗಳ ಕಾಲಾವಧಿಯ ಬಾಂಡ್‌ಗಳ ಮೂಲಕ ವಿಶ್ವವಿದ್ಯಾಲಯ ಹಣ ಸಂಗ್ರಹಿಸಬೇಕು. ಸರಕಾರವು ಈ ಬಾಂಡ್‌ಗಳಿಗೆ ಖಾತರಿ ನೀಡಬೇಕು. ಬಾಂಡ್‌ಗಳ ಮೇಲಿನ ಬಡ್ಡಿಯನ್ನು ವಿಶ್ವವಿದ್ಯಾಲಯ ತನ್ನ ಆರ್ಥಿಕ ಸಂಪನ್ಮೂಲ (ಶುಲ್ಕ ಸಂಗ್ರಹ ಇತ್ಯಾದಿ)ದಿಂದ ಭರಿಸಬೇಕು. ಬಾಂಡ್‌ಗಳು ಅವಧಿ ಪೂರೈಸಿದಾಗ ಆ ಮೂಲಹಣವನ್ನು ಸರಕಾರ ತನ್ನ ಬೊಕ್ಕಸದಿಂದ ಭರಿಸಬೇಕು. ಮುಂದಿನ ಐದು ವರ್ಷಗಳಲ್ಲಿ ಈ ಬಾಂಡ್‌ಗಳ ರೂಪದಲ್ಲಿ 5 ಸಾವಿರ ಕೋಟಿ ರೂ. ಗಳನ್ನು ಸಂಗ್ರಹಿಸಿ ಶೈಕ್ಷಣಿಕ ಉದ್ದೇಶಕ್ಕೆ ಬಳಸಬಹುದು. ಈ ಕ್ರಮದಿಂದ ಭಾರತದಲ್ಲೇ ಅತ್ಯುತ್ತಮ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ರಾಜ್ಯವೆಂಬ ಅಭಿದಾನಕ್ಕೆ ಕರ್ನಾಟಕ ಪಾತ್ರವಾಗಬಹುದು. ಹಲವು ವಿಶ್ವವಿದ್ಯಾಲಯಗಳು

ಬ್ಯಾಂಕುಗಳಲ್ಲಿ ಠೇವಣಿ ಇರಿಸಿವೆ. ಇದರ ಬದಲಿಗೆ ಈ ಠೇವಣಿ ಹಣವನ್ನು ಬಾಂಡ್‌ಗಳಲ್ಲಿ ವಿನಿಯೋಗಿಸಬಹುದು.

10. ಉನ್ನತ ಶಿಕ್ಷಣ ಇಲಾಖೆಯು ತನ್ನ ನೋಟದಲ್ಲಿ ಹೆಚ್ಚು ಸಮಕಾಲೀನತೆಯನ್ನು ಹೊಂದಲು ಒಂದು ಸಲಹಾ ಮಂಡಳಿಯನ್ನು ರಚಿಸಿಕೊಳ್ಳಬೇಕು. ಇದರಲ್ಲಿ ಒಳಗಿನ, ಹೊರಗಿನ ಮತ್ತು ಉದ್ಯಮದ ಪಾಲುದಾರರನ್ನೂ ಸದಸ್ಯರನ್ನಾಗಿ ಸೇರಿಸಿಕೊಳ್ಳಬೇಕು. ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ನೀತಿ ನಿರೂಪಣೆಗೆ ಕೆಲವು ವೃತ್ತಿಪರರನ್ನು ಸಲಹೆಗಾರರನ್ನಾಗಿ ನೇಮಿಸಿಕೊಳ್ಳುವುದು ಸೂಕ್ತ. ಕ್ರಮೇಣ ಅವರನ್ನು ಸರಕಾರದ ಸಂರಚನೆಯೊಳಗೆ ಸೇರಿಸಿಕೊಂಡರೆ, ಉನ್ನತ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಯೋಜನೆ ರೂಪಿಸುವ ಸಂದರ್ಭದಲ್ಲಿ ಅವರ ತಜ್ಞತೆ, ಅನುಭವ, ಸಲಹೆಯು ಲಭ್ಯವಾದೀತು. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿರುವ ಸಮರ್ಥರನ್ನೇ ಈ ಸ್ಥಾನಗಳಿಗೆ ಸಲಹೆಗಾರರನ್ನಾಗಿ ಹುಡುಕಿ ನೇಮಿಸಿಕೊಳ್ಳಬೇಕು.

References

1. **Deloitte (2012).**Deloitte Sector paper for Karnataka's 12th Five Year Plan (2012-17) for Karnataka Evaluation Authority, Planning, Programme Monitoring & Statistics Dept. GOK.
2. Deloitte (2012). Higher Education GER projections for Karnataka (report prepared for the Karnataka Jnana Aayoga (KJA), GOK.
3. **Kurup, A. *et.al.*** (2011) Executive Summary and Recommendations. Emerging Directions in Global Education (EDGE) forum.
4. **Kurup, A.** & **Jagdish,** A. (2007). Trends in Higher Education: Creation and Analysis of Database of PhDs in India. NIAS publications: Bangalore.
5. **Lavakare, *et.al.*** *(*2008) Executive Summary and Recommendations. Emerging Directions in Global Education (EDGE) forum.
6. **Karnataka State Higher Education Council** (*d.n.m).* Vision 2020 – Higher Education Karnataka. Institute of Printing Technology building: Bangalore (Draft report).
7. **FICCI (2009).** Making the Indian higher education system future ready: Report.
8. **Sarukkai, S (*n.d.m).*** Humanities Education in Karnataka: A draft note prepared for the Karnataka Knowledge Commission, Government of Karnataka.
9. **EUA (2007).** Creativity in higher education – A report. EUA: Belgium.
10. **NKC (2008).** Three years of NKC – A report.
11. **UGC (2012).** *Higher Education in India at a glance.* University Grants Commission: New Delhi (February 2012).

12. **MHRD (2011).** *Statistics of higher and technical education – 2009-2010 (provisional).* Ministry of Human Resource Development, Bureau for Planning, Monitoring and Statistics, Government of India: New Delhi.

13. **MHRD (2011).** *Faculty shortage and design of performance appraisal system,* Report of the Task Force. MHRD, GOI: New Delhi.

14. **Rama Rao. P and B.K. Anitha (2009).** Challenges in Higher Education in the Face of India's Demographic Ascendancy in B.V. Sreekantan (Ed.) *Science Technology and Society*, IIAS Publications, Shimla, India.

15. **Karnataka Jnana Aayoga (2011)**. A Study on Building a Knowledge Society in Karnataka.

ಕರ್ನಾಟಕ ಜ್ಞಾನ ಆಯೋಗದ ವಿವರ (ಜನವರಿ 2012 – ಜನವರಿ 2013)

ಅಧ್ಯಕ್ಷರು

ಡಾ. ಕೆ. ಕಸ್ತೂರಿ ರಂಗನ್
ಸದಸ್ಯರು – ಯೋಜನಾ ಆಯೋಗ
ನವದೆಹಲಿ

ಸದಸ್ಯ ಕಾರ್ಯದರ್ಶಿ ಮತ್ತು ಕಾರ್ಯ ನಿರ್ವಾಹಕ ನಿರ್ದೇಶಕರು

ಪ್ರೊ. ಎಂ.ಕೆ. ಶ್ರೀಧರ್ ಪಿ.ಎಚ್.ಡಿ.
ಪ್ರಾಧ್ಯಾಪಕರು, ಮ್ಯಾನೇಜ್‌ಮೆಂಟ್ ವಿಭಾಗ
ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಂಚಾಲಕರು

ಪ್ರಧಾನ ಕಾರ್ಯದರ್ಶಿಗಳು
ಉನ್ನತ ಶಿಕ್ಷಣ ಇಲಾಖೆ
ಕರ್ನಾಟಕ ಸರ್ಕಾರ
ಬೆಂಗಳೂರು

ಸದಸ್ಯರು

ಡಾ. ಎಂ.ಎಸ್. ತಿಮ್ಮಪ್ಪ
ವಿಶ್ರಾಂತ ಉಪಕುಲಪತಿಗಳು
ಬೆಂಗಳೂರು ವಿಶ್ವವಿದ್ಯಾಲಯ

ಪ್ರೊ. ಸುಂದರ್ ಸಾರುಕ್ಕೈ
ನಿರ್ದೇಶಕರು,
ಮಣಿಪಾಲ್ ಸೆಂಟರ್ ಫಾರ್ ಫಿಲಾಸಫಿ & ಹ್ಯೂಮಾನಿಟೀಸ್
ಮಣಿಪಾಲ ವಿಶ್ವವಿದ್ಯಾಲಯ, ಮಣಿಪಾಲ

ಪ್ರೊ. ಎಸ್. ಷಡಗೋಪನ್
ನಿರ್ದೇಶಕರು
ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಇನ್‌ಸ್ಟಿಟ್ಯೂಟ್
ಬೆಂಗಳೂರು

ಪ್ರೊ. ಪದ್ಮ ಸಾರಂಗಪಾಣಿ
ಪ್ರೊಫೆಸರ್ ಇನ್ ಎಜುಕೇಷನ್
ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸಸ್
ಮುಂಬಯಿ

ಡಾ. ಗುರುರಾಜ ಕರ್ಜಗಿ

ಅಧ್ಯಕ್ಷರು
ಅಕಾಡೆಮಿ ಫಾರ್ ಕ್ರಿಯೇಟಿವ್ ಟೀಚಿಂಗ್
ಬೆಂಗಳೂರು

ಟಿ.ವಿ. ಮೋಹನ್‌ದಾಸ್ ಪೈ

ಅಧ್ಯಕ್ಷರು
ಎಂಇಎಂಜಿ ಇಂಟರ್‌ನ್ಯಾಷನಲ್ ಇಂಡಿಯಾ ಲಿ.
ಬೆಂಗಳೂರು

ಡಾ. ರವಿ ನಾರಾಯಣ್

ಕಮ್ಯುನಿಟಿ ಹೆಲ್ತ್ ಕನ್ಸಲ್ಟೆಂಟ್
ಸೆಂಟರ್ ಫಾರ್ ಪಬ್ಲಿಕ್ ಹೆಲ್ತ್ & ಈಕ್ವಿಟಿ
ಬೆಂಗಳೂರು

ಶ್ರೀಮತಿ ಸೀತಾ ಲಕ್ಷ್ಮಿ ಚಿನ್ನಪ್ಪ

ನಿವೃತ್ತ ನಿರ್ದೇಶಕರು
ಐಸಿಎಂಆರ್, ಎನ್‌ಐಸಿ ಸೆಂಟರ್ ಫಾರ್ ಬಯೋಮೆಡಿಕಲ್ ಇನ್ಫರ್ಮೇಷನ್
ನ್ಯಾಷನಲ್ ಇನ್ಮಫರ್ಮೆಟಿಕ್ ಸೆಂಟರ್
ನವದೆಹಲಿ

ಪ್ರೊ. ಕೆ.ಆರ್.ಎಸ್. ಮೂರ್ತಿ

ನಿವೃತ್ತ ನಿರ್ದೇಶಕರು
ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್
ಬೆಂಗಳೂರು

ಡಾ. ಎಸ್.ಆರ್. ರಾಮಸ್ವಾಮಿ

ಕನ್ನಡದ ಪ್ರಸಿದ್ಧ ಲೇಖಕರು

ಡಾ. ಮುಕುಂದ್ ಕಾಡೂರುಶ್ರೀನಿವಾಸ ರಾವ್

ಇಂಟರ್‌ನ್ಯಾಷನಲ್ ಕನ್ಸಲ್ಟೆಂಟ್
ಇಒ, ಜಿಐಎಸ್ & ಸ್ಪೇಸ್

ಪದನಿಮಿತ್ತ ಸದಸ್ಯರು

ಪ್ರಧಾನ ಕಾರ್ಯದರ್ಶಿಗಳು
ಉನ್ನತ ಶಿಕ್ಷಣ ಇಲಾಖೆ
ಕರ್ನಾಟಕ ಸರಕಾರ

ಕಾರ್ಯದರ್ಶಿಗಳು
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ
ಕರ್ನಾಟಕ ಸರಕಾರ

ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಕರ್ನಾಟಕ ಸರಕಾರ

ಸದಸ್ಯರು (ಸೆಪ್ಟೆಂಬರ್ 2008 – ಸೆಪ್ಟೆಂಬರ್ 2011)

ಸದಸ್ಯರು

ಪ್ರೊ. ಕೆ. ಚಿದಾನಂದ ಗೌಡ
ವಿಶ್ರಾಂತ ಉಪಕುಲಪತಿಗಳು
ಕುವೆಂಪು ವಿಶ್ವವಿದ್ಯಾಲಯ
ಶಿವಮೊಗ್ಗ

ಪ್ರೊ. ವಿ.ಬಿ. ಕುಟಿನ್ಹೊ
ನಿರ್ದೇಶಕರು
ಕಾನೂನು ಅಧ್ಯಯನಗಳ ನಿರ್ದೇಶನಾಲಯ
ಬಾರ್ ಕೌನ್ಸಿಲ್ ಆಫ್ ಇಂಡಿಯಾ
ನವದೆಹಲಿ

ಪ್ರೊ. ನಯನ ತಾರಾ
ಪ್ರಾಧ್ಯಾಪಕರು–ಸಾರ್ವಜನಿಕ ವ್ಯವಸ್ಥೆಗಳು
ಭಾರತೀಯ ಪ್ರಬಂಧ ಸಂಸ್ಥೆ
ಬೆಂಗಳೂರು

ಪ್ರೊ. ರಾಮಚಂದ್ರ ಜಿ.ಭಟ್ ಕೋಟೆಮನೆ
ಪ್ರಾಂಶುಪಾಲರು
ವೇದ ವಿಜ್ಞಾನ ಶೋಧ ಸಂಸ್ಥಾನ
ಬೆಂಗಳೂರು

ಡಾ. ಆರ್. ನಾಗರತ್ನ
ಮುಖ್ಯ ವೈದ್ಯಕೀಯ ಅಧಿಕಾರಿಗಳು
ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ
ಬೆಂಗಳೂರು

ಡಾ. ಎಂ. ಮುನಿಯಮ್ಮ
ಕಾರ್ಯದರ್ಶಿಗಳು
ಕರ್ನಾಟಕದ ವಿಶ್ರಾಂತ ಉಪಕುಲಪತಿಗಳ ವೇದಿಕೆ
ಬೆಂಗಳೂರು

ಪ್ರೊ. ಎ. ಎಂ. ಪಠಾಣ್
ಉಪಕುಲಪತಿಗಳು
ಗುಲ್ಬರ್ಗ ಕೇಂದ್ರೀಯ ವಿಶ್ವವಿದ್ಯಾಲಯ
ಗುಲ್ಬರ್ಗ

ಡಾ. ಎಸ್. ಎಲ್. ಹಿರೇಮಠ
ಕುಲಸಚಿವರು
ಗುಲ್ಬರ್ಗ ವಿಶ್ವವಿದ್ಯಾಲಯ
ಗುಲ್ಬರ್ಗ

ಡಾ. ಬಿ.ಟಿ. ರುದ್ರೇಶ್
ಹೋಮಿಯೋಪತಿ ವೈದ್ಯರು
ಬೆಂಗಳೂರು

ಪದನಿಮಿತ್ತ ಸದಸ್ಯರು

ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು
ಕರ್ನಾಟಕ ಸರಕಾರ

ಪ್ರಧಾನ ಕಾರ್ಯದರ್ಶಿಗಳು
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ
ಕರ್ನಾಟಕ ಸರಕಾರ

ಪ್ರಧಾನ ಕಾರ್ಯದರ್ಶಿಗಳು
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ
ಕರ್ನಾಟಕ ಸರಕಾರ

ನಿರ್ದೇಶಕರು

ಭಾರತೀಯ ವಿಜ್ಞಾನ ಸಂಸ್ಥೆ

ಬೆಂಗಳೂರು

ವ್ಯವಸ್ಥಾಪಕ ನಿರ್ದೇಶಕರು

ಭಾರತೀಯ ಪ್ರಬಂಧ ಸಂಸ್ಥೆ

ಬೆಂಗಳೂರು

ನಿರ್ದೇಶಕರು

ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ

ಬೆಂಗಳೂರು

ನಿರ್ದೇಶಕರು

ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ

ಬೆಂಗಳೂರು

ನಿರ್ದೇಶಕರು

ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಅಡ್ವಾನ್ಸಡ್ ಸ್ಟಡೀಸ್

ಬೆಂಗಳೂರು

ಉಪಕುಲಪತಿಗಳು

ಕೃಷಿ ವಿಶ್ವವಿದ್ಯಾಲಯ

ಬೆಂಗಳೂರು

ಉಪಕುಲಪತಿಗಳು

ಬೆಂಗಳೂರು ವಿಶ್ವವಿದ್ಯಾಲಯ

ಬೆಂಗಳೂರು

ಉಪಕುಲಪತಿಗಳು

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

ಉಪಕುಲಪತಿಗಳು

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

ಬೆಳಗಾವಿ

ಉಪಕುಲಪತಿಗಳು

ಗುಲ್ಬರ್ಗ ವಿಶ್ವವಿದ್ಯಾಲಯ

ಗುಲ್ಬರ್ಗ

ಉಪಕುಲಪತಿಗಳು

ಮೈಸೂರು ವಿಶ್ವವಿದ್ಯಾಲಯ

ಮೈಸೂರು

ಉಪಕುಲಪತಿಗಳು

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ

ಬಿಜಾಪುರ

* * * * *

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು. ಕಾ.ಸೂ. 108 / ಪ್ರಿ5

ಕರ್ನಾಟಕ ಜ್ಞಾನ ಆಯೋಗ

ಕರ್ನಾಟಕ ಜ್ಞಾನ ಆಯೋಗದ ಕುರಿತು

ಕರ್ನಾಟಕ ಜ್ಞಾನ ಆಯೋಗ (ಕರ್ನಾಟಕ ನಾಲೆಡ್ಜ್ ಕಮಿಷನ್), ಸ್ವಾಯತ್ತೆಯುಳ್ಳ ಅಧಿಕಾರಯುತ ಸಂಸ್ಥೆ. ಕರ್ನಾಟಕ ಸರಕಾರವು 2008 ರ ಸೆಪ್ಟೆಂಬರ್ 5 ರಂದು ವಿಶ್ವದ ಹೆಸರಾಂತ ಬಾಹ್ಯಾಕಾಶ ವಿಜ್ಞಾನಿ ಡಾ. ಕೆ. ಕಸ್ತೂರಿರಂಗನ್ ಅವರ ಅಧ್ಯಕ್ಷತೆಯಲ್ಲಿ ಆಯೋಗವನ್ನು ರಚಿಸಿತು. ಕರ್ನಾಟಕವನ್ನು ಒಂದು ಸ್ಪಂದನಶೀಲ ಜ್ಞಾನಾಧಾರಿತ ಸಮಾಜವನ್ನಾಗಿ ಪರಿವರ್ತಿಸುವುದೇ ಆಯೋಗದ ಪ್ರಮುಖ ಗುರಿ ಮತ್ತು ಉದ್ದೇಶ. ಇದರ ಕಾರ್ಯಸಾಧನೆಗೆ ಆಯೋಗವು ಶ್ರೇಷ್ಠ ಶಿಕ್ಷಣ ತಜ್ಞರು, ಸರಕಾರದ ಕಾರ್ಯದರ್ಶಿಗಳು ಹಾಗೂ ಭಾಗೀದಾರರನ್ನು ಒಳಗೊಂಡ ಕೆಲವು ಕಾರ್ಯತಂಡಗಳನ್ನು, ಮಿಷನ್ ಗ್ರೂಪ್‌ಗಳನ್ನು ಮತ್ತು ಒಂದು ಕಾರ್ಯಪಡೆಯನ್ನು ರಚಿಸಿತು. ಅಧ್ಯಕ್ಷರ ದೂರದರ್ಶಿತ್ವದ ನಾಯಕತ್ವದಲ್ಲಿ ಆಯೋಗವು ಹಲವು ಸಲಹಾ ಸಭೆಗಳನ್ನು ನಡೆಸಿತಲ್ಲದೇ, 12 ವಲಯಗಳ ಅಭಿವೃದ್ಧಿಗೆ ಸಂಬಂಧಿಸಿದ 89 ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ಕರ್ನಾಟಕ ಸರಕಾರಕ್ಕೆ ಸಲ್ಲಿಸಿತು.

ವಿವಿಧ ಇಲಾಖೆಗಳ ಸಹಯೋಗದಲ್ಲಿ ಆಯೋಗವು, 10 ಯೋಜನಾ ವರದಿಗಳನ್ನು ಕೈಗೊಂಡಿತಲ್ಲದೇ, ತನ್ನ ಮಹಾತ್ವಾಕಾಂಕ್ಷೆಯ ಮತ್ತು ಜನಪ್ರಿಯ ಕಾರ್ಯಕ್ರಮಗಳಾದ ಜ್ಞಾನ ಫೆಲೋಶಿಪ್ ಹಾಗೂ ಜ್ಞಾನಶೋಧವನ್ನು ಆರಂಭಿಸಿತು. ಇದರೊಂದಿಗೆ ರಾಜ್ಯ ವಿಶ್ವವಿದ್ಯಾಲಯಗಳೊಂದಿಗೆ ಹಲವು ಹೊಸ ಉಪಕ್ರಮಗಳನ್ನು ಕೈಗೊಂಡಿತು. ಆಯೋಗವು 9 ಸಂಶೋಧನಾ ಅಧ್ಯಯನಗಳನ್ನು ಕೈಗೊಂಡಿತು. ಮೊದಲ ಬಾರಿಗೆ ಇಡೀ ರಾಜ್ಯವನ್ನೇ ಒಳಗೊಂಡು 'ಕರ್ನಾಟಕದಲ್ಲಿ ಜ್ಞಾನಾಧಾರಿತ ಸಮಾಜದ ನಿರ್ಮಾಣ'ದ ಬಗ್ಗೆ ಅಧ್ಯಯನ ನಡೆಸಿತಲ್ಲದೇ, 'ಕರ್ನಾಟಕ ಯುವ ಸಮುದಾಯದ ದೃಷ್ಟಿಕೋನ, ಆಕಾಂಕ್ಷೆ, ನಿರೀಕ್ಷೆಗಳು ಹಾಗೂ ಮನೋವೃತ್ತಿ' ಅಧ್ಯಯನದ ಮೂಲಕ ರಾಜ್ಯ ಯುವ ನೀತಿಯ ಅಗತ್ಯವನ್ನು ಪ್ರತಿಪಾದಿಸಿತು.

ಸ್ವಯಂ ಪ್ರೇರಣೆಯಿಂದಲೇ ಆಯೋಗವು ತನ್ನ ಕಾರ್ಯಗಳ ಮೌಲ್ಯಮಾಪನವನ್ನು ಬೆಂಗಳೂರಿನ ಪಬ್ಲಿಕ್ ಅಫೇರ್ಸ್ ಸೆಂಟರ್ ಗೆ ವಹಿಸಿತಲ್ಲದೇ, ಸೆಂಟರ್ ನೀಡಿದ ವರದಿಯನ್ನು ಕರ್ನಾಟಕ ಸರಕಾರಕ್ಕೆ ಸಲ್ಲಿಸಿತು ಮತ್ತು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿತು.

ತನ್ನ ನಾಲ್ಕೂವರೆ ವರ್ಷದ ಅವಧಿಯನ್ನು ಪೂರ್ಣಗೊಳಿಸುತ್ತಿರುವ ಸಂದರ್ಭದಲ್ಲಿ ಆಯೋಗವು, ಕರ್ನಾಟಕವನ್ನು ಜ್ಞಾನಾಧಾರಿತ ಸಮಾಜವನ್ನಾಗಿ ಪರಿವರ್ತಿಸುವಲ್ಲಿ ಕರ್ನಾಟಕ ಸರಕಾರವು ನೀಡಿದ ಬೆಂಬಲಕ್ಕೆ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಕರ್ನಾಟಕ ಜ್ಞಾನ ಆಯೋಗದ ಕಾರ್ಯಗಳ ಬಗ್ಗೆ ಸಂಪೂರ್ಣ ಮಾಹಿತಿ ಹಾಗೂ ಪ್ರಕಟಣೆಗಳಿಗೆ www.jnanaaayoga.in ಗೆ ಭೇಟಿ ಕೊಡಿ.

ಕರ್ನಾಟಕ ಜ್ಞಾನ ಆಯೋಗ, (ಕರ್ನಾಟಕ ನಾಲೆಡ್ಜ್ ಕಮಿಷನ್), ಕರ್ನಾಟಕ ಸರಕಾರ, ನಂ. 219,

ಎರಡನೇ ಮಹಡಿ, ವಿಧಾನಸೌಧ, ಡಾ. ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು